ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 3 ಶನಿವಾರ 2024

ಸಂಪುಟ: 44 | ಸಂಚಿಕೆ: 286 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಗುಂಪು ವಸತಿ ಯೋಜನೆ: ಸರ್ಕಾರದ ಅನುಮೋದನೆಗಾಗಿ ಮುಡಾದಿಂದ ಡಿಪಿಆರ್ ಸಲ್ಲಿಕೆ

ವಿಜಯನಗರ 4ನೇ ಹಂತದಲ್ಲಿ 181.33 ಕೋಟಿ ವೆಚ್ಚದ ವಿವಿಧ ಬಿಹೆಚ್‌ಕೆಯ 408 ಮನೆ ನಿರ್ಮಿಸಲು ಮುಂದಾದ ಪ್ರಾಧಿಕಾರ



ಮೈಸೂರು, ಫೆ. 2(ಆರ್‌ಕೆ)– ಬೆಂಗಳೂರನ್ನು ಹೊರತುಪಡಿಸಿದರೆ ಅತೀ ವೇಗವಾಗಿ ಬೆಳೆಯುತ್ತಿರುವ ಮೈಸೂರು ನಗರದ ಜನಸಂಖ್ಯೆಗನು ಗುಣವಾಗಿ ಸೂರು ಕಲ್ಪಿಸುವ ನಿಟ್ಟಿನಲ್ಲಿ ಗುಂಪು ವಸತಿ ಯೋಜನೆಯನ್ನು ಅನುಷ್ಠಾನಗೊಳಿಸಲು ಮುಡಾ ಮುಂದಾಗಿದೆ. ಬಹುಮಹಡಿ ಕಟ್ಟಡ ಗುಂಪು ವಸತಿ ಯೋಜನೆಗೆ ಡಿಪಿಆರ್ ತಯಾರಿಸಿರುವ ಪ್ರಾಧಿಕಾರವು ಜನವರಿ 30ರಂದು ಸರ್ಕಾರಕ್ಕೆ ಸಲ್ಲಿಸಿದ್ದು, ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿದೆ. ಮೈಸೂರಿನ ವಿಜಯನಗರ 4ನೇ ಹಂತ, 2ನೇ ಘಟ್ಟದ ಬಡಾವಣೆಯಲ್ಲಿ ಸಿಎ ಸೈಟ್ ಸಂಖ್ಯೆ 18,312 ಚ.ಮೀ. ಪ್ರದೇಶದಲ್ಲಿ 12 ಮಹಡಿಯ ಕಟ್ಟಡ ನಿರ್ಮಿಸಲು ಉದ್ದೇಶಿಸಲಾಗಿದೆ.

ಅದರಲ್ಲಿ ಒಟ್ಟು 408 ಮನೆಗಳನ್ನು 181.33 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿ ಕೈಗೆಟಕುವ ದರದಲ್ಲಿ ನಿಯಮಾನುಸಾರ ಫಲಾನುಭವಿಗಳಿಗೆ ಹಂಚಿಕೆ ಮಾಡಲು ಮುಡಾ ನಿರ್ಧರಿಸಿದೆ. ಕಟ್ಟಡದ 2 ಬ್ಲಾಕ್ 240 ಹಾಗೂ ಮತ್ತೊಂದು ಬ್ಲಾಕ್‌ನಲ್ಲಿ 168 ಮನೆಗಳನ್ನು ನಿರ್ಮಿಸಲು ಯೋಜಿಸಲಾಗಿದೆ. ಪಾರ್ಕಿಂಗ್, ಎಲೆಕ್ಟ್ರಿಸಿಟಿ, ಒಳಚರಂಡಿ, ಲಿಫ್ಟ್‌ಗಳು, ರಸ್ತೆ ಸಂಪರ್ಕ, ಕುಡಿಯುವ ನೀರು ಸೇರಿದಂತೆ ಮೂಲಸೌಲಭ್ಯ ಒದಗಿಸಿ ಸುಸಜ್ಜಿತ ● 7ನೇ ಪುಟಕ್ಕೆ

ಅಕ್ಕಿ ಬೆಲೆ ಏರಿಕೆಯಿಂದ ತತ್ತರಿಸಿರುವ ಜನರಿಗೆ ಮುಂದಿನ ವಾರ ಮಾರುಕಟ್ಟೆಗೆ ಬರುತ್ತಿದೆ

ಮೋದಿಯ 'ಭಾರತ್ ರೈಸ್'; ಬೆಲೆ ಕೆಜಿಗೆ ಬರೀ 29 ರೂ.

● 5, 10 ಕೆಜಿ ಬ್ಯಾಗ್‌ನಲ್ಲಿ ಲಭ್ಯ ● ಮೊದಲ ಹಂತದಲ್ಲಿ 5 ಲಕ್ಷ ಟನ್ ಮಾರಾಟ



ನವದೆಹಲಿ, ಫೆ.2– ಮುಕ್ತ ಮಾರುಕಟ್ಟೆಯಲ್ಲಿ ಅಕ್ಕಿ ಬೆಲೆಯಲ್ಲಿ ಭಾರೀ ಏರಿಕೆಯಾಗುತ್ತಿರುವುದನ್ನು ನಿಯಂತ್ರಿಸಲು ಕೇಂದ್ರ ಸರ್ಕಾರ ಸಿದ್ಧವಾಗಿದೆ. 'ಭಾರತ್ ರೈಸ್' ಹೆಸರಿನಲ್ಲಿ ಪ್ರತಿ ಕೆ.ಜಿ.ಗೆ 29 ರೂ. ದರದಲ್ಲಿ ಮಾರಾಟ ಮಾಡಲು ನಿರ್ಧರಿಸಿದೆ. ಇದು ದೇಶದಲ್ಲಿ ಕ್ರಾಂತಿಯನ್ನೇ ಉಂಟು ಮಾಡಲಿದೆ

ಮುಂದಿನ ವಾರದಿಂದಲೇ ಭಾರತ್ ರೈಸ್ ಮಾರಾಟ ಆರಂಭವಾಗಲಿದೆ ಎಂದು ಕೇಂದ್ರ ಆಹಾರ ಸಚಿವಾಲಯದ ಕಾರ್ಯದರ್ಶಿ ಸಂಜೀವ್ ಚೋಪ್ರಾ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಬಹಿರಂಗಪಡಿಸಿದರು. ದೇಶದಲ್ಲಿ ಅಕ್ಕಿಯ ಬೆಲೆ ತೀವ್ರವಾಗಿ ಏರಿಕೆಯಾಗಿರುವಾಗ ಈ ನಿರ್ಧಾರ ಮಧ್ಯಮ ವರ್ಗದವರಿಗೆ ನೆಮ್ಮದಿ ನೀಡಲಿದೆ. ಅಕ್ಕಿ ರಫ್ತು ನಿಷೇಧದ ಹೊರತಾಗಿಯೂ, ಬೆಲೆಗಳು 15 ಪ್ರತಿಶತದಷ್ಟು ಹೆಚ್ಚಾಗಿದೆ. ನ್ಯಾಷನಲ್ ಅಗ್ರಿಕಲ್ಚರ್ ಕೋಆಪರೇಟಿವ್ ಮಾರ್ಕೆಟಿಂಗ್ ಫೆಡರೇಶನ್ ಆಫ್ ಇಂಡಿಯಾ ಲಿಮಿಟೆಡ್ (ನ್ಯಾಫೆಡ್), ನ್ಯಾಷನಲ್ ಕೋಆಪರೇಟಿವ್ ಕನ್ಸೂಮರ್ಸ್ ಫೆಡರೇಶನ್ ಆಫ್ ಇಂಡಿಯಾ ಲಿಮಿಟೆಡ್ (ಎನ್‌ಸಿಸಿಎಫ್) ಮತ್ತು ಕೇಂದ್ರೀಯ ಭಂಡಾರ್ ಚಿಲ್ಲರೆ ಕೇಂದ್ರಗಳು ಅಕ್ಕಿ ಮಾರಾಟ ಮಾಡುವುದಾಗಿ ಬಹಿರಂಗಪಡಿಸಿವೆ. ಭಾರತ್ ರೈಸ್ ಇ–ಕಾಮರ್ಸ್ ವೇದಿಕೆಯಾಗಿಯೂ ಲಭ್ಯವಿದೆ ಎಂದು ಚೋಪ್ರಾ ಹೇಳಿದರು.

5 ಕೆಜಿ ಮತ್ತು 10 ಕೆಜಿ ಚೀಲಗಳಲ್ಲಿ 'ಭಾರತ್ ರೈಸ್' ● 7ನೇ ಪುಟಕ್ಕೆ

ಕಲ್ಲು ಒಡೆದು ಲೂಟಿ ಮಾಡಿದವರು ದೇಶ ಕಟ್ಟುತ್ತಾರೆಯೇ...!?

■ ಸಂಸದ ಡಿ.ಕೆ.ಸುರೇಶರ ದಕ್ಷಿಣ ಭಾರತ ಪ್ರತ್ಯೇಕ ದೇಶ ಹೇಳಿಕೆಗೆ ಮಾಜಿ ಸಿಎಂ ಕುಮಾರಸ್ವಾಮಿ ತೀಕ್ಷ್ಣ ಪ್ರತಿಕ್ರಿಯೆ
■ ಭಾರತ ಒಂದಾಗಿರಬೇಕು ಎಂದು ಭಾರತ್ ಜೋಡೋ ಯಾತ್ರೆ ಮಾಡಿದವರೇ ಭಾರತ್ ತೋಡೋ ಎನ್ನುತ್ತಿದ್ದಾರೆ!



ಬೆಂಗಳೂರು, ಫೆ.2(ಕೆಎಂಶಿ)– ಭಾರತ ಒಂದಾಗಿರಬೇಕು ಎಂದು ಭಾರತ್ ಜೋಡೋ ಯಾತ್ರೆ ಮಾಡಿದವರೇ ಇವತ್ತು ಭಾರತ್ ತೋಡೋ ಎನ್ನುತ್ತಾರೆ, ದೇಶ ಇಬ್ಭಾಗ ಮಾಡುವ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ಇಂದಿಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಟೀಕಾ ಪ್ರಹಾರ ನಡೆಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಕ್ಷಿಣ ಭಾರತ ಪ್ರತ್ಯೇಕ ರಾಷ್ಟ್ರದ ಬಗ್ಗೆ ಸಂಸದ ಡಿ.ಕೆ.ಸುರೇಶ್ ಅವರು ನೀಡಿರುವ ಹೇಳಿಕೆ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದರು. ಇಲ್ಲಿ ಕಲ್ಲು ಒಡೆದು ಲೂಟಿ ಮಾಡಿಕೊಂಡು ಇದ್ದೋರನ್ನು ಲೋಕಸಭೆಗೆ ಕಳುಹಿಸಿದರೆ ಇನ್ನೇನಾಗುತ್ತದೆ. ಬಡ ಜನರನ್ನು ಲೂಟಿ ಮಾಡಿಕೊಂಡು ಆಸ್ತಿ ಗುಡ್ಡೆ ಮಾಡಿದ್ದಾರೆ. ಅಂತಹವರನ್ನು ತೆಗೆದುಕೊಂಡು ಹೋಗಿ ದೇಶ ಕಟ್ಟು ಅಂತ ಕಳುಹಿಸಿದರೆ ಕಟ್ಟುತ್ತಾರೆಯೇ, ಅವರ ಸಾಮ್ರಾಜ್ಯ ಕಟ್ಟಿಕೊಳ್ತಾರೆ ಅಷ್ಟೇ. ಇವರಿಂದ ಇನ್ನೇನು ನಿರೀಕ್ಷೆ ಮಾಡಲು ಸಾಧ್ಯ ಎಂದು ಅವರು ಟಾಂಗ್ ನೀಡಿದರು. ಕೇಂದ್ರ ಸರ್ಕಾರದ ಮುಂದೆ ನಮ್ಮ ಬೇಡಿಕೆಗಳನ್ನು ಸಂಘರ್ಷದಿಂದ ಈಡೇರಿಸಿಕೊಳ್ಳಲು ಸಾಧ್ಯವಿಲ್ಲ. ವಾಸ್ತವವನ್ನು ಅವರಿಗೆ ಮನವರಿಕೆ ಮಾಡಿಕೊಡಬೇಕು. ಅವರನ್ನು ಒಪ್ಪಿಸಿ, ಹಣ ಪಡೆಯಬೇಕು. ಅದನ್ನು ಬಿಟ್ಟು ಇವರ ಬಾಲಿಷ ಹೇಳಿಕೆಗಳಿಂದ ಸಮಸ್ಯೆ ಬಗೆಹರಿಯಲ್ಲ ಎಂದು ಸಂಸದ ಸುರೇಶ್ ಅವರನ್ನು ತರಾಟೆಗೆ ● 7ನೇ ಪುಟಕ್ಕೆ

ಕುಮಾರಸ್ವಾಮಿ ಕೇಸರಿ ಶಾಲು ಹಾಕಬಾರದಿತ್ತು

ಪುತ್ರನ ನಡೆ ಖಂಡಿಸಿದ ಮಾಜಿ ಪ್ರಧಾನಿ ದೇವೇಗೌಡ



ನವದೆಹಲಿ, ಫೆ.2– ಇತ್ತೀಚೆಗೆ ರಾಜ್ಯದಲ್ಲಿ ಭಾರಿ ಸದ್ದು ಮಾಡಿದ್ದ ಮಂಡ್ಯ ತಾಲೂಕಿನ ಕೆರಗೋಡ ಗ್ರಾಮದ ಹನುಮಧ್ವಜ ತೆರವು ವಿವಾದಕ್ಕೆ ಸಂಬಂಧಿಸಿದಂತೆ ಬಿಜೆಪಿ ಪ್ರತಿಭಟನೆ ವೇಳೆ ಜೆಡಿಎಸ್ ರಾಜ್ಯಾಧ್ಯಕ್ಷ, ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರು ಕೇಸರಿ ಶಾಲು ಹಾಕಿದ್ದಕ್ಕೆ ಸ್ವತಃ ಅವರ ತಂದೆ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಶುಕ್ರವಾರ ಖಂಡಿಸಿದ್ದಾರೆ.

ಇಂದು ಈ ಬಗ್ಗೆ ದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಜೆಡಿಎಸ್ ವರಿಷ್ಠ, ಕುಮಾರಸ್ವಾಮಿ ಕೇಸರಿ ಶಾಲು ಹಾಕಬಾರದಿತ್ತು, ನಮ್ಮ ಪಕ್ಷದ ಶಾಲು ಹಾಕಬಹುದಿತ್ತು ಎಂದು ಹೇಳಿದ್ದಾರೆ. ಈ ಮೂಲಕ ಕುಮಾರಸ್ವಾಮಿ ಕೇಸರಿ ಶಾಲು ಹಾಕಿರುವುದನ್ನು ಪರೋಕ್ಷವಾಗಿ ಖಂಡಿಸಿದ್ದಾರೆ. ನಾಳೆ ನರೇಂದ್ರ ಮೋದಿ ಜೊತೆಗೆ ಹೋದಾಗಲೂ ನನ್ನ ಪಕ್ಷದ ಶಾಲು ಹಾಕುತ್ತೇನೆ. ನಾನು ಖಂಡಿತವಾಗಿ ಕೇಸರಿ ಶಾಲು ಹಾಕುವುದಿಲ್ಲ ಎಂದು ಕಡ್ಡಿ ಮುರಿದಂತೆ ಹೇಳಿದರು.

ಸಿಎಂ ತವರು ಜಿಲ್ಲೆಯಲ್ಲಿ ವರ್ಗಾವಣೆ ಹಾವು–ಏಣಿಯಾಟ

ಮುಡಾ ಆಯುಕ್ತರ ವರ್ಗಾವಣೆ ರದ್ದು

ಆಯುಕ್ತರಾಗಿ ದಿನೇಶ್‌ಕುಮಾರ್ ಮುಂದುವರಿಕೆ



ದಿನೇಶ್‌ಕುಮಾರ್

ಮೈಸೂರು, ಫೆ.2(ಆರ್‌ಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ವರ್ಗಾವಣೆ ರದ್ದಾಗಿದೆ. ನಿನ್ನೆಯಷ್ಟೇ ಅವರ ವರ್ಗಾವಣೆ ಮಾಡಿ, ಅವರ ಸ್ಥಾನಕ್ಕೆ ಆರ್ಥಿಕ ಇಲಾಖೆ ಉಪಕಾರ್ಯದರ್ಶಿ ಅರುಳ್‌ಕುಮಾರ್ ಅವರನ್ನು ನಿಯೋಜಿಸಿ ಸರ್ಕಾರ ಆದೇಶ ಹೊರಡಿಸಿತ್ತು. ಕೇವಲ 24 ಗಂಟೆಯೊಳಗೆ ಈ ಆದೇಶವನ್ನು ರದ್ದುಪಡಿಸಲಾಗಿದೆ. ಹೀಗಾಗಿ ದಿನೇಶ್‌ಕುಮಾರ್ ಮುಡಾ ಆಯುಕ್ತರಾಗಿ ಮುಂದುವರೆದಿದ್ದಾರೆ.

ಹಿಂದಿನ ಆದೇಶದಂತೆ ಇಂದು ಬೆಳಗ್ಗೆ 10.30 ಗಂಟೆಗೆ ಅರುಳ್‌ಕುಮಾರ್ ಅವರು ಮುಡಾ ಆಯುಕ್ತರಾಗಿ ಅಧಿಕಾರ ವಹಿಸಿಕೊಳ್ಳಬೇಕಾಗಿತ್ತು. ಆದರೆ, ಈ ಬಗ್ಗೆ ಮುಡಾ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಅವರಿಗಾಗಲೀ ಅಥವಾ ಮುಡಾದ ಅಧಿಕಾರಿಗಳಿಗಾಗಲೀ ಯಾವುದೇ ಮಾಹಿತಿ ಇರಲಿಲ್ಲ. ಅಲ್ಲದೇ, ಜಿ.ಟಿ. ದಿನೇಶ್‌ಕುಮಾರ್ ಎಂದಿನಂತೆ ಇಂದು ಬೆಳಗ್ಗೆ ಕಚೇರಿಗೆ ಬಂದು ಸಂಜೆವರೆಗೂ ಕೆಲಸ ನಿರ್ವಹಿಸಿದರು. ವರ್ಗಾವಣೆ ಆದೇಶ ಹೊರ ಬಿದ್ದ ಕಾರಣ ಕೆಲವರು ಜಿ.ಟಿ.ದಿನೇಶ್‌ಕುಮಾರ್ ಬೀಳ್ಕೊಡುಗೆ ನೀಡಲು ಹೂಗುಚ್ಛಗಳೊಂದಿಗೆ ಮುಡಾ ಕಚೇರಿಗೆ ಧಾವಿಸಿದರಾದರೂ ಕಚೇರಿಯಲ್ಲಿದ್ದ ಆಯುಕ್ತರು, ನಾನು ಇದೇ ಹುದ್ದೆಯಲ್ಲಿ ಕೆಲ ದಿನ ಮುಂದುವರೆಯುತ್ತೇನೆ ಎಂದು ಹೇಳಿ, ಕಳುಹಿಸಿದರು.

ಸಂಜೆ ವೇಳೆಗೆ ಅರುಳ್‌ಕುಮಾರ್ ಅವರನ್ನು ಮುಡಾ ಆಯುಕ್ತರನ್ನಾಗಿ ವರ್ಗಾವಣೆ ಮಾಡಿದ್ದ ಫೆಬ್ರವರಿ 1ರ ಆದೇಶವನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಲಾಗಿದೆ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಅಧೀನ ಕಾರ್ಯದರ್ಶಿ ಉಮಾದೇವಿ ಅಧಿಸೂಚನೆ ಹೊರಡಿಸಿದರು. ನಿನ್ನೆ ಅರುಳ್ ಕುಮಾರ್ ಅವರನ್ನು ಮುಡಾ ಆಯುಕ್ತರನ್ನಾಗಿ ವರ್ಗಾವಣೆ ಮಾಡಿದ್ದರೂ ಇಲ್ಲಿದ್ದ ದಿನೇಶ್‌ಕುಮಾರ್ ಅವರಿಗೆ ಯಾವುದೇ ಸ್ಥಳ ತೋರಿಸಿರಲಿಲ್ಲ. ● 2ನೇ ಪುಟಕ್ಕೆ

ರಾಜ್ಯದ ವಿಷಯದಲ್ಲಿ ಕೇಂದ್ರದ ಮಲತಾಯಿ ಧೋರಣೆ ಖಂಡಿಸಿ

ಫೆ.7ರಂದು ನವದೆಹಲಿಯಲ್ಲಿ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಧರಣಿ

● ಡಿಸಿಎಂ, ಸಚಿವರು, ಶಾಸಕರು ಪಾಲ್ಗೊಳ್ಳಲಿದ್ದಾರೆ ● ಭೀಕರ ಬರ ಸಂದರ್ಭದಲ್ಲಿ ನಯಾ ಪೈಸೆ ಪರಿಹಾರ ಕಲ್ಪಿಸಿಲ್ಲ ● ಕೇಂದ್ರದ ಧೋರಣೆಯನ್ನು ರಾಷ್ಟ್ರದ ಗಮನಕ್ಕೆ ತರುವ ಉದ್ದೇಶ ● ಆ ಮೂಲಕ ಬಿಜೆಪಿಗೂ ಎದಿರೇಟು ನೀಡುವ ಪ್ಲಾನ್ ● ಮಮತಾ, ಕೇಜ್ರಿವಾಲ್ ನಂತರ ಈಗ ಸಿದ್ದರಾಮಯ್ಯ ಸರದಿ

ಬೆಂಗಳೂರು, ಫೆ.2(ಕೆಎಂಶಿ)– ಕೇಂದ್ರ ಸರ್ಕಾರದ ಮಲತಾಯಿ ಧೋರಣೆ ವಿರೋಧಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಫೆ.7ರಂದು ನವದೆಹಲಿಯಲ್ಲಿ ಪ್ರತಿಭಟನೆ ನಡೆಸಲಿದೆ.

ರಾಜ್ಯದಲ್ಲಿ ತಲೆದೋರಿರುವ ಭೀಕರ ಬರಕ್ಕೆ ಪರಿಹಾರ ನೀಡದಿರುವುದು ಸೇರಿದಂತೆ ಕೇಂದ್ರ ಸರ್ಕಾರ ಎಲ್ಲಾ ಹಂತದಲ್ಲೂ ಕರ್ನಾಟಕವನ್ನು ಕಡೆಗಣಿಸುತ್ತಿದೆ ಎಂದು ಕೇಂದ್ರದ ಗಮನ ಸೆಳೆಯಲು ಒಂದು ದಿನದ ಧರಣಿ ಮತ್ತು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಮುಖ್ಯಮಂತ್ರಿ ಜೊತೆ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಸಂಪುಟದ ಎಲ್ಲಾ ಸಹೋದ್ಯೋಗಿಗಳು ಹಾಗೂ ಕಾಂಗ್ರೆಸ್‌ನ ಎಲ್ಲಾ ಶಾಸಕರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಪ್ರತಿಭಟನೆ ಮೂಲಕ ಕೇಂದ್ರ ಸರ್ಕಾರ ರಾಜ್ಯಕ್ಕೆ ಮಾಡುತ್ತಿರುವ ಅನ್ಯಾಯವನ್ನು ಇಡೀ ● 7ನೇ ಪುಟಕ್ಕೆ



> “ ರೈತರ ಕೃಷಿ ಉತ್ಪನ್ನಗಳನ್ನು ಖರೀದಿಸಲು ನೀಡುವ ಬೆಂಬಲ ಬೆಲೆ ಯೋಜನೆಯಡಿ 1,800 ಕೋಟಿ ರೂ.ಗಳನ್ನು ಇದುವರೆಗೆ ನೀಡಿಲ್ಲ, ಇದೇ ರೀತಿ ರಾಜ್ಯದಲ್ಲಿ ಜಾರಿಯಾಗುವ ಕೇಂದ್ರದ ಯೋಜನೆಗಳಿಗೆ ನೀಡುವ ಪಾಲನ್ನು ಕಡಿಮೆ ಮಾಡಲಾಗಿದ್ದು ಶೇಕಡಾ 10 ಮತ್ತು 25ಕ್ಕೆ ಇಳಿಸಲಾಗಿದೆ.ಕೇಂದ್ರದ ಪ್ರಾಯೋಜಿತ ಯೋಜನೆಗಳಿಗೆ ಈ ಮೊದಲು ಶೇ.75ರಷ್ಟು ಹಣವನ್ನು ನೀಡಲಾಗುತ್ತಿತ್ತು ಉಳಿದ ಶೇ.25ನ್ನು ರಾಜ್ಯ ಸರ್ಕಾರಗಳು ಭರಿಸುತ್ತಿದ್ದವು. ನಂತರದ ದಿನಗಳಲ್ಲಿ ಶೇ.50ಕ್ಕೆ ನಿಂತಿತು, ಇದೀಗ ಕೇವಲ ಶೇ.10ರಷ್ಟು ಮಾತ್ರ ಭರಿಸುತ್ತಿದೆ.

ಮೈಸೂರು ಪಾಲಿಕೆ ಅಧಿಕಾರಿಗಳ ಮತ್ತೊಂದು ಎಡವಟ್ಟಿನಿಂದ ಸರಣಿ ಅಪಘಾತ

ಅವೈಜ್ಞಾನಿಕ ರೋಡ್ ಹಂಪ್ಸ್ ತೆಗೆದು ಹಳ್ಳ ತೋಡಿದರು!

● ಮೈಸೂರಿನ ಆಯಿಷ್ ಮುಂಭಾಗ ವಾಹನ ಚಾಲಕರ ಪರಿಪಾಟಲು ● ಮುಖ್ಯಮಂತ್ರಿ ಸಿದ್ದರಾಮಯ್ಯ ತವರಲ್ಲಿ 'ಕಾರ್ಯತತ್ಪರತೆ' ಉಳ್ಳ ಅಧಿಕಾರಿಗಳ ಅಭಾವ! ● ಕಾಟಾಚಾರ ಎಂಬಂತೆ ಹಂಪ್ಸ್ ತೆಗೆದರು; ಯಾರ ಮೇಲ್ವಿಚಾರಣೆ ಇಲ್ಲ ● ಜೆಸಿಬಿ ಚಾಲಕನಿಗೆ ಹೇಳಿ ಕೈ ತೊಳೆದುಕೊಂಡ ಅಧಿಕಾರಿಗಳು



ಮೈಸೂರು, ಫೆ.2(ಬಿಎಲ್‌ಯು)– ಮೈಸೂರು ನಗರ ಪಾಲಿಕೆ ಅಧಿಕಾರಿಗಳು ಏನೇ ಮಾಡಿದರೂ ಎಡವಟ್ಟು, ಮೈಸೂರಿನ ಆಯಿಷ್ ಮುಂಭಾಗ ನಿರ್ಮಿಸಿದ್ದ ಅವೈಜ್ಞಾನಿಕ ರೋಡ್ ಹಂಪ್ಸ್ ಏನೋ ತೆರವುಗೊಳಿಸಿದರು. ಆದರೆ ಆ ಜಾಗದಲ್ಲಿ ಹಳ್ಳ ತೋಡಿ ಮತ್ತೊಂದು ಅನಾಹುತಕ್ಕೆ ದಾರಿ ಮಾಡಿ ಕೊಟ್ಟಿದ್ದಾರೆ. ಮೈಸೂರಿನ ಬೋಗಾದಿ ರಸ್ತೆಯ ಕುಕ್ಕರಹಳ್ಳಿ ಕೆರೆ ಜಂಕ್ಷನ್‌ನಿಂದ ಆಯಿಷ್ ಜಂಕ್ಷನ್ ತನಕ ಅವೈಜ್ಞಾನಿಕ ರೋಡ್ ಹಂಪ್ಸ್ ನಿರ್ಮಾಣ ಮಾಡಿದ ಪರಿಣಾಮ ಮೂವರು ಅಮಾಯಕರ ಜೀವ ಹೋಯಿತು. ಹತ್ತಾರು ಜನರು ಗಾಯಗೊಂಡರು.

ಈ ಬಗ್ಗೆ 'ಮೈಸೂರು ಮಿತ್ರ' ವರದಿ ನಂತರ ಮಾನಸ ಗಂಗೋತ್ರಿಯ ಪ್ರವೇಶ ದ್ವಾರದ ಬಳಿಯ ಅವೈಜ್ಞಾನಿಕ ರೋಡ್ ಹಂಪ್ಸ್ ತೆಗೆದು ಅಲ್ಲಿ ಬಿಳಿ ಪಟ್ಟೆ ಹಾಕಿದ್ದಾರೆ. ಅಲ್ಲಿ ಸಂಚಾರಿ ಪೊಲೀಸರ ಮುತುವರ್ಜಿಯಿಂದ ವ್ಯವಸ್ಥೆ ಸುಧಾರಿಸಿದೆ.

ಆದರೆ ಆಯಿಷ್ ಮುಂಭಾಗ ನಿರ್ಮಾಣ ಮಾಡಿದ್ದ ಅವೈಜ್ಞಾನಿಕ ರೋಡ್ ಹಂಪ್ಸ್ ತೆರವುಗೊಳಿಸುವಾಗ ಹಳ್ಳ ತೋಡಿ, ನಗರ ಪಾಲಿಕೆ ಅಧಿಕಾರಿಗಳು ಮತ್ತೊಂದು ರೀತಿಯ ಅವಘಡಕ್ಕೆ ಆಸ್ಪದ ಮಾಡಿಕೊಟ್ಟಿದ್ದಾರೆ.

ಆಯಿಷ್ ಮುಂಭಾಗ ರೋಡ್ ಹಂಪ್ಸ್ ತೆಗೆಯಲು ಜೆಸಿಬಿ ಚಾಲಕನಿಗೆ ಹೇಳಿ ಅಧಿಕಾರಿಗಳು ಕೈ ತೊಳೆದುಕೊಂಡಿದ್ದಾರೆ. ಜೆಸಿಬಿ ಚಾಲಕ ರೋಡ್ ಹಂಪ್ಸ್ ತೆಗೆಯುವುದರ ಜೊತೆಗೆ ● 2ನೇ ಪುಟಕ್ಕೆ

ಕೆಟ್ಟ ಮೇಲೆ ಪಾಲಿಕೆಗೆ ಬುದ್ಧಿ ಬಂತು: ಕೊನೆಗೂ ರೋಡ್ ಹಂಪ್ಸ್‌ಗಳಿಗೆ ಬಿಳಿ ಬಣ್ಣ ಭಾಗ್ಯ

ಬೋಗಾದಿ ರಸ್ತೆಯಲ್ಲಿ ಅವೈಜ್ಞಾನಿಕ ಹಂಪ್ಸ್‌ಗೆ ಮೂವರು ಬಲಿಯಾದ ಪ್ರಕರಣದಿಂದ ಎಚ್ಚೆತ್ತ ಪಾಲಿಕೆ

ಮೈಸೂರು,ಫೆ.2(ಎಂಟಿವೈ)– ಬೋಗಾಧಿ ರಸ್ತೆಯಲ್ಲಿ ಅವೈಜ್ಞಾನಿಕ ಹಂಪ್ಸ್‌ಗೆ ಮೂವರು ಬಲಿಯಾದ ಪ್ರಕರಣದಿಂದ ಕೊನೆಗೂ ಪಾಲಿಕೆಗೆ ಜ್ಞಾನೋದಯವಾಗಿದ್ದು, ಮೈಸೂರಿನ ವಿವಿಧ ರಸ್ತೆಗಳಲ್ಲಿರುವ ಹಂಪ್ಸ್‌ಗಳಿಗೆ ಬಿಳಿ ಬಣ್ಣ ಬಳಿದು ವಾಹನ ಸವಾರರ ಗಮನ ಸೆಳೆಯಲು ಮುಂದಾಗಿದೆ.

ಮೈಸೂರು–ಬೋಗಾಧಿ ರಸ್ತೆಯಲ್ಲಿ ಮಾನಸ ಗಂಗೋತ್ರಿಯಿಂದ ಸ್ಪೀಚ್ ಅಂಡ್ ಹಿಯರಿಂಗ್ ರಸ್ತೆ ಜಂಕ್ಷನ್ ವರೆಗೆ ರಾತ್ರೋರಾತ್ರಿ ಹಂಪ್ಸ್ ಹಾಕಿದ್ದರಿಂದ 30ಕ್ಕೂ ಹೆಚ್ಚು ಅಪಘಾತ ಸಂಭವಿಸಿ, ಮೂವರು ವಾಹನ ಸವಾರರು ಬಲಿಯಾಗಿದ್ದರು. ಈ ಘಟನೆ ವಿರುದ್ಧ ವ್ಯಾಪಕ ಖಂಡನೆ ವ್ಯಕ್ತವಾಗಿ ಹಂಪ್ಸ್ ಹಾಕಿದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರು ಆಗ್ರಹಿಸಿದ್ದರು. ಈ ಹಿನ್ನೆಲೆಯಲ್ಲಿ ಮೂವರ ಸಾವಿನ ಬಳಿಕ ಕೊನೆಗೂ ಪಾಲಿಕೆ ಜ್ಞಾನೋಧಯವಾಗಿದ್ದು, ನಗರ ಪಾಲಿಕೆ ವ್ಯಾಪ್ತಿಯೊಳಗಿರುವ ರಸ್ತೆಯಲ್ಲಿರುವ ಹಂಪ್ಸ್‌ಗಳಿಗೆ ಬಣ್ಣ ಬಳಿಯಲು ಕ್ರಮ ಕೈಗೊಂಡಿದೆ.

ಪಾಲಿಕೆಯ ವಲಯ ಕಚೇರಿವಾರು ರಸ್ತೆಗಳಲ್ಲಿರುವ ಹಂಪ್ಸ್‌ಗಳಿಗೆ ಬಿಳಿ ಬಣ್ಣ ಬಳಿಯುವ ಕಾರ್ಯ ಆರಂಭಿಸಲಾಗಿದೆ. ಬೋಗಾಧಿ ರಸ್ತೆಯ ಕುಕ್ಕರಹಳ್ಳಿ ಕೆರೆ ಬಳಿ ರೈಲ್ವೆ ಗೇಟ್ ಸಮೀಪ ಇರುವ ಎರಡು ಹಂಪ್ಸ್‌ಗಳಿಗೆ ಇಂದು ಮಧ್ಯಾಹ್ನ ಬಿಳಿ ಬಣ್ಣ ಬಳಿಯಲಾಯಿತು. ಅಲ್ಲದೆ, ವಲಯ ಕಚೇರಿ–3ರ ವ್ಯಾಪ್ತಿಗೆ ಸೇರಿದ ಸರಸ್ವತಿಪುರಂ, ಕುವೆಂಪುನಗರ ಸೇರಿದಂತೆ ಇನ್ನಿತರ ಬಡಾವಣೆಗಳ ರಸ್ತೆಯಲ್ಲಿದ್ದ ಹಂಪ್ಸ್‌ಗಳಿಗೆ ಬಣ್ಣ ಬಳಿಯಲಾಯಿತು. ಹೆಚ್ಚು ವಾಹನ ಸಂಚರಿಸುವ ರಸ್ತೆಗಳಲ್ಲಿ ಆದ್ಯತೆ ಮೇರೆಗೆ ಹಂಪ್ಸ್‌ಗಳಿಗೆ ಬಣ್ಣ ಬಳಿಯಲು ಸೂಚನೆ ನೀಡಲಾಗಿದೆ.



ಮೈಸೂರಿನ ಕುಕ್ಕರಹಳ್ಳಿ ಕೆರೆ ಬಳಿ ರೈಲ್ವೆ ಗೇಟ್ ಸಮೀಪ ಹಂಪ್ಸ್‌ಗಳಿಗೆ ಮೈಸೂರು ಪಾಲಿಕೆ ವತಿಯಿಂದ ಶುಕ್ರವಾರ ಬಿಳಿ ಬಣ್ಣ ಬಳಿಯಲಾಯಿತು.

ಅಪಘಾತಕ್ಕೂ ಮುನ್ನ ತುರ್ತಾಗಿ ಎಚ್ಚೆತ್ತುಕೊಳ್ಳಬೇಕು

ಮೈಸೂರಿನ ರಿಂಗ್ ರಸ್ತೆಯಲ್ಲಿ ವಾಹನ ಸಂಚಾರ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಕೆಲವು ಜಂಕ್ಷನ್‌ಗಳಲ್ಲಿ ಸಿಗ್ನಲ್ ಇರುವುದರಿಂದ ವಾಹನ ಸಂಚಾರ ಸುಗಮವಾಗಿದೆ. ಆದರೆ, ಬನ್ನೂರು ರಸ್ತೆಯ ದೇವೇಗೌಡ ವೃತ್ತ ಸೇರಿದಂತೆ ರಿಂಗ್ ರಸ್ತೆಯ ಕೆಲ ಜಂಕ್ಷನ್‌ಗಳಲ್ಲಿ ಯಾವುದೇ ಸಿಗ್ನಲ್ ಇಲ್ಲದಿರುವುದರಿಂದ ವಾಹನ ಸಂಚಾರಕ್ಕೆ ಅಡಚಣೆಯೊಂದಿಗೆ ಅಪಘಾತಕ್ಕೆ ಆಹ್ವಾನ ನೀಡಿದಂತಿದೆ. ಈ ಜಂಕ್ಷನ್‌ನಲ್ಲಿ ಈ ಹಿಂದೆ ಬೈಕ್ ಸವಾರರು ಅಪಘಾತಕ್ಕೆ ಬಲಿಯಾಗಿದ್ದರು. ಇದರಿಂದ ಜಂಕ್ಷನ್ ಬಳಿ ರಿಂಗ್ ರಸ್ತೆಯಲ್ಲಿ ಜಿಗ್‌ಜಾಗ್ ಮಾದರಿಯಲ್ಲಿ ಬ್ಯಾರಿಕೇಡ್ ಅಳವಡಿಸಿ, ವಾಹನಗಳ ವೇಗಕ್ಕೆ ಕಡಿವಾಣ ಹಾಕಲಾಗಿತ್ತು. ಆದರೆ, ಕೆಲ ವರ್ಷದಿಂದ ಬ್ಯಾರಿಕೇಡ್‌ಗಳು ಮಾಯವಾಗಿದ್ದು, ● 2ನೇ ಪುಟಕ್ಕೆ

ಇಂದು ಪರಿದೃಶ್ಯ ಅಂತಾರಾಷ್ಟ್ರೀಯ ಕಿರುಚಿತ್ರ, ಸಾಕ್ಷ್ಯ ಚಿತ್ರೋತ್ಸವ

ಮೈಸೂರು, ಫೆ. 2–ಪರಿದೃಶ್ಯ ಮತ್ತು ಮೈಸೂರು ಸಿನಿಮಾ ಸೊಸೈಟಿ ಸಂಯುಕ್ತಾಶ್ರಯದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಅಂತರಾಷ್ಟ್ರೀಯ ಕಿರುಚಿತ್ರ ಮತ್ತು ಸಾಕ್ಷ್ಯ ಚಿತ್ರೋತ್ಸವವನ್ನು ನಾಳೆ (ಫೆ.3) ಬೆಳಗ್ಗೆ 10 ಗಂಟೆಗೆ ಆಯೋಜಿಸಲಾಗಿದೆ.

ನಟ, ನಿರ್ದೇಶಕ, ರಂಗ ತಜ್ಞ ಪ್ರಕಾಶ್ ಬೆಳವಾಡಿ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಮುಕ್ತ ವಿಶ್ವ ವಿದ್ಯಾನಿಲಯದ ಕುಲಪತಿ ಶರಣಪ್ಪ ವಿ ಹಲಸೆ, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ. ಗಣಪತಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಕಾವೇರಿ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ.ಜಿ.ಆರ್. ಚಂದ್ರಶೇಖರ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪರಿದೃಶ್ಯ ಸಂಯೋಜಕ ಎಂ.ಆರ್. ಹರೀಶ್ ತಿಳಿಸಿದ್ದಾರೆ. ಮಾಹಿತಿಗೆ: 9980596824, 9986493998 ಸಂಪರ್ಕಿಸಬಹುದು.

ಲೋಕಸಭಾ ಚುನಾವಣೆ ಹಿನ್ನೆಲೆ


ಮೈಸೂರು ಎಸಿ ಕೆ.ಆರ್.ರಕ್ಷಿತ್ ಸೇರಿ 42 ಕೆಎಎಸ್ ಅಧಿಕಾರಿಗಳ ವರ್ಗ

ಮೈಸೂರು, ಫೆ. 2 (ಆರ್‌ಕೆ)– ಲೋಕಸಭಾ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಮೈಸೂರು ಉಪ ವಿಭಾಗಾಧಿಕಾರಿ ಕೆ.ಆರ್. ರಕ್ಷಿತ್ ಸೇರಿ ರಾಜ್ಯದ 42 ಕೆಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ರಕ್ಷಿತ್ ಅವರನ್ನು ಹಾಸನ ಉಪ ವಿಭಾಗದ ಎಸಿಯಾಗಿ, ಹಾಸನದ ಜೆ.ಬಿ. ಮಾರುತಿ ಅವರನ್ನು ಪಾಂಡವ ಪುರ ಉಪವಿಭಾಗಕ್ಕೆ, ಮೈಸೂರು ಮಹಾನಗರ ಪಾಲಿಕೆಯ ಉಪ ಆಯುಕ್ತ (ಕಂದಾಯ) ಎಂ. ದಾಸೇಗೌಡರನ್ನು ಶಿವಮೊಗ್ಗ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿಯಾಗಿ, ಹಾಸನದ ಹೇಮಾವತಿ ಜಲಾಶಯ ಯೋಜನೆ ವಿಶೇಷ ಭೂಸ್ವಾಧೀನಾಧಿಕಾರಿ ಪಿ. ಮಂಜುನಾಥ್ ಅವರನ್ನು ತುಮಕೂರು ವಿಶ್ವವಿದ್ಯಾನಿಲಯದ ಕುಲಸಚಿವರನ್ನಾಗಿ, ಮಂಡ್ಯದ ರಾಷ್ಟ್ರೀಯ ಹೆದ್ದಾರಿ ವಿಶೇಷ ಭೂಸ್ವಾಧೀನಾಧಿಕಾರಿ ಪಿ.ಆರ್. ವಿಶ್ವನಾಥ್‌ರನ್ನು ಹೇಮಾವತಿ ಜಲಾಶಯ ಯೋಜನೆ ವಿಶೇಷ ಭೂಸ್ವಾಧೀನಾಧಿಕಾರಿಯಾಗಿ, ಕೊಳ್ಳೇಗಾಲ ಉಪವಿಭಾಗಾಧಿಕಾರಿ ಬಿ.ಆರ್. ಮಹೇಶ್ ಅವರನ್ನು ಮಂಡ್ಯ ಉಪ ವಿಭಾಗಾಧಿಕಾರಿಯಾಗಿ ಮಂಡ್ಯ ಉಪವಿಭಾಗದ ಎಂ.ಶಿವಮೂರ್ತಿ ಅವರನ್ನು ಕೊಳ್ಳೇಗಾಲ ಉಪವಿಭಾಗಾಧಿಕಾರಿಯನ್ನಾಗಿ ವರ್ಗಾವಣೆ ಮಾಡಲಾಗಿದೆ.

ಅದೇ ರೀತಿ ರಾಜ್ಯಾದ್ಯಂತ ವಿವಿಧ ಜಿಲ್ಲೆಗಳ ಕೆಎಎಸ್ ಅಧಿಕಾರಿಗಳನ್ನು ಭಾರತೀಯ ಚುನಾವಣಾ ಆಯೋಗದ ನಿರ್ದೇಶನದಂತೆ ಮುಂದಿನ ಆದೇಶದವರೆಗೆ ವರ್ಗಾವಣೆ ಮಾಡಿ ಸರ್ಕಾರದ ಅಧೀನ ಕಾರ್ಯದರ್ಶಿ ಉಮಾದೇವಿ ಅವರು ಫೆ. 1 ರಂದು ಅಧಿಸೂಚನೆ ಹೊರಡಿಸಿದ್ದಾರೆ.

ನಿಧನ



ಎನ್.ಸಿ.ಶಿವಶಂಕರ್

ಮೈಸೂರು, ಫೆ. 2– ಮೈಸೂರಿನ ಸರಸ್ವತಿಪುರಂ ನಿವಾಸಿ ಎನ್.ಸಿ. ಶಿವಶಂಕರ್ (83) ಶುಕ್ರವಾರ ಬೆಳಗ್ಗೆ ನಿಧನರಾದರು. ಮೃತರು ಕುಟುಂಬದ ಸದಸ್ಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ವಿದ್ಯಾರಣ್ಯಪುರಂ ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೊಡೀರಾ ರಾಜ ಚೆಂಗಪ್ಪ

ಮೈಸೂರಿನ ವಿ.ವಿ.ಮೊಹಲ್ಲಾದ ಕೆ.ಆರ್.ಎಸ್. ರಸ್ತೆಯಲ್ಲಿರುವ ನಾಗಾರ್ಜುನ ಅಪಾರ್ಟ್‌ಮೆಂಟ್ಸ್ ನಿವಾಸಿ ಕೊಡೀರಾ ರಾಜ ಚೆಂಗಪ್ಪ (77) ಜ.31ರಂದು ನಿಧನರಾದರು.

ಮೃತರು ಪತ್ನಿ ಜಯಲಕ್ಷ್ಮಿ (ಪಾಲಚಂಡ), ಪುತ್ರ ಕಿರಣ್, ಸೊಸೆ ಸೌಮ್ಯ, ಮೊಮ್ಮಕ್ಕಳಾದ ಆದ್ಯ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಶ್ರೀಯುತರ ಪಾರ್ಥಿವ ಶರೀರವನ್ನು ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗೆ ದಾನ ಮಾಡಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಮುಡಾ ಆಯುಕ್ತರ ವರ್ಗಾವಣೆ ರದ್ದು

ಹೀಗಾಗಿ ಈಗ ಅರುಳ್‌ಕುಮಾರ್ ವರ್ಗಾವಣೆ ರದ್ದಾಗಿರುವುದರಿಂದ ಸ್ವಾಭಾವಿಕವಾಗಿ ದಿನೇಶ್‌ಕುಮಾರ್ ಮುಡಾ ಆಯುಕ್ತರಾಗಿ ಮುಂದುವರೆದಿದ್ದಾರೆ.

ಕೆಎಟಿ ಆದೇಶ?: ಈ ಹಿಂದೆ ರಾಜ್ಯ ಸರ್ಕಾರವು ಮುಡಾ ಆಯುಕ್ತರಾಗಿದ್ದ ನಟೇಶ್ ಅವರನ್ನು ವರ್ಗಾವಣೆ ಮಾಡಿ ಅವರ ಸ್ಥಾನಕ್ಕೆ ದಿನೇಶ್‌ಕುಮಾರ್ ಅವರನ್ನು ನಿಯೋಜಿಸಿತ್ತು. ಆ ಸಂದರ್ಭದಲ್ಲಿ ಸೇವಾ ನಿಯಮದಂತೆ 2 ವರ್ಷ ಪೂರ್ಣಗೊಂಡಿಲ್ಲ ಎಂಬ ಕಾರಣವನ್ನು ಮುಂದಿಟ್ಟು ನಟೇಶ್ ಅವರು ಕೆಎಟಿ ಮೊರೆ ಹೋಗಿದ್ದರು. ಈ ಪ್ರಕರಣದಲ್ಲಿ ಕೆಎಟಿ ನಟೇಶ್ ಅವರ ಸೇವಾವಧಿ 2 ವರ್ಷದ ನಂತರ ಮುಡಾ ಆಯುಕ್ತರಾಗಿ ದಿನೇಶ್‌ಕುಮಾರ್ ಅಧಿಕಾರ ವಹಿಸಿಕೊಳ್ಳುವಂತೆ ತೀರ್ಪು ನೀಡಿತ್ತು. ಸರ್ಕಾರದ ನಿಯಮದಂತೆ ಮುಡಾ ಆಯುಕ್ತರ ಅವಧಿ ಕನಿಷ್ಠ 2 ವರ್ಷದ್ದಾಗಿದ್ದು, ಕೆಎಟಿ ತೀರ್ಪಿನಂತೆ ಜಿ.ಟಿ. ದಿನೇಶ್‌ಕುಮಾರ್ ಅವಧಿಯು 2024ರ ಮೇ 4ರಂದು ಪೂರ್ಣಗೊಳ್ಳಲಿರುವುದರಿಂದ ಅದನ್ನು ಮನಗಂಡು ಸರ್ಕಾರವು ಅರುಳ್‌ಕುಮಾರ್ ವರ್ಗಾವಣೆಯನ್ನು ರದ್ದುಪಡಿಸಿ, ದಿನೇಶ್‌ಕುಮಾರ್ ಮುಂದುವರೆಯಲು ಅನುವು ಮಾಡಿಕೊಟ್ಟಿದೆ ಎಂದು ಹೇಳಲಾಗಿದೆ.

ನಂಜನಗೂಡು ಡಿವೈಎಸ್ಪಿ: ಕೆಲ ದಿನಗಳ ಹಿಂದೆ ನಂಜನಗೂಡು ಡಿವೈಎಸ್ಪಿ ಗೋವಿಂದರಾಜು ಅವರನ್ನು ವರ್ಗಾವಣೆ ಮಾಡಿದ್ದ ಸರ್ಕಾರ, ಅವರ ಸ್ಥಾನಕ್ಕೆ ಕರ್ನಾಟಕ ಗುಪ್ತವಾರ್ತೆಗೆ ವರ್ಗಾವಣೆ ಆದೇಶದಲ್ಲಿದ್ದ ಸುಮಿತ್ ಅವರನ್ನು ನಿಯೋಜಿಸಿ ಆದೇಶ ಹೊರಡಿಸಿತ್ತು. ಅವರು ನಂಜನಗೂಡಿಗೆ ಬಂದು ಅಧಿಕಾರ ವಹಿಸಿಕೊಳ್ಳುವ ಮುನ್ನವೇ ಅವರ ವರ್ಗಾವಣೆ ಆದೇಶವನ್ನು ರದ್ದುಪಡಿಸಿ, ಅವರನ್ನು ನಾಗಮಂಗಲ ಉಪವಿಭಾಗಕ್ಕೆ ನಿಯೋಜಿಸಿತ್ತು. ಅಲ್ಲದೇ, ಕರ್ನಾಟಕ ಗುಪ್ತವಾರ್ತೆಗೆ ವರ್ಗಾವಣೆ ಆದೇಶದಲ್ಲಿದ್ದ ರಘು ಅವರನ್ನು ನಿಯೋಜಿಸಿತ್ತು. ರಘು ಅವರು ನಂಜನಗೂಡು ಡಿವೈಎಸ್ಪಿಯಾಗಿ ಅಧಿಕಾರ ವಹಿಸಿಕೊಂಡರು. ಮುಖ್ಯಮಂತ್ರಿಗಳ ತವರು ಜಿಲ್ಲೆ ಮೈಸೂರಿನಲ್ಲೇ ಅಧಿಕಾರಿಗಳ ವರ್ಗಾವಣೆಯಲ್ಲಿ ಗೊಂದಲ. ಅರುಳ್ ಕುಮಾರ್ ಅವರನ್ನು ಮುಡಾ ಆಯುಕ್ತರನ್ನಾಗಿ ವರ್ಗಾವಣೆ ಮಾಡುವ ಮುನ್ನ ಸಂಬಂಧಪಟ್ಟ ಹಿರಿಯ ಅಧಿಕಾರಿಗಳಿಗೆ ಕೆಎಟಿ ತೀರ್ಪಿನ ಬಗ್ಗೆ ಅರಿವಿರಲಿಲ್ಲವೇ? ಎಂದು ಕೆಲವರು ಪ್ರಶ್ನಿಸುತ್ತಿದ್ದಾರೆ. ಅರುಳ್‌ಕುಮಾರ್ ಅವರ ವರ್ಗಾವಣೆ ರದ್ದಾಗಿರುವುದಕ್ಕೆ ಕೆಎಟಿ ತೀರ್ಪನ್ನು ಬೊಟ್ಟುಮಾಡಿ ತೋರಿಸಿ ಸಮರ್ಥನೆ ನೀಡಬಹುದು. ಆದರೆ, ನಂಜನಗೂಡಿಗೆ ವರ್ಗಾವಣೆಗೊಂಡಿದ್ದ ಸುಮಿತ್ ಅವರ ವರ್ಗಾವಣೆ ಆದೇಶ ರದ್ದುಗೊಂಡು ರಘು ಅವರನ್ನು ನಿಯೋಜಿಸಿರುವುದು ಭಾರೀ ಚರ್ಚೆಗೆ ಗ್ರಾಸವಾಗಿದೆ.

ಎಡವಟ್ಟಿನಿಂದ ಸರಣಿ ಅಪಘಾತ

ಆ ಜಾಗದಲ್ಲಿ ಹಳ್ಳವನ್ನೇ ತೋಡಿದ್ದಾನೆ. ಜೆ.ಸಿ.ಕಾಲೇಜು ಹಾಗೂ ಮಾನಸ ಗಂಗೋತ್ರಿಗೆ ವಿದ್ಯಾರ್ಥಿಗಳು ಇದೇ ಮಾರ್ಗದಲ್ಲಿ ಸಾಗುತ್ತಾರೆ. ಸಾಮಾನ್ಯವಾಗಿ ವಿದ್ಯಾರ್ಥಿಗಳು ವೇಗವಾಗಿ ವಾಹನ ಚಾಲನೆ ಮಾಡುವಾಗ ಈ ಸ್ಥಳದಲ್ಲಿ ಸರಣಿ ಅಪಘಾತವಾಗಿ ಬಹಳಷ್ಟು ಮಂದಿ ಗಾಯಗೊಂಡಿದ್ದಾರೆ. ಪಾಪ, ಬಹಳ ಮಂದಿ ಹುಡುಗರು ಬೈಕ್, ಸ್ಕೂಟರ್‌ನಿಂದ ಇಲ್ಲಿ ಬಿದ್ದು ನರಳುತ್ತಾ ಎದ್ದು ಹೋಗುತ್ತಿದ್ದಾರೆ ಎಂದು ಅಲ್ಲಿಯೇ ರಸ್ತೆ ಬದಿ ಹೋಟೆಲ್ ನಡೆಸುತ್ತಿರುವ ಪುಷ್ಪಾ ತಿಳಿಸಿದ್ದಾರೆ.

ನಿಧಾನವಾಗಿ ಬರುವ ಚಾಲಕರಿಗೆ ಹಳ್ಳ ಕಾಣಿಸುತ್ತದೆ. ಅಂತಹವರು ವಾಹನವನ್ನು ನಿಧಾನವಾಗಿ ಹಳ್ಳಕ್ಕೆ ಇಳಿಸಿ ಹೋಗುವುದರಿಂದ ಪಾರಾಗುತ್ತಿದ್ದಾರೆ. ಆದರೆ ವಿದ್ಯಾರ್ಥಿಗಳು, ಯುವಕರು ವೇಗವಾಗಿ ವಾಹನ ಚಾಲನೆ ಮಾಡಿಕೊಂಡು ಬಂದು ಸರಣಿ ಅಪಘಾತಗಳಾಗುತ್ತಿವೆ. ನಗರ ಪಾಲಿಕೆಯಲ್ಲಿ ತಾಂತ್ರಿಕ ಪರಿಣಿತಿ ಹೊಂದಿರುವ ಇಂಜಿನಿಯರ್‌ಗಳಿಲ್ಲವೆ? ಹೀಗೆ ಅವೈಜ್ಞಾನಿಕವಾಗಿ ರೋಡ್ ಹಂಪ್ಸ್ ನಿರ್ಮಾಣ ಮಾಡುವುದರಿಂದ ಅಪಘಾತವಾಗುತ್ತದೆ ಎಂಬ ಸಾಮಾನ್ಯ ಪರಿಜ್ಞಾನ ಇವರಿಗೆ ಇಲ್ಲವೇ ಎಂದು ಜನ ಪ್ರಶ್ನಿಸುತ್ತಿದ್ದಾರೆ. ಅವೈಜ್ಞಾನಿಕವಾಗಿ ನಿರ್ಮಾಣ ಮಾಡಿದ್ದ ರೋಡ್ ಹಂಪ್ಸ್ ಬೇಕಾಬಿಟ್ಟಿ ತೆರವುಗೊಳಿಸಿದ್ದು, ಈಗ ಮತ್ತೊಂದು ರೀತಿಯಲ್ಲಿ ಅಪಘಾತಕ್ಕೆ ಅಧಿಕಾರಿಗಳು ಕಾರಣರಾಗಿದ್ದಾರೆ. ಕಿಲ್ಲರ್ ರೋಡ್ ಹಂಪ್ಸ್ ಪ್ರಕರಣದ ಸುದ್ದಿ ಈಗ ಬಾರೀ ಸದ್ದು ಮಾಡುತ್ತಿದೆ. ಅಮಾಯಕರ ಸಾವಿಗೆ ಕಾರಣರಾಗುತ್ತಿರುವ ಅಧಿಕಾರಿಗಳ ವಿರುದ್ಧ ಜನರು ಆಕ್ರೋಶ ಹೊರ ಹಾಕುತ್ತಿದ್ದಾರೆ. ಆದರೂ ಮತ್ತೊಂದು ರೀತಿ ಎಡವಟ್ಟು ಮಾಡಿ ತಮ್ಮ ಬೇಜವಾಬ್ದಾರಿಯನ್ನು ಮತ್ತೊಮ್ಮೆ ಸಾಬೀತು ಮಾಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ತವರು ಜಿಲ್ಲೆಯಲ್ಲೆ ಅಧಿಕಾರಿಗಳು ಇಷ್ಟೊಂದು ಬೇಜವಾಬ್ದಾರಿ ತೋರಿದರೆ ಇನ್ನು ರಾಜ್ಯದ ಉಳಿದ ಜಿಲ್ಲೆಗಳ ಪರಿಸ್ಥಿತಿ ಹೇಗಿರಬಹುದು ಎಂಬುವುದು ಊಹೆಗೂ ಸಿಗುವುದಿಲ್ಲ.

ಅಪಘಾತಕ್ಕೂ ಮುನ್ನ ತುರ್ತಾಗಿ ಎಚ್ಚೆತ್ತುಕೊಳ್ಳಬೇಕು

ರಿಂಗ್ ರಸ್ತೆಯಲ್ಲಿ ವಾಹನಗಳು ವೇಗವಾಗಿ ಸಂಚರಿಸುತ್ತಿವೆ. ಈ ಜಂಕ್ಷನ್ ಮೂಲಕವೇ ವಿವಿಧ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಸಾಗುವುದರಿಂದ ಬೆಳಗ್ಗೆ ಹಾಗೂ ಸಂಜೆ ಭಯದಿಂದಲೇ ರಿಂಗ್ ರಸ್ತೆ ದಾಟುವಂತಾಗಿದೆ. ಈ ಹಿನ್ನೆಲೆಯಲ್ಲಿ ಕೂಡಲೇ ದೇವೇಗೌಡ ವೃತ್ತದ ಜಂಕ್ಷನ್‌ನಲ್ಲಿ ರಿಂಗ್ ರಸ್ತೆಗೆ ಬ್ಯಾರಿಕೇಡ್ ಇಟ್ಟು ವಾಹನಗಳ ವೇಗಕ್ಕೆ ಕಡಿವಾಣ ಹಾಕುವಂತೆ ಸ್ಥಳೀಯರು ಆಗ್ರಹಿಸಿದ್ದಾರೆ.

ಮೈಸೂರಿನಲ್ಲಿ ಪೈಪ್ ಒಡೆದು ಪೋಲಾಗುತ್ತಿರುವ ಕುಡಿಯುವ ನೀರು

ವಾಣಿವಿಲಾಸ ವಾಟರ್ ವರ್ಕ್ಸ್ ಸನಿಹದಲ್ಲೇ ಉಂಟಾಗಿದೆ



ಮೈಸೂರು, ಫೆ.2(ಬಿಎಲ್‌ಯು)– ಮೈಸೂರಿನ ಬಂಬೂಬಜಾರ್‌ನ ಯಾದವಗಿರಿ ರೈಲ್ವೆ ಅಂಡರ್ ಬ್ರಿಡ್ಜ್ ಬಳಿ ನೀರಿನ ಪೈಪ್ ಒಡೆದು, ಭಾರೀ ಪ್ರಮಾಣದ ನೀರು ಪೋಲಾಗುತ್ತಿದೆ. ವಾಣಿ ವಿಲಾಸ ವಾಟರ್ ವರ್ಕ್ಸ್ ಸನಿಹದಲ್ಲೇ ನೀರಿನ ಪೈಪ್ ಒಡೆದಿದ್ದರೂ ಅಧಿಕಾರಿಗಳು ಇತ್ತ ಗಮನಹರಿಸದಿರುವುದು ನಿರ್ಲಕ್ಷ್ಯಕ್ಕೆ ಹಿಡಿದ ಕೈಕನ್ನಡಿಯಾಗಿದೆ.

ಶುದ್ಧ ನೀರು ಈ ಜಗತ್ತಿನ ಮೊದಲ ಔಷಧ, ನೀರಿಲ್ಲದೆ ಜೀವನವಿಲ್ಲ ಎಂಬ ಹಲವು ಸಂದೇಶ ಸಾರುವ ಮೈಸೂರಿನ ವಾಣಿ ವಿಲಾಸ ವಾಟರ್ ವರ್ಕ್ಸ್ ಅಧಿಕಾರಿಗಳು ತಮ್ಮ ಕಚೇರಿ ಸನಿಹದಲ್ಲೇ ಕುಡಿಯುವ ನೀರು ಮೋರಿ ಸೇರುತ್ತಿದ್ದರೂ ಕಂಡೂ ಕಾಣದಂತಿದ್ದಾರೆ.

ಬಂಬೂಬಜಾರ್‌ನ ಯಾದವಗಿರಿ ರೈಲ್ವೆ ಅಂಡರ್ ಬ್ರಿಡ್ಜ್ ಬಳಿ ಮೋರಿ ಸೇತುವೆ ಮೇಲೆ ಹಾದು ಹೋಗಿರುವ ಬಾರೀ ಗಾತ್ರದ ಪೈಪ್ ಒಡೆದು ಹಲವು ದಿನಗಳಿಂದ ಅಪಾರ ಪ್ರಮಾಣದ ನೀರು ಪೋಲಾಗುತ್ತಿದೆ. ಪೈಪ್ ಒಡೆದಿರುವ ಕಾರಣ ಕಾರಂಜಿಯಂತೆ ನೀರು ಚಿಮ್ಮುತ್ತಿದೆ. ಇದರಿಂದ ರಸ್ತೆ ಪಕ್ಕದಲ್ಲಿ ಸಾಗುವ ವಾಹನ ಸವಾರರು ಹಾಗೂ ದಾರಿ ಹೋಕರ ಮೇಲೆ ಶವರ್‌ನಂತೆ ನೀರು ಸುರಿಯುತ್ತಿದೆ.

ಇದನ್ನು ಗಮನಿಸಿದ ವಾಹನ ಸವಾರರೊಬ್ಬರು ಒಡೆದಿರುವ ಪೈಪ್ ಮೇಲೆ ಚೀಲ ಇಟ್ಟು, ನೀರು ರಸ್ತೆ ಬದಿ ಸಾಗುವವರ ಮೇಲೆ ಚಿಮ್ಮದಂತೆ ಮುತುವರ್ಜಿ ವಹಿಸಿದ್ದಾರೆ. ಇದೇ ರಸ್ತೆಯಲ್ಲಿ ಮುಂದೆ ಹೋಗಿ ಎಡಕ್ಕೆ ತಿರುಗಿದರೆ ವಾಣಿ ವಿಲಾಸ ವಾಟರ್ ವರ್ಕ್ಸ್ ಇದೆ. ಇದೇ ಮಾರ್ಗವಾಗಿ ವಾಟರ್ ವರ್ಕ್ಸ್‌ನ ಹಲವು ಅಧಿಕಾರಿಗಳು ಹಾಗೂ ಸಿಬ್ಬಂದಿ ಸಂಚರಿಸುತ್ತಾರೆ. ಆದರೆ ನೀರಿನ ಪೈಪ್ ಒಡೆದಿದ್ದರೂ ಇದನ್ನು ಗಮನಿಸಿಲ್ಲ.

ಕುಡಿಯುವ ನೀರನ್ನು ಮಿತವಾಗಿ ಬಳಸಿ ಎಂದು ಜಾಗೃತಿ ಅಭಿಯಾನ ನಡೆಸಲು ವಾಣಿ ವಿಲಾಸ ವಾಟರ್ ವರ್ಕ್ಸ್‌ನವರು ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಾರೆ. ಆದರೆ ಹೀಗೆ ಪೋಲಾಗುವ ನೀರನ್ನು ತಡೆಯದಿದ್ದರೆ ಯಾವ ಅಭಿಯಾನ ಮಾಡಿದರೆ ಏನು ಪ್ರಯೋಜನ?

ಈಗಲಾದರೂ ಒಡೆದು ಹೋಗಿರುವ ಪೈಪ್ ರಿಪೇರಿ ಮಾಡಿಸಿ ಕುಡಿಯುವ ನೀರು ಪೋಲಾಗುವುದನ್ನು ಅಧಿಕಾರಿಗಳು ತಡೆಗಟ್ಟುವರೆ ಕಾದು ನೋಡಬೇಕಿದೆ.

ವಿದ್ಯಾರ್ಥಿ ನಿಲಯದ ಮೇಲೆ ದಾಳಿ ನಡೆಸಿದವರ ವಿರುದ್ಧ ಕ್ರಮಕ್ಕೆ ಆಗ್ರಹ

ಮೈಸೂರು, ಫೆ. 2– ಕೆರಗೋಡು ಹನುಮಧ್ವಜ ವಿವಾದ ಘಟನೆ ಸಂಬಂಧ ಬಿಜೆಪಿ ಮತ್ತು ಜೆಡಿಎಸ್ ನಡೆಸಿದ ಪಾದಯಾತ್ರೆ ವೇಳೆ ಮಂಡ್ಯ ನಗರದ ಕುರುಬ ಸಂಘದ ವಿದ್ಯಾರ್ಥಿನಿಲಯದ ಮೇಲೆ ದಾಳಿ ಮಾಡಿ ದಾಂಧಲೆ ನಡೆಸಿದವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಕೆಆರ್ ಬ್ಯಾಂಕ್ ಉಪಾಧ್ಯಕ್ಷ ಬಸವರಾಜ ಬಸಪ್ಪ ಆಗ್ರಹಿಸಿದ್ದಾರೆ.

ವಿದ್ಯಾರ್ಥಿನಿಲಯದೊಳಗಿದ್ದ ಕನಕದಾಸ, ಸಂಗೊಳ್ಳಿ ರಾಯಣ್ಣ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭಾವಚಿತ್ರಗಳಿಗೆ ಹಾನಿ ಮಾಡಿದ್ದಾರೆ. ಅಲ್ಲದೇ ಮಂಡ್ಯ ಜಿಲ್ಲೆಯ ಕುರುಬರ ಸಂಘದ ನಿರ್ದೇಶಕ ಸಾತನೂರು ಮಹೇಶ್ ಅವರ ಮನೆಯ ಮೇಲೆ ಕಲ್ಲು ತೂರಾಟ ನಡೆಸಿ ದಾಂಧಲೆ ನಡೆಸಿ ಸಮುದಾಯದವರ ಭಾವನೆಗಳಿಗೆ ನೋವುಂಟು ಮಾಡಿದ್ದಾರೆ. ಆದ್ದರಿಂದ ದಾಂಧಲೆ ನಡೆಸಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸಿದ್ಧ ಸಮಾಧಿ ಯೋಗ ಶಿಬಿರ

ಮೈಸೂರು, ಫೆ. 2– ಮೈಸೂರಿನ ಕುವೆಂಪುನಗರದ ಋಷಿ ಸಂಸ್ಕೃತಿ ವಿದ್ಯಾ ಕೇಂದ್ರದಲ್ಲಿ ಫೆ. 4 ರಂದು ಸಂಜೆ 6ಕ್ಕೆ ಸಿದ್ಧ ಸಮಾಧಿ ಯೋಗ ಶಿಬಿರ ಕುರಿತು ಉಚಿತ ಪರಿಚಯ ಕಾರ್ಯಕ್ರಮ ಏರ್ಪಡಿಸಲಾಗಿದೆ. 14 ದಿನಗಳ ಸಿದ್ಧ ಸಮಾಧಿ ಯೋಗ ಶಿಬಿರ ಫೆ. 5 ರಿಂದ ಪ್ರಾರಂಭವಾಗಲಿದೆ. ಶಿಬಿರದಲ್ಲಿ ಧ್ಯಾನ, ಪ್ರಾಣಾಯಾಮ, ಆಹಾರ ಕ್ರಮ, ವ್ಯಕ್ತಿತ್ವ ವಿಕಾಸದ ಬಗ್ಗೆ ತರಬೇತಿ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 9448458050, 8618762110 ಸಂಪರ್ಕಿಸಬಹುದು.

ನಾಳೆ ಮಕ್ಕಳ ನಾಟಕ ಪ್ರದರ್ಶನ, ಗಾಂಧಿ ಸದ್ಭಾವನಾ ಪ್ರಶಸ್ತಿ ಪ್ರದಾನ

ಮೈಸೂರು, ಫೆ. 2–ಅದಮ್ಯ ರಂಗಶಾಲೆಯ ವತಿಯಿಂದ ಫೆ.4ರಂದು ಸಂಜೆ 5.30ಕ್ಕೆ ನಗರದ ಜಯಲಕ್ಷ್ಮಿಪುರಂನ ಸ್ವಾಮಿ ವಿವೇಕಾನಂದ ಪದವಿಪೂರ್ವ ಕಾಲೇಜಿನ ಆವರಣದಲ್ಲಿರುವ ಶ್ರೀ ಕುವೆಂಪು ರಂಗಮಂದಿರದಲ್ಲಿ 'ಗಾಂಧಿ ಸದ್ಭಾವನಾ ಪ್ರಶಸ್ತಿ ಪ್ರದಾನ ಹಾಗೂ ಮಕ್ಕಳ ನಾಟಕ ಪ್ರದರ್ಶನ' ಸಮಾರಂಭ ನಡೆಯಲಿದೆ ಎಂದು ರಂಗಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಚಂದ್ರು ಮಂಡ್ಯ ತಿಳಿಸಿದ್ದಾರೆ. ಸಮಾರಂಭವನ್ನು ಪ್ರಸಿದ್ಧ ಮಹಾಕವಯತ್ರಿ ಡಾ.ಲತಾ ರಾಜಶೇಖರ್ ಉದ್ಘಾಟಿಸಿ, ಆ ಬಳಿಕ ಪ್ರಶಸ್ತಿ ಪ್ರದಾನ ಮಾಡುವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಿಶ್ರಾಂತ ಉಪ ನಿರ್ದೇಶಕ ಮ.ಗು. ಸದಾನಂದಯ್ಯ ಅಧ್ಯಕ್ಷತೆ ವಹಿಸುವರು. ಅದಮ್ಯ ರಂಗಶಾಲೆಯ ಗೌರವ ಕಾರ್ಯದರ್ಶಿ ಹಾಗೂ ಸಾಹಿತಿ ಟಿ.ಸತೀಶ್ ಜವರೇಗೌಡ ಪ್ರಶಸ್ತಿ ಪುರಸ್ಕೃತರ ಕುರಿತು ಅಭಿನಂದನಾ ನುಡಿಗಳನ್ನಾಡುವರು. ಮುಖ್ಯ ಅತಿಥಿಯಾಗಿ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಎನ್. ಸಂತೋಷ್‌ಕುಮಾರ್ ಪಾಲ್ಗೊಳ್ಳುವರು.

'ಗಾಂಧಿ ಸದ್ಭಾವನಾ ಪ್ರಶಸ್ತಿ' ಪುರಸ್ಕೃತರು: ಪ್ರಸಿದ್ಧ ಸಾಹಿತಿ ಜಿ.ಎಲ್. ತ್ರಿಪುರಾಂತಕ (ಅಂಕಣ ಸಾಹಿತ್ಯ), ಮಂಡ್ಯದ ಅನಿಕೇತನ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಡಾ.ರಾಮಲಿಂಗಯ್ಯ (ಶಿಕ್ಷಣ ಕ್ಷೇತ್ರ), ಮೈಸೂರಿನ ವಿಜಯನಗರದ ಪುಣ್ಯಕೋಟಿ ಸೇವಾ ಟ್ರಸ್ಟಿನ ಅಧ್ಯಕ್ಷ ಹನುಮಂತೇಶ್ (ಸಮಾಜಸೇವಾ ಕ್ಷೇತ್ರ) ಅವರು 'ಗಾಂಧಿ ಸದ್ಭಾವನಾ ಪ್ರಶಸ್ತಿ' ಸ್ವೀಕರಿಸುವರು.

ಇದೇ ಸಂದರ್ಭದಲ್ಲಿ ಪದವಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಉತ್ತಮ ಸ್ವಯಂ ಸೇವಕ ವಿದ್ಯಾರ್ಥಿಗಳಾದ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯ ಹೆಚ್.ಎಸ್.ಪ್ರನುಶ, ರಾಮನಗರ ಜಿಲ್ಲೆಯ ಆರ್.ಕಿರಣ್, ಮಂಡ್ಯ ಜಿಲ್ಲೆಯ ಸಂತೆಬಾಚಳ್ಳಿಯ ಎಸ್.ಎಂ.ಅನನ್ಯ ಅವರಿಗೆ 'ಅದಮ್ಯ ಚೇತನ ಪ್ರಶಸ್ತಿ' ಪ್ರದಾನ ಮಾಡಲಾಗುವುದು.

ಪ್ರಶಸ್ತಿ ಪ್ರದಾನದ ಬಳಿಕ ಅದಮ್ಯ ರಂಗಶಾಲೆಯ ಮಕ್ಕಳಿಂದ ಪಂಚತಂತ್ರ ಕಥೆಯಾಧಾರಿತ 'ರಂಗಣ್ಣನ ರಂಪಾಟ' ನಾಟಕ ಪ್ರದರ್ಶನ ನಡೆಯಲಿದೆ.

ನೇಗಿಲಯೋಗಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ವಿಶ್ವ ಕ್ಯಾನ್ಸರ್ ಜಾಗೃತಿ ಸಪ್ತಾಹ



ಮೈಸೂರು, ಫೆ.2– ಮೈಸೂರಿನ ನೇಗಿಲಯೋಗಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಮರುಳೇಶ್ವರ ನೇಗಿಲಯೋಗಿ ಸೇವಾಭವನದಲ್ಲಿ ಮಹಿಳೆಯರಲ್ಲಿ ಸಾಮಾನ್ಯವಾಗಿ ಕಂಡುಬರುವ ಸ್ತ್ರೀರೋಗ ಶಾಸ್ತ್ರದ ಆಂಕೊಲಾಜಿಯ ಬಗ್ಗೆ ತಿಳುವಳಿಕೆ ಕುರಿತ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಸ್ತ್ರೀರೋಗಶಾಸ್ತ್ರದ ಆಂಕೊಲಾಜಿಯು ಮಹಿಳೆಯರಿಗೆ ನಿರ್ದಿಷ್ಟವಾದ ಕ್ಯಾನ್ಸರ್‌ಗಳಾದ ಗರ್ಭಕಂಠದ ಕ್ಯಾನ್ಸರ್, ಸ್ತನ ಕ್ಯಾನ್ಸರ್, ಎಂಡೊಮೆಟ್ರಿಯಲ್ ಕ್ಯಾನ್ಸರ್, ಅಂಡಾಶಯದ ಕ್ಯಾನ್ಸರ್, ವಾಲ್ವಾರ್ ಕ್ಯಾನ್ಸರ್‌ಗಳ ಅಪಾಯದ ಅಂಶಗಳು, ಸಾಮಾನ್ಯ ಲಕ್ಷಣಗಳು, ತಡೆಗಟ್ಟುವ ವಿಧಾನಗಳ ಬಗ್ಗೆ ಮಾಹಿತಿ ನೀಡಲಾಯಿತು. ಈ ಸಂದರ್ಭದಲ್ಲಿ ಅವಂತ್ ಬಿಕೆಜಿ ಆಸ್ಪತ್ರೆಯಲ್ಲಿ ಸ್ತ್ರೀರೋಗ ಮತ್ತು ಕ್ಯಾನ್ಸರ್ ರೋಗ ತಜ್ಞೆ (ಆನ್ಕೊಲೊಜಿಸ್ಟ್)ಆಗಿ ಕಾರ್ಯನಿರ್ವಹಸುತ್ತಿರುವ ಡಾ.ಡಿ.ಆರ್.ರಮ್ಯಾ ಅವರು HPV ಲಸಿಕೆ, ಸ್ಕ್ರೀನಿಂಗ್, PAP ಸ್ಮೀಯರ್ / HPV ಡಿಎನ್‌ಎ ಪರೀಕ್ಷೆ, MRI ಮತ್ತು ಮ್ಯಾಮೊಗ್ರಾಮ್ ಸ್ಕ್ರೀನಿಂಗ್ ಮುಂತಾದ ಪರೀಕ್ಷೆಗಳನ್ನು ಯಾವ ಸಂದರ್ಭಗಳಲ್ಲಿ ಮಾಡಬೇಕಿದೆ ಎಂದು ವಿವರವಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಮಹಿಳಾ ಸದಸ್ಯರೊಂದಿಗೆ ಸಂವಾದವನ್ನು ಏರ್ಪಡಿಸಲಾಗಿತ್ತು. ಮಹಿಳೆಯರು ತಮ್ಮೆಲ್ಲ ಸಂದೇಹಗಳಿಗೆ ಉತ್ತರವನ್ನು ಪಡೆದುಕೊಂಡರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀಮತಿ ಜೆ ಶೋಭ ವಹಿಸಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

3.2.2024 ಶನಿವಾರ, ಮಳೆ ನಕ್ಷತ್ರ: ಶ್ರವಣ 24.1.2024 ರಿಂದ 05.02.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ,
ತಿಥಿ: ಅಷ್ಟಮಿ, ನಕ್ಷತ್ರ: ವಿಶಾಖ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿ.ಎಫ್.ಟಿ.ಆರ್.ಐ ಶೋಧ ಅನುಶೋಧ–ಪ್ರಾಯೋಜಿತ ಕಾರ್ಯಕ್ರಮ, 6.40 ಪದ ಸಂಸ್ಕೃತಿ–ಕನ್ನಡ ಪದಗಳ ಬಳಕೆ–ಕಲಿಕೆಯ ವಿಶಿಷ್ಟ ಬಾನುಲಿ ಸರಣಿ –ಡಾ. ಸಂಗಮೇಶ ಸವದತ್ತಿಮಠ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ, 10.00 ಬಿ.ವಿ. ರಾಮನ್ ಮತ್ತು ಬಿ.ವಿ. ಲಕ್ಷ್ಮಣ್–ಯುಗಳ ಗಾಯನ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆ, 3.30 ಮಕ್ಕಳ ಮಂಟಪ –ಸೈಂಟ್ ಜೋಸೆಫ್ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ, 4.30 ನೆನಪಿನಂಗಳ, 6.50 ಕೃಷಿರಂಗ–ತೋರಣ ಹೂರಣ– ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ– ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರ್ ಉಮೇಶ್, ಪರಾಗ–ಬೇಸಾಯದ ಬದುಕು ಸರಾಗ– ಬಾನುಲಿ ಸರಣಿ, 8.00 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಡಾ. ನಾಗವಲ್ಲಿ ನಾಗರಾಜ್ – ಹಾಡುಗಾರಿಕೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ವೆರಿಕೋಸ್ ವೇನ್ಸ್ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆ. 9 ರಿಂದ.

■ **ಬ್ಯಾಂಕ್ ಆಫ್ ಬರೋಡಾ :** ವಾಕಥಾನ್––2024, ಸ್ಥಳ: ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ, ಪಿ. ಕಾಳಿಂಗರಾವ್ ಮಂಟಪ, ಬೆಳಗ್ಗೆ 9ರಿಂದ.

■ **ಟೆರೇಷಿಯನ್ ಕಾಲೇಜು :** ಬಹುಶಿಸ್ತಿನ ಸಂಶೋಧನೆ ಮತ್ತು ಅಭ್ಯಾಸ : ಸಮಸ್ಯೆಗಳು ಮತ್ತು ಸವಾಲುಗಳು ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ, ಪ್ರಾಸ್ತಾವಿಕ ನುಡಿ : ಡಾ. ಶಿರೂಜ್ ಜಬೋಲಿ, ಅಧ್ಯಕ್ಷತೆ : ಟೆರೇಷಿಯನ್ ಕಾಲೇಜು ನಿರ್ದೇಶಕ ಡಾ. ಜುನಿತಾ, ಸ್ಥಳ: ಅವೆ ಮರಿಯಾ ಜ್ಯೂಬಿಲಿ ಸಭಾಂಗಣ, ಟೆರೇಷಿಯನ್ ಕಾಲೇಜು, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಜಾಗೃತ ಕರ್ನಾಟಕ :** ಕುವೆಂಪು ಅವರ 'ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ' ಮತ್ತು 'ವಿಚಾರ ಕ್ರಾಂತಿಗೆ ಆಹ್ವಾನ' ಎಂಬ ಎರಡು ಯುಗಪ್ರವರ್ತಕ ಭಾಷಣಗಳಿಗೆ 50 ವರ್ಷ ತುಂಬುತ್ತಿರುವ ನೆನಪಿನಲ್ಲಿ.. ಕುವೆಂಪು ಕ್ರಾಂತಿ ಕಹಳೆ–50 ಕವಿವಾಣಿಯಿಂದ ಕರ್ನಾಟಕ ಮಾದರಿಯೆಡೆಗೆ ಕಾರ್ಯಕ್ರಮ, ಉದ್ಘಾಟನೆ : ಮಾಜಿ ಸಚಿವೆ ಬಿ.ಟಿ. ಲಲಿತಾ ನಾಯಕ್, ಅಧ್ಯಕ್ಷತೆ : ಕೆ.ವಿ. ನಾರಾಯಣ, ಪ್ರಧಾನ ಭಾಷಣ : ಎಲ್.ಎನ್. ಮುಕುಂದರಾಜ್, ಭಾಷಣಗಳ ಆಯ್ದ ಓದು : ಡಾಲಿ ಧನಂಜಯ್, ಯುವ ಸ್ಪಂದನೆ : ಡಾ. ಕಾವೇರಿ–ಕೊಡಗು, ಕಾವ್ಯಶ್ರೀ–ಬೆಂಗಳೂರು, ಬಾಲಾಜಿ ಕುಂಬಾರ್–ಔರಾದ್, ಡಾ. ಮುಸ್ತಫಾ ಕೆ.ಎಚ್.–ಮಡಿಕೇರಿ, ಮಹೇಶ್ ಸಿ ಮತ್ತು ಧನಲಕ್ಷ್ಮಿ–ಮೈಸೂರು ವಿವಿ ಸಂಶೋಧಕರು, ಸ್ಥಳ: ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಬೆಳಗ್ಗೆ 10ಕ್ಕೆ.

■ **ಪರಿದೃಶ್ಯ, ಮೈಸೂರು ಸಿನಿಮಾ ಸೊಸೈಟಿ :** ಅಂತರಾಷ್ಟ್ರೀಯ ಕಿರುಚಿತ್ರ ಮತ್ತು ಸಾಕ್ಷ್ಯಚಿತ್ರೋತ್ಸವ, ಮುಖ್ಯ ಅತಿಥಿಗಳು, ದಿಕ್ಸೂಚಿ ಭಾಷಣ : ನಟ, ನಿರ್ದೇಶಕ, ರಂಗ ತಜ್ಞ ಪ್ರಕಾಶ್ ಬೆಳವಾಡಿ, ಗೌರವ ಅತಿಥಿಗಳು : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಶರಣಪ್ಪ ವಿ. ಹಲಸೆ, ಮುಖ್ಯ ಅತಿಥಿಗಳು : ಮೈಸೂರು ಮಿತ್ರ ಹಾಗೂ ಸ್ಟಾರ್ ಆಫ್ ಮೈಸೂರು ಸಂಸ್ಥಾಪಕ ಸಂಪಾದಕ ಕೆ.ಬಿ. ಗಣಪತಿ, ಅಧ್ಯಕ್ಷತೆ : ಕಾವೇರಿ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ. ಜಿ.ಆರ್. ಚಂದ್ರಶೇಖರ್, ಸ್ಥಳ: ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಕಾವೇರಿ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಶ್ರೀ ಬಸವೇಶ್ವರ ವಧು–ವರ ವಿವಾಹ ವೇದಿಕೆ :** ವೀರಶೈವ ಲಿಂಗಾಯತ ವಧು–ವರರ ಸಮಾವೇಶ, ಸಾನ್ನಿಧ್ಯ : ಶ್ರೀ ವಿಷ್ಣು ಸಾಲಿಗ್ರಾಮ ಸ್ವಾಮೀಜಿ, ಉದ್ಘಾಟನೆ : ಸಾಹಿತಿ ಬನ್ನೂರು ಕೆ. ರಾಜು, ಅಧ್ಯಕ್ಷತೆ : ಕನ್ನಡಪರ ಹೋರಾಟಗಾರ ತಾಯೂರು ವಿಠಲಮೂರ್ತಿ, ವಿಶೇಷ ಆಹ್ವಾನಿತರು : ಚಲನಚಿತ್ರ ನಟ ಸುಪ್ರೀತ್, ಡಾ. ಎಂ.ಜಿ.ಆರ್. ಅರಸ್, ಡಾ. ಕೆ.ಲೀಲಾ ಪ್ರಕಾಶ್, ಸ್ಥಳ: ವಿದ್ಯಾಭಾರತಿ ಕಲ್ಯಾಣ ಮಂಟಪ, ಗನ್‌ಹೌಸ್ ಹತ್ತಿರ, ಬೆಳಗ್ಗೆ 11ಕ್ಕೆ.

■ **ಸುರುಚಿ ರಂಗ ಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 813, ಕಥೆ ಹೇಳುವವರು: ಶ್ರೀಮತಿ ಮಂಜುಳ, ನಿವೃತ್ತ ಉಪ ನಿರ್ದೇಶಕರು, ಶಿಕ್ಷಣ ಇಲಾಖೆ, ಮೈಸೂರು, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.

■ **ಮಹತೀ ಮ್ಯೂಸಿಕಲ್ ಗ್ರೂಪ್:** ಗಾಯಕ ಎಂ.ವಿ.ಗೋವಿಂದರಾಜು ಸ್ಮರಣಾರ್ಥ ಗೀತ ನಮನ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಸಂಗೀತಾ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 4.30ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ ಲಲಿತ ಕಲಾ ಕಾಲೇಜು, ಶ್ರೀ ಗುಬ್ಬಿ ವೀರಣ್ಣ ಪೀಠ, ಭಾರತೀಯ ರಂಗ ಶಿಕ್ಷಣ ಕೇಂದ್ರ, ರಂಗಾಯಣ, ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ :** 'ರಂಗ ಸಂಯುಕ್ತ', ರಂಗಭೂಮಿ ಹಾಗೂ ರಂಗಭೂಮಿಯ ಪೂರಕ ಕಲೆಗಳ ಉಪನ್ಯಾಸ ಮಾಲಿಕೆ, ರಂಗಾಯಣ ಮಾಜಿ ನಿರ್ದೇಶಕ ಹೆಚ್. ಜನಾರ್ಧನ್ (ಜನ್ನಿ) ಅವರಿಂದ ಅಭಿವ್ಯಕ್ತಿ ಕುರಿತು ಉಪನ್ಯಾಸ, ಸ್ಥಳ: ಬಿ.ವಿ. ಕಾರಂತ ರಂಗ ಚಾವಡಿ, ರಂಗಾಯಣ, ಸಂಜೆ 5 ರಿಂದ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು, ಸಂವಹನ ಪ್ರಕಾಶನ :** ಡಾ. ರಾಗೌ ಅವರ ಎರಡು ನಾಟಕಗಳು ಮತ್ತು ಪಂಪಪುನರಾಲೋಕನ ಕೃತಿಗಳ ಲೋಕಾರ್ಪಣೆ ಸಮಾರಂಭ, ಕೃತಿಗಳ ಲೋಕಾರ್ಪಣೆ: ಹಂಪಿ ಕನ್ನಡ ವಿವಿ ಕುಲಪತಿ ಪ್ರೊ. ಡಿ.ಎಂ. ಪರಮಶಿವಮೂರ್ತಿ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕೃತಿ ಕುರಿತು ಮಾತನಾಡುವವರು : ಪ್ರಾಧ್ಯಾಪಕ ಪ್ರೊ. ಮೈಸೂರು ಕೃಷ್ಣಮೂರ್ತಿ, ಪ್ರೊ. ಮೊರಬದ ಮಲ್ಲಿಕಾರ್ಜುನ, ಮುಖ್ಯ ಅತಿಥಿಗಳು: ಮಂಡ್ಯ ಕರ್ನಾಟಕ ಸಂಘ ಅಧ್ಯಕ್ಷ ಪ್ರೊ. ಜಯಪ್ರಕಾಶಗೌಡ, ಉಪಸ್ಥಿತರು : ಕೃತಿಕಾರರಾದ ಡಾ. ರಾಗೌ, ಪ್ರಕಾಶಕರಾದ ಡಿ.ಎನ್. ಲೋಕಪ್ಪ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.

■ **ಇಂಡಿಯನ್ ಹೆರಿಟೇಜ್ ಸಿಟಿಸ್ ನೆಟ್‌ವರ್ಕ್ ಫೌಂಡೇಷನ್ :** ಅಕ್ಕ–ವಚನ–ಜೀವನ, ಅಕ್ಕ ಮಹಾದೇವಿಯ ಜೀವನ ಮತ್ತು ವಚನಗಳ ಸಂಗೀತ ಸಂಜೆ, ಕಥೆಗಳು ಮತ್ತು ವಚನಗಳು – ಡಾ. ಗಿಲ್ ಬೆನ್–ಹೆರುತ್ (ಯೂನಿವರ್ಸಿಟಿ ಆಫ್ ಸೌತ್ ಫ್ಲೋರಿಡಾ), ಸಂಗೀತ : ಶ್ರೀರಂಜಿನಿ (ಶಾಸ್ತ್ರೀಯ ಗಾಯಕಿ), ಸ್ಥಳ: ಹೆರಿಟೇಜ್ ಹೌಸ್, ಅಗ್ನಿ ಶಾಮಕ ದಳದ ರಸ್ತೆ, ಸರಸ್ವತಿಪುರಂ, ಕುಕ್ಕರಹಳ್ಳಿ ಕೆರೆ ಹತ್ತಿರ, ಸಂಜೆ 6 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇಧಾನಂದ ಅವರಿಂದ ಉಪನ್ಯಾಸ, ಸ್ಥಳ: ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಹೆಚ್.ಎಂ. ವಿಶ್ವನಾಥ ಶಾಸ್ತ್ರಿ ಅವರಿಂದ ಆರ್‌ಸಿಸಿ ಬ್ಲಾಂಕೆಟ್ ವಾಲ್ ಕುರಿತು ತಾಂತ್ರಿಕ ಉಪನ್ಯಾಸ, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಪರಂಪರೆ :** ಗಿರಿಜಾ ಕಲ್ಯಾಣ ಸಪ್ತಾಹ, ಡಾ. ಜ್ಯೋತಿಶಂಕರ್ ಅವರಿಂದ ಗಿರಿಜಾ ಕಲ್ಯಾಣ–ಪಾರ್ವತಿಯ ತಪಸ್ಸು ಕುರಿತು ಪ್ರವಚನ, ವಾಗ್ದೇವಿ ಸಂಗೀತ ಶಾಲೆಯವರಿಂದ ಹಾಡುಗಳು, ಸ್ಥಳ: ಗಣಪತಿ ದೇವಸ್ಥಾನದ ರಜತ್ ಸಭಾಂಗಣ, ಐ ಬ್ಲಾಕ್, ರಾಮಕೃಷ್ಣನಗರ, ಸಂಜೆ 6 ಗಂಟೆಯಿಂದ.

■ **ನಟನ ರಂಗಶಾಲೆ :** ವಾರಾಂತ್ಯ ರಂಗ ಪ್ರದರ್ಶನ, ರಂಗಭೂಮಿ ಡಿಪ್ಲೋಮಾ ವಿದ್ಯಾರ್ಥಿಗಳಿಂದ ಕನ್ನಡ ಕಾವ್ಯಕಣಜ ನಾಟಕ ಪ್ರದರ್ಶನ, ನಿರ್ದೇಶನ : ರಂಗಕರ್ಮಿ ಡಾ. ಶ್ರೀಪಾದ ಭಟ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

ಮೈಸೂರು ಮಿತ್ರ ಶನಿವಾರ 3 ಫೆಬ್ರವರಿ 2024

ದೇಶ ಒಡೆಯುವ ಬಗ್ಗೆ ಯಾರೇ ಮಾತನಾಡಿದರೂ ಸಹಿಸಲ್ಲ

ಕಾಂಗ್ರೆಸ್ ಕ್ಷಮೆಯಾಚನೆಗೆ ಪ್ರಹ್ಲಾದ್ ಜೋಶಿ ಆಗ್ರಹ


ಖರ್ಗೆ

ನವದೆಹಲಿ, ಫೆ.2– ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ಅವರ ಪ್ರತ್ಯೇಕ ರಾಷ್ಟ್ರ ಹೇಳಿಕೆ ಸಂಸತ್ತಿನಲ್ಲಿ ಭಾರೀ ಗದ್ದಲ, ಕೋಲಾಹಲಕ್ಕೆ ಕಾರಣವಾಗಿದೆ. ಕಾಂಗ್ರೆಸ್ ಸಂಸದ ಸುರೇಶ್ ಅವರು ಸದನದಲ್ಲಿ ಬೇಷರತ್ ಕ್ಷಮೆಯಾಚಿಸಬೇಕೆಂದು ಆಡಳಿತ ಪಕ್ಷದ ಸದಸ್ಯರು ಆಗ್ರಹಿಸುತ್ತಿದ್ದಾರೆ.

ಡಿ.ಕೆ.ಸುರೇಶ್ ಹೇಳಿಕೆ ಬಗ್ಗೆ ಕೇಂದ್ರ ಸಚಿವ ಪಿಯೂಶ್ ಗೋಯಲ್ ಇಂದು ರಾಜ್ಯಸಭೆಯಲ್ಲಿ ಪ್ರಸ್ತಾಪ ಮಾಡಿದರು. ಜೊತೆಗೆ ಕಾಂಗ್ರೆಸ್ ಪಕ್ಷ ಈ ಬಗ್ಗೆ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು. ಇದಕ್ಕೆ ಸದನದಲ್ಲಿಯೇ ಉತ್ತರಿಸಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಮ್ಮ ಪಕ್ಷದ ಸಂಸದರು ನೀಡಿರುವ ಹೇಳಿಕೆಯನ್ನು ಖಂಡಿತಾ ಒಪ್ಪುವುದಿಲ್ಲ ಎಂದಿದ್ದಾರೆ.

ಇಂದು ರಾಜ್ಯಸಭೆ ಕಲಾಪದ ವೇಳೆ ಈ ವಿಚಾರವಾಗಿ ಪ್ರಸ್ತಾಪಿಸಿದ ಅವರು, ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ನಾವು ಒಗ್ಗಟ್ಟಾಗಿದ್ದೇವೆ. ಭಾರತಕ್ಕಾಗಿ ಕಾಂಗ್ರೆಸ್ ನಾಯಕಿ ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ತ್ಯಾಗ ಬಲಿದಾನ ಮಾಡಿದ್ದಾರೆ. ದೇಶ ಒಡೆಯುವ ಬಗ್ಗೆ ಯಾರೇ ಮಾತನಾಡಿದರೂ ಸಹಿಸಲ್ಲ. ಯಾವುದೇ ಪಕ್ಷದವರಾಗಿರಲಿ ನಾವು ಸಹಿಸುವ ಪ್ರಶ್ನೆಯೇ ಇಲ್ಲ ಎಂದು ಖರ್ಗೆ ಹೇಳಿದರು. ಕಾಂಗ್ರೆಸ್ ಸಂಸದ ಡಿ.ಕೆ.ಸುರೇಶ್ 'ಪ್ರತ್ಯೇಕ ದೇಶ' ಹೇಳಿಕೆಯನ್ನು ಪಿಯೂಷ್ ಗೋಯಲ್ ರಾಜ್ಯಸಭೆಯಲ್ಲಿ ಪ್ರಸ್ತಾಪಿಸಿದರು. ಈ ಹೇಳಿಕೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕ್ಷಮೆಯಾಚಿಸಬೇಕು ಎಂದು ಅವರು ಆಗ್ರಹಿಸಿದರು. ಇದಕ್ಕೆ ಸ್ಪಷ್ಟನೆ ನೀಡಿದ ಖರ್ಗೆ, ದೇಶ ವಿಭಜಿಸುವ ಮಾತುಗಳನ್ನು ಯಾರೇ ಆಡಿದರೂ ಸಹಿಸಲ್ಲ ಎಂದರು.

ಕಾಂಗ್ರೆಸ್ ಕ್ಷಮೆಯಾಚನೆಗೆ ಪ್ರಹ್ಲಾದ್ ಜೋಶಿ ಆಗ್ರಹ: ಇನ್ನು ಡಿಕೆ ಸುರೇಶ್ ಹೇಳಿಕೆಯನ್ನು ಲೋಕಸಭೆಯಲ್ಲಿ ಪ್ರಸ್ತಾಪಿಸಿದ ಸಚಿವ ಪ್ರಹ್ಲಾದ್ ಜೋಶಿ, ದೇಶವಿಭಜನೆ ಬಗ್ಗೆ ಮಾತನಾಡಿ ಸಂವಿಧಾನಕ್ಕೆ ಅಪಮಾನ ಮಾಡಿದ್ದಾರೆ. ಅನುದಾನ ನೀಡುತ್ತಿಲ್ಲ ಎಂಬ ಸುಳ್ಳು ಆರೋಪ ಮಾಡಿ ವಿಭಜನೆ ಬಗ್ಗೆ ಮಾತನಾಡಿದ್ದಾರೆ. ದೇಶ ವಿಭಜನೆ ಮಾಡುವ ಕಾಂಗ್ರೆಸ್‌ನ ಪ್ರಯತ್ನ ಇನ್ನೂ ಮುಂದುವರೆದಿದೆ. ಈ ಬಗ್ಗೆ ಕಾಂಗ್ರೆಸ್ ಸ್ಪಷ್ಟನೆ ನೀಡಬೇಕು ಹಾಗೂ ಕ್ಷಮೆ ಕೇಳಬೇಕು. ಇದು ಸಂವಿಧಾನಕ್ಕೆ ಮಾಡಿದ ಘೋರ ಅಪಮಾನ. ಅಷ್ಟೆ ಅಲ್ಲದೆ ತನಿಖೆಯನ್ನು ನೈತಿಕ ಸಮಿತಿಗೆ ವಹಿಸಬೇಕು ಎಂದು ಆಗ್ರಹಿಸಿದ್ದಾರೆ.

ಡಿ.ಕೆ.ಸುರೇಶ್ ನಿನ್ನೆ ಏನು ಹೇಳಿದ್ದರು: ಕೇಂದ್ರ ಬಜೆಟ್ ಬಗ್ಗೆ ಪ್ರತಿಕ್ರಿಯಿಸಿದ್ದ ಡಿಕೆ ಸುರೇಶ್, ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಹೊಸತೇನನ್ನೂ ಕೊಟ್ಟಿಲ್ಲ. ಕೇಂದ್ರ ಸರ್ಕಾರವು ದಕ್ಷಿಣ ಭಾರತದ ರಾಜ್ಯಗಳಿಗೆ ಹಣ ಬಿಡುಗಡೆ ಮಾಡುತ್ತಿಲ್ಲ. ಹೀಗೆಯೇ ಅನ್ಯಾಯ ಆಗುತ್ತಿದ್ದರೆ ನಾವು ಪ್ರತ್ಯೇಕ ರಾಷ್ಟ್ರ ಕೇಳಬೇಕಾಗುತ್ತದೆ. ದಕ್ಷಿಣ ಭಾರತದವರು ಧ್ವನಿ ಎತ್ತಬೇಕಾಗುತ್ತದೆ ಎಂದು ಹೇಳಿದ್ದರು.

2ನೇ ಟೆಸ್ಟ್: ಮೊದಲ ದಿನದಂತ್ಯಕ್ಕೆ ಭಾರತ 336/6

ವಿಶಾಖಪಟ್ಟಣ, ಫೆ.2– ಪ್ರಮುಖ ಬ್ಯಾಟ್ಸ್‌ಮನ್‌ಗಳ ವೈಫಲ್ಯದ ಹೊರತಾಗಿಯೂ ಯುವ ಆಟಗಾರ ಯಶಸ್ವಿ ಜೈಸ್ವಾಲ್ ಅವರ ಭರ್ಜರಿ ಶತಕದ ನೆರವಿನಿಂದ ಭಾರತ ಇಂಗ್ಲೆಂಡ್ ವಿರುದ್ಧ 2ನೇ ಟೆಸ್ಟ್ ಪಂದ್ಯದ ಮೊದಲ ದಿನದಂತ್ಯಕ್ಕೆ 93 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 336 ರನ್ ಗಳಿಸಿದೆ.

ಇಲ್ಲಿನ ಡಾ.ವೈ.ಎಸ್.ರಾಜಶೇಖರ ರೆಡ್ಡಿ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ, ತಂಡದ ಮೊತ್ತ 40 ರನ್ ಆಗುವಷ್ಟರಲ್ಲಿ ನಾಯಕ ರೋಹಿತ್ ಶರ್ಮಾ 14 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಶುಭ್‌ಮನ್ ಗಿಲ್ 34, ಶ್ರೇಯಸ್ ಅಯ್ಯರ್ 27, ರಜತ್ ಪಾಟಿದಾರ್ 32 ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ಅಕ್ಷರ್ ಪಟೇಲ್ 27 ರನ್ ಗಳಿಸಿದರೇ, ಕೆ.ಎಸ್.ಭರತ್ 17 ರನ್ ಗಳಿಸಿ ಔಟಾದರು.

ಜೈಸ್ವಾಲ್ ಶತಕ: ಒಂದೆಡೆ ವಿಕೆಟ್ ಬೀಳುತ್ತಿದ್ದರೂ, ಮತ್ತೊಂದೆಡೆ ಇಂಗ್ಲೆಂಡ್ ಬೌಲರ್‌ಗಳನ್ನು ಸಮರ್ಥವಾಗಿ ಎದುರಿಸಿದ ಜೈಸ್ವಾಲ್ ಜವಾಬ್ದಾರಿಯುತವಾಗಿ ಬ್ಯಾಟ್ ಮಾಡಿ 151 ಎಸೆತಗಳಲ್ಲಿ ಟೆಸ್ಟ್ ವೃತ್ತಿ ಜೀವನದ ಎರಡನೇ ಶತಕ ಸಿಡಿಸಿ ಮಿಂಚಿದರು. ಅಂತಿಮವಾಗಿ ಮೊದಲ ದಿನದಂತ್ಯಕ್ಕೆ 257 ಎಸೆತಗಳಲ್ಲಿ 5 ಸಿಕ್ಸರ್, 17 ಬೌಂಡರಿ ಒಳಗೊಂಡ ಅಜೇಯ 179 ರನ್ ಗಳಿಸಿರುವ ಜೈಸ್ವಾಲ್ ಹಾಗೂ 7 ರನ್ ಗಳಿಸಿರುವ ರವಿಚಂದ್ರನ್ ಅಶ್ವಿನ್ 2ನೇ ದಿನಕ್ಕೆ ಬ್ಯಾಟಿಂಗ್ ಕಾಯ್ದು ಕೊಂಡಿದ್ದಾರೆ. ಇಂಗ್ಲೆಂಡ್ ಪರ ರೆಹಾನ್ ಅಹ್ಮದ್, ಶೋಯೆಬ್ ಮುಶೀರ್ ತಲಾ 2, ಜೇಮ್ಸ್ ಆಂಡರ್‌ಸನ್, ಟಾಮ್ ಹಾರ್ಟ್ಲಿ ತಲಾ ಒಂದೊಂದು ವಿಕೆಟ್ ಕಬಳಿಸಿದರು.


ಮೈಸೂರಿನ ಹೋಟೆಲ್ ಸದರನ್ ಸ್ಟಾರ್‌ನಲ್ಲಿ ಶುಕ್ರವಾರ ಬೆಳಿಗ್ಗೆ ಪನಾಚೆ ಅತ್ಯಾಕರ್ಷಕ ಫ್ಯಾಷನ್ ಹಾಗೂ ಲೈಫ್‌ಸ್ಟೈಲ್ ಎಕ್ಸಿಬಿಷನ್ ಆರಂಭವಾಯಿತು. 2 ದಿನಗಳ ಈ ಪ್ರದರ್ಶನವನ್ನು ದಿಯಾ ಫೌಂಡೇಶನ್‌ನ ಸಂಸ್ಥಾಪಕ ಟ್ರಸ್ಟಿ ನಮ್ರತಾ ಶೆಣೈ (ಮಧ್ಯದಲ್ಲಿರುವವರು) ಉದ್ಘಾಟಿಸಿದರು. ಈ ವೇಳೆ ಪ್ರದರ್ಶನ ಆಯೋಜಕರಾದ ಸಹನಾ ಸುಮಂತ್ ಮತ್ತು ಸಿಂಧು ವಿಕ್ರಮ್ ಉಪಸ್ಥಿತರಿದ್ದರು. ಭಾರತದ ಸುಮಾರು 40ಕ್ಕೂ ಅಧಿಕ ವಿನ್ಯಾಸಕಾರರು ಈ ಪ್ರದರ್ಶನದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಬೆಳಿಗ್ಗೆ 10.30ರಿಂದ ರಾತ್ರಿ 8 ಗಂಟೆಯವರೆಗೆ ತೆರೆದಿದ್ದು, ಶನಿವಾರ ಕಡೆದಿನ.

32 ವರ್ಷಕ್ಕೆ ಇಹಲೋಕ ತ್ಯಜಿಸಿದ ನಟಿ ಪೂನಂ ಪಾಂಡೆ



ಮುಂಬಯಿ, ಫೆ.2– ವಿವಾದಗಳಿಂದಲೇ ಹೆಸರಾಗಿದ್ದ ಬಾಲಿವುಡ್ ನಟಿ, ಮಾಡೆಲ್ ಪೂನಂ ಪಾಂಡೆ ಹಠಾತ್ ನಿಧನರಾಗಿದ್ದಾರೆ. ಈ ಸುದ್ದಿಯನ್ನು ಅವರ ಮ್ಯಾನೇಜರ್ ಇನ್ಸ್ಟಾಗ್ರಾಮ್ ಖಾತೆಯಲ್ಲಿ ಖಚಿತಪಡಿಸಿದ್ದಾರೆ.

ಪೂನಂ ಅವರು ಗರ್ಭಕೋಶದ ಕ್ಯಾನ್ಸರ್‌ನಿಂದ ಬಳಲುತ್ತಿದ್ದು, ಗುರುವಾರ ತಡರಾತ್ರಿ ಕಾನ್ಪುರದಲ್ಲಿ ನಿಧನ ಹೊಂದಿದ್ದಾರೆ. 2 ವರ್ಷದಿಂದ ಪೂನಂ ಪಾಂಡೆ ಗಂಭೀರ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದರು ಎಂದು ಹೇಳಲಾಗಿದೆ ಈ ವಿಷಯವನ್ನು ನಟಿಯ ತಂಡ ತನ್ನ ಇನ್ಸ್ಟಾಗ್ರಾಮ್ ಖಾತೆಯಲ್ಲಿ ಬಹಿರಂಗಪಡಿಸಿದೆ. ಅದರಲ್ಲಿ ನಮ್ಮ ಪ್ರೀತಿಯ ಪೂನಂ ಅವರನ್ನು ಗರ್ಭಕಂಠದ ಕ್ಯಾನ್ಸರ್‌ನಿಂದ ಕಳೆದುಕೊಂಡಿದ್ದೇವೆ ಎಂದು ಘೋಷಿಸಲು ನಮಗೆ ದುಃಖವಾಗಿದೆ ಎಂದು ಬರೆದುಕೊಂಡಿದ್ದಾರೆ.

ನಟಿಯ ಸಾವಿನ ಸುದ್ದಿ ಕೇಳಿ ಅಭಿಮಾನಿಗಳು ತೀವ್ರ ಆಘಾತಕ್ಕೆ ಒಳಗಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುವ ಮೂಲಕ ತಮ್ಮ ದುಃಖವನ್ನು ವ್ಯಕ್ತಪಡಿಸುತ್ತಿದ್ದಾರೆ.

ಪೂನಂ ಪಾಂಡೆ 2013ರ 'ನಶಾ' ಚಿತ್ರದ ಮೂಲಕ ಬಾಲಿವುಡ್‌ಗೆ ಪಾದಾರ್ಪಣೆ ಮಾಡಿದರು. 'ಲವ್ ಈಸ್ ಪಾಯಿಸನ್' ಹೆಸರಿನ ಕನ್ನಡ ಸಿನಿಮಾದಲ್ಲಿ ವಿಶೇಷ ಹಾಡಿಗೆ ಹೆಜ್ಜೆ ಹಾಕಿದ್ದರು. ಅಷ್ಟು ಮಾತ್ರವಲ್ಲದೆ ತೆಲುಗು, ಬೋಜ್‌ಪುರಿ ಚಿತ್ರಗಳಲ್ಲೂ ಪೂನಂ ನಟಿಸಿದ್ದಾರೆ. ಅವರು ಕೊನೆಯ ಬಾರಿಗೆ 'ಲಾಕ್ ಅಪ್' ರಿಯಾಲಿಟಿ ಶೋನಲ್ಲಿ ಕಾಣಿಸಿಕೊಂಡರು.

ಮೈಸೂರು ಹಳೆ ಕೆಸರೆ ಘನತ್ಯಾಜ್ಯ ನಿರ್ವಹಣಾ ಘಟಕ ಸ್ಥಳಾಂತರಕ್ಕೆ ಶಾಸಕ ಜಿ.ಟಿ.ದೇವೇಗೌಡರ ಸೂಚನೆ

- ಈ ಭಾಗದ ಜನರ ಮನವಿಯಂತೆ ಶೀಘ್ರ ಸ್ಥಳಾಂತರಕ್ಕೆ ಪಾಲಿಕೆ ಅಧಿಕಾರಿಗಳಿಗೆ ಸಲಹೆ
- ಸಮರ್ಪಕ ಕುಡಿಯುವ ನೀರು ಪೂರೈಕೆಗೆ ನಿರ್ದೇಶನ


ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳೊಂದಿಗೆ ಶಾಸಕ ಜಿ.ಟಿ.ದೇವೇಗೌಡರು ಸಭೆ ನಡೆಸಿ, ಹಲವು ವಿಚಾರಗಳ ಬಗ್ಗೆ ಚರ್ಚಿಸಿದರು.

ಮೈಸೂರು, ಫೆ.2(ಎಸ್‌ಬಿಡಿ)– ಮೈಸೂರಿನ ಹಳೆ ಕೆಸರೆಯಲ್ಲಿ ಪ್ರಾರಂಭಿಸಿರುವ ಘನತ್ಯಾಜ್ಯ ನಿರ್ವಹಣಾ ಘಟಕವನ್ನು ಸೂಕ್ತ ಜಾಗಕ್ಕೆ ಸ್ಥಳಾಂತರ ಮಾಡುವಂತೆ ಶಾಸಕ ಜಿ.ಟಿ.ದೇವೇಗೌಡರು ನಗರಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ವ್ಯಾಪ್ತಿಯ ಸಮಸ್ಯೆ ಹಾಗೂ ಅಗತ್ಯತೆ ಸಂಬಂಧ ಮೈಸೂರು ಮಹಾನಗರ ಪಾಲಿಕೆ, ಹೂಟಗಳ್ಳಿ ನಗರಸಭೆ, ರಮ್ಮನಹಳ್ಳಿ, ಶ್ರೀರಾಂಪುರ, ಬೋಗಾದಿ ಮತ್ತು ಕಡಕೊಳ ಪಟ್ಟಣ ಪಂಚಾಯಿತಿ ಅಧಿಕಾರಿಗಳೊಂದಿಗೆ ನಗರದ ಜಲದರ್ಶಿನಿ ಅತಿಥಿಗೃಹದಲ್ಲಿನ ಶಾಸಕರ ಕಛೇರಿಯಲ್ಲಿ ಶುಕ್ರವಾರ ನಡೆಸಿದ ಸಭೆಯಲ್ಲಿ ಅವರು ಈ ಸೂಚನೆ ನೀಡಿದರು.


ಹಳೆ ಕೆಸರೆಯಲ್ಲಿ ಕಸ ಸಂಸ್ಕರಣಾ ಘಟಕ ಆರಂಭಿಸಿರುವುದರಿಂದ ಹಲವು ಸಮಸ್ಯೆಗಳು ಸೃಷ್ಟಿಯಾಗಿವೆ ಎಂದು ಸ್ಥಳೀಯರು, ಕಾಮನಕೆರೆಹುಂಡಿ ಸೇರಿದಂತೆ ಸುತ್ತಮುತ್ತಲಿನ ಹಲವು ಬಡಾವಣೆಗಳ ನಿವಾಸಿಗಳು ಈಗಾಗಲೇ ಪ್ರತಿಭಟನೆ ಮಾಡಿದ್ದಾರೆ. ಈ ಸಮಸ್ಯೆ ಕಗ್ಗಂಟಾಗುವ ಮುನ್ನ ಜನರಿಗೆ ತೊಂದರೆಯಾಗದಂತಹ ಸೂಕ್ತ ಜಾಗಕ್ಕೆ ಘಟಕ ಸ್ಥಳಾಂತರಕ್ಕೆ ಕ್ರಮ ಕೈಗೊಳ್ಳುವಂತೆ ತಿಳಿಸಿದರು. ಬೇಸಿಗೆ ಪ್ರಾರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಕ್ಷೇತ್ರದ ಯಾವ ಭಾಗದಲ್ಲೂ ಕುಡಿಯುವ ನೀರಿಗೆ ತೊಂದರೆಯಾಗದಂತೆ ಈಗಿನಿಂದಲೇ ನಿಗಾ ವಹಿಸಬೇಕು. ಕಬಿನಿಯಿಂದ ತಳೂರು ಯೋಜನೆಗೆ ಹೆಚ್ಚು ಪ್ರಮಾಣದ ನೀರು ಒದಗಿಸಬೇಕು. ಸಮಸ್ಯೆ ಕಾಣಿಸಿಕೊಳ್ಳುವುದಕ್ಕೂ ಮುನ್ನವೇ ಈ ಅಧಿಕಾರಿಗಳು ಪರಿಶೀಲನೆ ನಡೆಸಿ, ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು. ವಿಜಯನಗರ 3ನೇ ಹಂತದಲ್ಲಿ ಯಾವುದೇ ಪರವಾನಗಿ ಇಲ್ಲದೆಯೇ ಹಲವು ಅಂಗಡಿ, ಹೋಟೆಲ್‌ಗಳನ್ನು ತೆರೆಯಲಾಗಿದೆ ಎಂಬ ದೂರುಗಳು ಕೇಳಿಬಂದಿವೆ. ಈ ಬಗ್ಗೆ ಪರಿಶೀಲನೆ ನಡೆಸಿ, ನಿಯಮಾನುಸಾರ ಕ್ರಮ ವಹಿಸಬೇಕು. ನಿಯಮಬದ್ಧವಾಗಿರುವ ಅಂಗಡಿಗಳಿಗೆ ಪರವಾನಗಿ ನೀಡಬೇಕು ಎಂದು ತಿಳಿಸಿದರು. ಹಲವು ಬಡಾವಣೆಗಳಲ್ಲಿ ಯುಜಿಡಿ ನೀರು, ಮಳೆ ನೀರು ಚರಂಡಿಗೆ ಹರಿಯುತ್ತಿರುವುದರಿಂದ ಅಕ್ಕಪಕ್ಕದ ನಿವಾಸಿಗಳಿಗೆ ಸಮಸ್ಯೆಯಾಗಿದೆ. ಈ ಬಗ್ಗೆ ಪರಿಶೀಲನೆ ನಡೆಸಿ, ಮಳೆ ನೀರು ಚರಂಡಿಗಳಿಗೆ ಯುಜಿಡಿ ಸಂಪರ್ಕ ನೀಡಿರುವುದನ್ನು ಪತ್ತೆ ಹಚ್ಚಿ ಅಂತಹವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು. ಖಾಸಗಿ ಬಡಾವಣೆಗಳನ್ನು ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೆ ಹಸ್ತಾಂತರ ಮಾಡಿಕೊಳ್ಳುವ ಸಂದರ್ಭದಲ್ಲಿ ಜಂಟಿ ಸಮೀಕ್ಷೆ ನಡೆಸಿ, ಅಲ್ಲಿ ಜನಜೀವನಕ್ಕೆ ಅಗತ್ಯವಾದ ಎಲ್ಲಾ ಮೂಲ ಸೌಕರ್ಯ ಕಲ್ಪಿಸಿರುವುದು ಹಾಗೂ ಬಾಕಿ ಕಾಮಗಾರಿಗಳ ಬಗ್ಗೆ ಸ್ಪಷ್ಟಪಡಿಸಿ ಕೊಳ್ಳಬೇಕು ಎಂದರು.

ನಗರಸಭೆ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಸರ್ಕಾರಿ ಶಾಲೆಗಳಿಗೆ ಇ-ಸ್ವತ್ತನ್ನು ಕೂಡಲೇ ನೀಡಬೇಕು. ಪಾಲಿಕೆ, ನಗರಸಭೆ ಮತ್ತು ಪಟ್ಟಣ ಪಂಚಾಯಿತಿಯಲ್ಲಿ ಕೆರೆಗಳ ಸಂರಕ್ಷಣೆಗೆ ಅಗತ್ಯವಾದ ಅನುದಾನವನ್ನು ಮೀಸಲಿಡಬೇಕು. ನೀರಿನ ಮೂಲಗಳ ಸಂರಕ್ಷಣೆಗೆ ಹೆಚ್ಚು ಆದ್ಯತೆ ನೀಡಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಕ್ಷೇತ್ರದ ಮುಖಂಡರಾದ ಹೆಚ್.ಸಿ.ರಾಜು, ಹೂಟಗಳ್ಳಿ ಸುರೇಶ್, ಮಹೇಶ್, ಮೈಸೂರು ನಗರ ಪಾಲಿಕೆ ಆಯುಕ್ತ ಅಸಾದ್ ಉರ್ ರೆಹಮಾನ್ ಷರೀಫ್, ಪಿ.ಡಿ.ಶುಭ, ಅಧೀಕ್ಷಕ ಇಂಜಿನಿಯರ್ ಸಿಂಧು, ಪೌರಾಯುಕ್ತ ಸಂದೀಪ್, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳಾದ ಬಸವರಾಜು, ಶ್ರೀಧರ್, ನರಸಿಂಹಮೂರ್ತಿ, ದೀಪಾ ಮತ್ತಿತರರ ಅಧಿಕಾರಿಗಳು ಹಾಜರಿದ್ದರು.

ಡಾ.ಸಿ.ಎನ್.ಮಂಜುನಾಥರಿಗೆ ಮೈಸೂರು ನಾಗರಿಕರ ಸನ್ಮಾನ ಏರ್ಪಡಿಸಲು ಚಿಂತನೆ

ಜಲದರ್ಶಿನಿ ಅತಿಥಿಗೃಹದಲ್ಲಿ ಅಭಿನಂದನಾ ಸಮಿತಿ ಸಭೆಯಲ್ಲಿ ಸುದೀರ್ಘ ಚರ್ಚೆ; ಮಾಸಾಂತ್ಯಕ್ಕೆ ಸಮಾರಂಭ ಸಾಧ್ಯತೆ


ಜಯದೇವ ಹೃದ್ರೋಗ ಸಂಸ್ಥೆ ನಿಕಟಪೂರ್ವ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಅವರಿಗೆ ಮೈಸೂರಲ್ಲಿ ಸನ್ಮಾನಿಸುವ ಸಂಬಂಧ ಜಲದರ್ಶಿನಿ ಅತಿಥಿಗೃಹದಲ್ಲಿ ಪೂರ್ವಭಾವಿ ಸಭೆ ನಡೆಸಿದ ಮುಖಂಡರು ಚಿತ್ರದಲ್ಲಿದ್ದಾರೆ.

ಮೈಸೂರು, ಫೆ2(ಎಸ್‌ಬಿಡಿ)– ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕರಾಗಿ ಸುದೀರ್ಘ ಸೇವೆ ಸಲ್ಲಿಸಿ, ಮೊನ್ನೆಯಷ್ಟೇ ನಿವೃತ್ತರಾದ ಡಾ.ಸಿ.ಎನ್.ಮಂಜುನಾಥ್ ಅವರಿಗೆ ಮೈಸೂರಿನ ನಾಗರಿಕರ ಪರವಾಗಿ ಅಭಿನಂದಿಸಲು ಯೋಜಿಸಲಾಗಿದೆ.

ಈ ನಿಟ್ಟಿನಲ್ಲಿ ಡಾ.ಸಿ.ಎನ್.ಮಂಜುನಾಥ್ ಅಭಿನಂದನಾ ಸಮಿತಿ ರೂಪಿಸಿಕೊಂಡು ಶುಕ್ರವಾರ ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಉದ್ದೇಶಿತ ಸಮಾರಂಭದ ಬಗ್ಗೆ ಪೂರ್ವಭಾವಿ ಸಭೆ ನಡೆಸಿ, ಚರ್ಚಿಸಲಾಯಿತು.

ಪ್ರತಿಷ್ಠಿತ ಜಯದೇವ ಆಸ್ಪತ್ರೆ ನಿರ್ದೇಶಕರಾಗಿ ಅತ್ಯುತ್ತಮ ಆಡಳಿತದೊಂದಿಗೆ ಆರೋಗ್ಯ ಸೇವೆಯಲ್ಲಿ ಅಭೂತಪೂರ್ವ ಸುಧಾರಣೆ ತರುವ ಮೂಲಕ ಜನಮಾನಸದಲ್ಲಿ ಪ್ರಸಿದ್ಧಿಯಾಗಿರುವ ಡಾ.ಸಿ.ಎನ್. ಮಂಜುನಾಥ್ ಅವರಿಗೆ ಮೈಸೂರಿನ ನಾಗರಿಕರ ಪರವಾಗಿ ನಾಗರಿಕ ಸನ್ಮಾನ ಸಲ್ಲಿಸಬೇಕು. ಈ ನಿಟ್ಟಿನಲ್ಲಿ ಪ್ರಸಕ್ತ ತಿಂಗಳೊಳಗೆ ಶ್ರೀ ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹಾಗೂ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಸಮಕ್ಷಮದಲ್ಲಿ ಅತ್ಯಂತ ಅದ್ಧೂರಿಯಾಗಿ ಈ ಸಮಾರಂಭ ನೆರವೇರಿಸಬೇಕು. ಮೈಸೂರಿನ ಎಲ್ಲಾ ಜನಪ್ರತಿನಿಧಿಗಳನ್ನೂ ಕಾರ್ಯಕ್ರಮಕ್ಕೆ ಆಹ್ವಾನಿಸುವ ಬಗ್ಗೆ ಚರ್ಚೆ ನಡೆಸಲಾಯಿತು. ಅಭಿನಂದನಾ ಸಮಿತಿ, ಶ್ರೀದ್ವಯರು ಹಾಗೂ ಮುಖ್ಯ ಅತಿಥಿಗಳನ್ನು ಭೇಟಿಯಾಗಿ ಕಾರ್ಯಕ್ರಮದ ಬಗ್ಗೆ ತಿಳಿಸಿ ನಂತರ ಕಾರ್ಯಕ್ರಮದ ದಿನಾಂಕ ಹಾಗೂ ಸ್ಥಳ ನಿಗದಿಪಡಿಸುವುದು. ಹಾಗೆಯೇ ಕಾರ್ಯಕ್ರಮದ ರೂಪು ರೇಷೆ ಬಗ್ಗೆ ನಿರ್ಣಯ ಕೈಗೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಸಭೆಯಲ್ಲಿ ವಿದ್ಯಾ ವಿಕಾಸ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಕವೀಶ್ ಗೌಡ, ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಬೀಡನಹಳ್ಳಿ ಸತೀಶ್ ಗೌಡ, ನಗರ ಪಾಲಿಕೆ ಮಾಜಿ ಸದಸ್ಯರಾದ ಕೆವಿ.ಶ್ರೀಧರ್, ಎಸ್‌ಬಿಎಂ ಮಂಜು, ಮುಖಂಡ ಹೆಚ್.ಕೆ.ರಾಮು, ಜಿಲ್ಲಾ ಒಕ್ಕಲಿಗರ ಸಂಘದ ಕಾರ್ಯದರ್ಶಿ ಚೇತನ್, ಜಿಲ್ಲಾ ಒಕ್ಕಲಿಗರ ಸಂಘದ ನಿರ್ದೇಶಕ ಎ.ರವಿ, ತಾಲೂಕು ಒಕ್ಕಲಿಗರ ಸಂಘದ ಕಾರ್ಯದರ್ಶಿ ಕೃಷ್ಣ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳಾ ಮಾನಸ, ಹಿನಕಲ್ ರಾಜ್‌ಕುಮಾರ್, ಶೇಖರ್, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಗೋವಿಂದರಾಜು, ಗೋಕುಲ್ ಗೋವರ್ಧನ್, ಕಿರಣ್ ಜಯರಾಮೇಗೌಡ, ಹೇಮಂತ್, ನೇಹಾ, ಹೂಟಗಳ್ಳಿ ರವಿ, ದೇವರಾಜ್ ಮತ್ತಿತರರು ಪಾಲ್ಗೊಂಡಿದ್ದರು.

ತಮಿಳು ನಟ ವಿಜಯ್ ರಾಜಕೀಯ ಪ್ರವೇಶ: 'ತಮಿಳಗ ವೆಟ್ರಿ ಕಳಗಂ' ಪಕ್ಷ ಘೋಷಣೆ



ಚೆನ್ನೈ, ಫೆ.2– ತಮಿಳು ಚಿತ್ರರಂಗದ ಸೂಪರ್‌ಸ್ಟಾರ್ ದಳಪತಿ ವಿಜಯ್ ರಾಜಕೀಯ ಕ್ಷೇತ್ರಕ್ಕೆ ಪ್ರವೇಶಿಸಿದ್ದಾರೆ. ಇನ್ನು ಎರಡು ತಿಂಗಳಲ್ಲಿ ದೇಶದಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಲಿದ್ದು ಈ ಸಂದರ್ಭದಲ್ಲಿ ಅವರು ತಮ್ಮ ರಾಜಕೀಯ ಪ್ರವೇಶದ ಬಗ್ಗೆ ಘೋಷಣೆ ಮಾಡಿದ್ದು ಅವರ ನೂತನ ಪಕ್ಷಕ್ಕೆ 'ತಮಿಳಗ ವೆಟ್ರಿ ಕಳಗಂ' ಎಂಬ ಹೆಸರನ್ನು ಘೋಷಿಸಿದ್ದಾರೆ.

ಕಳೆದ ವಾರ ಚೆನ್ನೈನಲ್ಲಿ ನಡೆದ ಸಭೆಯಲ್ಲಿ ಅವರ ಅಭಿಮಾನಿಗಳ ಸಂಘ 'ವಿಜಯ್ ಮಕ್ಕಳ್ ಇಯಕ್ಕಂ' ರಾಜಕೀಯ ಪಕ್ಷದ ರಚನೆಗೆ ಒಪ್ಪಿಗೆ ನೀಡಿದ ಬಳಿಕ ಇಂದು ತಮ್ಮ ರಾಜಕೀಯ ಪಕ್ಷದ ಹೆಸರನ್ನು ಘೋಷಿಸಿದ್ದಾರೆ.

ಮಾಧ್ಯಮಗಳಿಗೆ ಹೇಳಿಕೆ ಬಿಡುಗಡೆ ಮಾಡಿರುವ ನಟ ವಿಜಯ್, ನಮ್ಮ ಪಕ್ಷ 'ತಮಿಳಗ ವೆಟ್ರಿ ಕಳಗಂ'ನ್ನು ಮುಂಬರುವ 2026ರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಮೂಲಭೂತ ರಾಜಕೀಯ ಬದಲಾವಣೆ ತರುವುದು ಗುರಿಯಾಗಿದೆ ಎಂದಿದ್ದಾರೆ.


ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ ದೇವೇಗೌಡರ ಪರಮಾಪ್ತ ಹಾಗೂ ಎಪಿಎಂಸಿ ಮಾಜಿ ಸದಸ್ಯರಾದ ಕೋಟೆಹುಂಡಿ ಮಹದೇವು ಅವರಿಗೆ ಸಮಾಜ ಸೇವಕ ಎಸ್.ಶ್ರೀಕಾಂತ್ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಮುಖಂಡರಾದ ಮಹದೇವಣ್ಣ, ಎಂ.ನಾಗರಾಜು, ಬಿ.ರೇಣುಕಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮೈಸೂರು ಧಾರ್ಮಿಕ ಪ್ರತಿಷ್ಠಾನದಿಂದ 'ಬಾಲರಾಮ' ಶಿಲ್ಪಿ ಅರುಣ್ ಯೋಗಿರಾಜ್, ಶಿಲೆ ನೀಡಿದ ರಾಮದಾಸರಿಗೆ ಸನ್ಮಾನ

ನನ್ನಿಂದ ಭಗವಂತನೇ ಆ ಕೆಲಸ ಮಾಡಿಸಿಕೊಂಡಿದ್ದಾನೆ: ಅರುಣ್


ಮೈಸೂರು ಧಾರ್ಮಿಕ ಪ್ರತಿಷ್ಠಾನದ ವತಿಯಿಂದ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಹಾಗೂ ಹಾರೋಹಳ್ಳಿ ರಾಮದಾಸ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಫೆ.2(ಎಂಕೆ)– ಅಯೋಧ್ಯೆ ಶ್ರೀ ರಾಮಮಂದಿರದಲ್ಲಿ ಪ್ರತಿಷ್ಠಾಪನೆಗೊಂಡ 'ಬಾಲರಾಮ' ಮೂರ್ತಿಯನ್ನು ರೂಪುಗೊಳಿಸಿದ ಮೈಸೂರಿನ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಹಾಗೂ ವಿಗ್ರಹಕ್ಕೆ ಶಿಲೆ ನೀಡಿದ ಹಾರೋಹಳ್ಳಿ ರಾಮದಾಸ್ ಅವರನ್ನು ಮೈಸೂರು ಧಾರ್ಮಿಕ ಪ್ರತಿಷ್ಠಾನದ ವತಿಯಿಂದ ಅತ್ಯಂತ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮಾಧವ ಕೃಪಾದಲ್ಲಿ ಆಯೋಜಿಸಿದ್ದ ಅಭಿನಂದನಾ ಸಮಾರಂಭ ಹಾಗೂ ಅನುಭವ ಕಥನ ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್ ಪ್ರಾಂತ ಕಾರ್ಯಕಾರಿಣಿ ಸದಸ್ಯ ವೆಂಕಟರಾಮ್ ಜೀ, ಮೈಸೂರು ನಗರ ಸಂಘಚಾಲಕ ವಾಸುದೇವ್ ಭಟ್, ಮೈಸೂರು ಧಾರ್ಮಿಕ ಪ್ರತಿಷ್ಠಾನದ ಅಧ್ಯಕ್ಷ ಚರಣ್, ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಹಾಗೂ ಹಾರೋಹಳ್ಳಿ ರಾಮದಾಸ್ ಮತ್ತು ಅವರ ಶ್ರೀಮತಿ ಅವರನ್ನು ಸನ್ಮಾನಿಸಿ ಅಭಿನಂದಿಸಿದರು.

ಬಳಿಕ ಅಯೋಧ್ಯೆ ಶ್ರೀ ರಾಮಮಂದಿರದಲ್ಲಿ ಪ್ರತಿಷ್ಠಾಪನೆಗೊಂಡ 'ಬಾಲರಾಮ' ಮೂರ್ತಿ ರೂಪುಗೊಂಡ ಕುರಿತು ಮಾತನಾಡಿದ ಶಿಲ್ಪಿ ಅರುಣ್ ಯೋಗಿರಾಜ್, ಹಿರಿಯರ ಮಾರ್ಗದರ್ಶನದೊಂದಿಗೆ ಕಲಿತ ಕಲೆಯಲ್ಲಿ ನಂಬಿಕೆ, ತಾಳ್ಮೆ, ವಿಶ್ವಾಸ, ವಿಷಯ ಅಧ್ಯಯನ, ಶ್ರದ್ಧೆ ಹಾಗೂ ನಾನು ಮಾಡುವುದಲ್ಲ ನನ್ನಿಂದ ಭಗವಂತನೇ ಕೆಲಸ ಮಾಡಿಸಿಕೊಳ್ಳುತ್ತಿದ್ದಾರೆ ಎಂಬ ಸೇವಾ ಮನೋ ಭಾವನೆ ಮೂಡಿಸಿಕೊಂಡಿದ್ದರಿಂದ ಎಲ್ಲರೂ ಮೆಚ್ಚುವಂತೆ ವಿಗ್ರಹ ರೂಪಿಸಲು ಸಾಧ್ಯವಾಯಿತು. ನನಗೆ ದೊರೆತಿರುವುದೆಲ್ಲವೂ ಗೌರವವೆಲ್ಲವೂ ಶ್ರೀರಾಮನ ಪಾದಕ್ಕೆ ಅರ್ಪಿತ ಎಂದರು.

2023ರ ಜನವರಿ ತಿಂಗಳಿನಲ್ಲಿ ಅಯೋಧ್ಯೆ ಶ್ರೀ ರಾಮಮಂದಿರಕ್ಕೆ ಬಾಲರಾಮ ಮೂರ್ತಿ ರೂಪಿಸುವ ಸಂಬಂಧ ಸಭೆಗಳು ನಡೆದಿದ್ದವು. ಆದರೆ, ನನಗೆ ಆಹ್ವಾನ ನೀಡಿರಲಿಲ್ಲ. ಆಗ ನನಗ್ಯಾಕೆ ಆಹ್ವಾನ ನೀಡಿಲ್ಲ ಎಂದು ಬೇಸರವಾಗಿತ್ತು. ಆದಾದ ಮೂರು ತಿಂಗಳ ನಂತರ ಅಂದರೆ ಏಪ್ರಿಲ್ ತಿಂಗಳಲ್ಲಿ ನಡೆದ ಸಭೆಗೆ ಶಿಲ್ಪಿಗಳ ಆಯ್ಕೆ ಸಮಿತಿಯಲ್ಲಿದ್ದ ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯದ ಇಂದಿರಾ ಗಾಂಧಿ ನ್ಯಾಷನಲ್ ಸೆಂಟರ್ ಆಫ್ ಆರ್ಟ್ಸ್‌ನ ಡಾ.ಸಚ್ಚಿದಾನಂದ ಜೋಶಿ ಅವರು ನಾನಿಲ್ಲದಿರುವುದನ್ನು ಗಮನಿಸಿ ಆಹ್ವಾನ ನೀಡಿದರು. ಅದರಂತೆ ನಾನು ಭಾಗವಹಿಸಿ ಮೂರ್ತಿ ರೂಪಿಸುವ ಕುರಿತು ಪ್ರೆಸೆಂಟೇಷನ್ ನೀಡಿದೆ. ಅಂತಿಮವಾಗಿ ನನ್ನನ್ನು ಸೇರಿ ಮೂವರು ಶಿಲ್ಪಿಗಳನ್ನು ಆಯ್ಕೆ ಮಾಡಲಾಯಿತು ಎಂದು ತಿಳಿಸಿದರು.

ಅಂದಿನಿಂದಲೇ ಮೂರ್ತಿ ರೂಪಿಸುವ ಕಾರ್ಯ ಆರಂಭಿಸಿದೆ. ಮೊದಲು ಕೆತ್ತಿದ ವಿಗ್ರಹದಲ್ಲಾದ ಕೆಲವು ಟೆಕ್ನಿಕಲ್ ಲೋಪಗಳಿಂದ ಆಯ್ಕೆ ಸಮಿತಿ ಪರಿಗಣಿಸಲಿಲ್ಲ. ಮತ್ತೆ ಇನ್ನಷ್ಟು ಪರಿಶ್ರಮದಿಂದ ಎಲ್ಲರೂ ಒಪ್ಪುವ ರೀತಿಯಲ್ಲಿ ಮೂರ್ತಿ ರೂಪಿಸುವ ಮಾತಿನೊಂದಿಗೆ ಶಿಲೆ ಆಯ್ಕೆ ಮಾಡಿ, ವಿಗ್ರಹ ಕೆತ್ತುವ ಕೆಲಸವನ್ನು ಆರಂಭಿಸಲಾಯಿತು. ಇಂದು ಅದೇ 'ಬಾಲರಾಮ' ಮೂರ್ತಿ ಅಯೋಧ್ಯೆಯಲ್ಲಿ ಪ್ರತಿಷ್ಠಾಪನೆಯಾಗಿದ್ದು, ಅತ್ಯಂತ ಖುಷಿ ನೀಡಿದೆ ಎಂದರು.

ಸೆಪ್ಟೆಂಬರ್‌ನಲ್ಲಿ ವಿಗ್ರಹ ಕೆತ್ತಲು ಆರಂಭಿಸಲಾಯಿತು. ಹೊರಗಿನ ಪ್ರಪಂಚದ ಸಂಪರ್ಕವನ್ನು ಕಳೆದುಕೊಂಡು ಶಿಲ್ಪಶಾಸ್ತ್ರದ ಚೌಕಟ್ಟಿನಲ್ಲಿ 5 ವರ್ಷದ ಮಕ್ಕಳ ಮುಗ್ಧತೆ ಇರುವಂತೆ ಏಕಾಗ್ರತೆಯಿಂದ ಕೆಲಸ ಮಾಡಿದ್ದರಿಂದಾಗಿ 'ಬಾಲರಾಮ' ಮೂರ್ತಿ ರೂಪಿಸಲು ಸಾಧ್ಯವಾಯಿತು. ಪ್ರತಿಷ್ಠಾಪನಾ ಸಮಿತಿ ಸೂಚಿಸಿದಂತೆ 20 ನಿಮಿಷಗಳಲ್ಲಿ ಬಾಲರಾಮ ಮೂರ್ತಿಯ ಕಣ್ಣುಗಳನ್ನು ಕೆತ್ತಲಾಯಿತು ಎಂದ ಶಿಲ್ಪಿ, ಅಯೋಧ್ಯೆ ನೆಲದ ಮಹಿಮೆಯಿಂದಾಗಿ 'ಬಾಲರಾಮ' ಮೂರ್ತಿಯ ಮುಖ ಭಾವವೇ ಬದಲಾದಂತೆ ಕಾಣುತ್ತಿದೆ ಎಂದು ಹರ್ಷ ವ್ಯಕ್ತಪಡಿಸಿದರು.

> **ಶಿಲ್ಪಕಲೆ ಶಿಕ್ಷಣಕ್ಕೆ ಆದ್ಯತೆ...**
> ಮುಜರಾಯಿ ಇಲಾಖೆ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಕೋಟ್ಯಾಂತರ ರೂ. ಖರ್ಚು ಮಾಡುತ್ತದೆ. ಜೀರ್ಣೋದ್ಧಾರದ ಜೊತೆಗೆ ಅದೇ ಹಣದಲ್ಲಿ ಕಲಾ ಕಾಲೇಜುಗಳಲ್ಲಿ ಶಿಲ್ಪಕಲೆ ಶಿಕ್ಷಣ ಕೋರ್ಸ್ ಆರಂಭಿಸುವುದರಿಂದ ಶಿಲ್ಪಕಲೆಗೆ ಪ್ರೋತ್ಸಾಹ ನೀಡುವುದರ ಜೊತೆಗೆ ನನ್ನಂತಹ ಬಡಕುಟುಂಬದಿಂದ ಬಂದವರ ಜೀವನಕ್ಕೆ ಒಂದು ದಾರಿಯಾಗಲಿದೆ.
> – ಅರುಣ್ ಯೋಗಿರಾಜ್, ಶಿಲ್ಪಿ

ರಾಮ, ಲಕ್ಷ್ಮಣ ಹಾಗೂ ಸೀತಾ ಮಾತೆಯ ಮೂರ್ತಿ ಪ್ರತಿಷ್ಠಾಪನೆ: ಅಯೋಧ್ಯೆ ಶ್ರೀ ರಾಮ ಮಂದಿರದ ಮೊದಲ ಮಹಡಿಯಲ್ಲಿ ಶ್ರೀರಾಮ, ಲಕ್ಷ್ಮಣ ಹಾಗೂ ಸೀತಾ ಮಾತೆಯ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲಾಗುವುದು. ಸದ್ಯ ರಾಮಮಂದಿರದ ಮೊದಲ ಮಹಡಿ ನಿರ್ಮಾಣ ಕಾಮಗಾರಿ ನಡೆಯುತ್ತಿದ್ದು, ಪೂರ್ಣಗೊಂಡ ಬಳಿಕ ರಾಮ, ಲಕ್ಷಣ ಹಾಗೂ ಸೀತಾ ಮಾತೆಯ ಮೂರ್ತಿಗಳನ್ನು ಪ್ರತಿಷ್ಠಾಪನಾ ಕಾರ್ಯ ನಡೆಯಲಿದೆ. ಮೂರ್ತಿಗಳನ್ನು ರೂಪಿಸುವ ಸಂಬಂಧ ಯಾವುದೇ ಚರ್ಚೆಗಳಾಗಿಲ್ಲ ಎಂದರು.

ಮೈಸೂರಿನ ಹಾರೋಹಳ್ಳಿಯ ಶಿಲೆ, ಬಾಲರಾಮನ ವಿಗ್ರಹವಾಗಿ ಅಯೋಧ್ಯೆ ಶ್ರೀ ರಾಮಮಂದಿರ ಸೇರಿದೆ. ದೇಶದ ಕೋಟ್ಯಾಂತರ ಭಕ್ತರ ಕನಸು ನನಸಾಗಿದೆ. ದೊಡ್ಡ ಜವಾಬ್ದಾರಿಯನ್ನು ನಿರ್ವಹಿಸಿದ ತೃಪ್ತಿ ನನಗಾಗಿದೆ ಎಂದರಲ್ಲದೆ ಭಾರತದಲ್ಲಿ ಎಲ್ಲಾ ಬಗೆಯ ಶೈಲಿಗಳ ಬಗ್ಗೆ ಅಧ್ಯಯನ 'ಬಾಲರಾಮ' ಮೂರ್ತಿ ರೂಪಿಸಲಾಯಿತು ಎಂದು ಹೇಳಿದರು. ಖಜಾಂಚಿ ರಾಕೇಶ್, ಟ್ರಸ್ಟಿ ಚೇತನ್, ಸತೀಶ್ ಮತ್ತಿತರರಿದ್ದರು.

ನಕ್ಕರೆ ಅದೇ ಸ್ವರ್ಗ

ತಂದೆ : "ಮಗ ಪರೀಕ್ಷೆಗೆ ಏಕೆ ಹೋಗಿಲ್ಲ?"
ಮಗ : "ಪ್ರಶ್ನೆ ಪತ್ರಿಕೆ ಬಹಳ ಕಷ್ಟ ಇತ್ತು ಅಂತಾ...!"
ತಂದೆ : "ಇಲ್ಲೇ ಕುಳಿತು ಅದು ಹೇಗೆ ಹೇಳ್ತೀಯಾ ಕಷ್ಟ ಇತ್ತು ಅಂತಾ?"
ಮಗ : "ಏಕೆಂದರೆ ಎರಡು ದಿನ ಮೊದಲೇ ಲೀಕ್ ಆದ ಪ್ರಶ್ನೆ ಪತ್ರಿಕೆ ನನಗೂ ಸಿಕ್ಕಿತ್ತು!"

ಮೈಸೂರು ಮಿತ್ರ

ಶನಿವಾರ, 3 ಫೆಬ್ರವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಶಾಸನಗಳು ಸಾಯುತ್ತವೆ, ಗ್ರಂಥಗಳಿಗೆ ಸಾವಿಲ್ಲ –ಒಲಿವರ್ ಲಿಟ್ಟನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ವಿಶ್ವದಲ್ಲಿ ರೊಟ್ಟಿಗೆ ಹಸಿದವರಿಗಿಂತ ಪ್ರೀತಿಗೆ ಹಸಿದವರು ಜಾಸ್ತಿ

ನಿಮ್ಮ ಪತ್ರಗಳು

ಅರುಣ್ ಯೋಗಿರಾಜ್‌ಗೆ ಬಾಕಿ ಸಂಭಾವನೆ ಪಾಲಿಕೆ ಪಾವತಿಸಲಿ

ಮಾನ್ಯರೆ,

ಅಯೋಧ್ಯೆಯಲ್ಲಿ ಬಾಲ ರಾಮನಮೂರ್ತಿಯ ಕೆತ್ತನೆ ಮೂಲಕ ಇಡೀ ವಿಶ್ವದ ಗಮನ ವನ್ನು ಸೆಳೆದ ಮೈಸೂರಿನ ಹೆಮ್ಮೆಯ ಶಿಲ್ಪಿ ಅರುಣ್ ಯೋಗಿರಾಜ್ ಇತಿಹಾಸದ ಪುಟಗಳಲ್ಲಿ ದಾಖಲಾಗಿದ್ದಾರೆ.

ಇವರು ಮೈಸೂರಿನಲ್ಲಿ 2015ರಲ್ಲಿ ಹಾರ್ಡಿಂಜ್ ವೃತ್ತದಲ್ಲಿ ಸುಂದರವಾಗಿ ಕೆತ್ತನೆ ಮಾಡಿರುವ ಜಯಚಾಮರಾಜ ಒಡೆಯರ್ ಪ್ರತಿಮೆಯ ಬಾಕಿ ಹಣ ಸುಮಾರು ಲಕ್ಷ ರೂಪಾಯಿಗಳನ್ನು ಮೈಸೂರಿನ ನಗರ ಪಾಲಿಕೆ ಬಾಕಿ ಉಳಿಸಿಕೊಂಡಿದೆ ಎಂದು ಮಾಧ್ಯಮಗಳ ಮೂಲಕ ತಿಳಿದು, ಇದು ಮೈಸೂರಿನ ಜನತೆಗೆ ನಗರ ಪಾಲಿಕೆ ಮಾಡಿರುವ ಅವಮಾನ ಎನಿಸುತ್ತದೆ.

ಒಂದು ವೇಳೆ ಅರುಣ್ ಯೋಗಿರಾಜ್ ಇಷ್ಟು ಪ್ರಸಿದ್ಧಿಗೆ ಬಾರದೇ ಹೋಗಿದ್ದರೇ, ಈ ಘಟನೆ ಸಾರ್ವಜನಿಕರ ಗಮನಕ್ಕೇ ಬಾರದೇ ಮುಚ್ಚಿ ಹೋಗುತ್ತಿತ್ತು, ಈಗ ಅವರು ಬಾಯಿ ಬಿಟ್ಟು ನಗರ ಪಾಲಿಕೆಯ ಆಡಳಿತವನ್ನು ಬೆತ್ತಲೆ ಮಾಡಿದ್ದಾರೆ. 2015 ರಿಂದ ಇಲ್ಲಿಯವರೆಗೆ ಅಂದರೆ 2023ರ ತನಕ 9 ಜನ ಮೇಯರ್‌ಗಳು ಬಂದು ಹೋಗಿದ್ದಾರೆ. (ಮೈಸೂರಿನ ಮೇಯರ್‌ರವರ ಆಡಳಿತಾವಧಿ ಒಂದು ವರ್ಷ ಕಾಲ ಮಾತ್ರ), ಯಾವ ಮೇಯರ್‌ಗಳು ಸಹ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳದಿರುವುದು ಬೇಸರದ ಸಂಗತಿ. ಇದು ನಗರ ಪಾಲಿಕೆಯ ಆಡಳಿತದ ಬಗ್ಗೆಯೇ ಸಾರ್ವಜನಿಕರಿಗೆ ಅನುಮಾನ ಮೂಡುತ್ತದೆ.

ಶಿಲ್ಪಿಗಳು, ಕೆತ್ತನೆ ಕೆಲಸ ಮಾಡುವವರು ಯಾರೂ ಶ್ರೀಮಂತ ವರ್ಗದ ಜನರಲ್ಲ. ತಮ್ಮ ಜೀವನೋಪಾಯಕ್ಕಾಗಿ, ತಮ್ಮ ಬದುಕಿಗೊಸ್ಕರ, ಕೆತ್ತನೆ ಕೆಲಸ ಮಾಡುವವರು ಇದ್ದಾರೆ. ಇಂತವರ ಹೊಟ್ಟೆ ಮೇಲೆ ಹೊಡೆದಿರುವುದು ಆ ದೇವರು ಸಹ ಇವರನ್ನು ಕ್ಷಮಿಸುವುದಿಲ್ಲ. ಈಗಲಾದರೂ, ಬಾಕಿ ಉಳಿಸಿಕೊಂಡಿರುವ ಹಣವನ್ನು ಬಿಡುಗಡೆ ಮಾಡಿ, ಮೈಸೂರಿನ ಜನತೆಯ ಮರ್ಯಾದೆಯನ್ನು ಉಳಿಸಿ.

– ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು,

I. N. D. I. A ನಲ್ಲಿ ಉಳಿಯುವುದು 'ಐ' ಮಾತ್ರವೇ?

ಮಾನ್ಯರೆ,

ಸ್ವಯಂ ಭಾರಿ ನಿರೀಕ್ಷೆ ಇಟ್ಟುಕೊಂಡು ರಚನೆಯಾದ ಐಎನ್‌ಡಿಐಎ (I.N.D.I.A.), ಮೈತ್ರಿಕೂಟ ಬಿಜೆಪಿಯ ನಿರೀಕ್ಷೆಯಂತೆ ಒಂದೊಂದಾಗಿ ಕಳಚುವ ಅಥವಾ ವಿಘಟನೆಯ ಪ್ರಕ್ರಿಯೆ ಆರಂಭವಾದಂತೆ ಕಾಣುತ್ತಿದೆ.

ಸೀಟು ಹಂಚಿಕೆ ವಿಚಾರವಾಗಿ ನಿ ಕೊಡೆ, ನಾ ಬಿಡೆ ಎಂಬಂತೆ ಹೊಂದಾಣಿಕೆ ಸಾಧ್ಯವಾಗದೆ ಪಶ್ಚಿಮ ಬಂಗಾಳ ಮತ್ತು ಪಂಜಾಬ್‌ನಲ್ಲಿ ಟಿಎಂಸಿ ಮತ್ತು ಆಮ್ ಆದ್ಮಿ ಪಕ್ಷಗಳು ತಾವು ಕಾಂಗ್ರೆಸ್ ಜೊತೆ ಹೊಂದಾಣಿಕೆ ಇಲ್ಲದೆ ಪ್ರತ್ಯೇಕವಾಗಿ ಸ್ಪರ್ಧಿಸುವುದಾಗಿ ಘೋಷಿಸಿವೆ. ಇದೇ ಪ್ರಕ್ರಿಯೆ ಬಿಹಾರ ಮತ್ತು ಯುಪಿಯಲ್ಲೂ ಆಗುವ ಲಕ್ಷಣಗಳಿವೆ. ಅದೇನೇ ಇರಲಿ ಈ ರೀತಿ ಮೈತ್ರಿಕೂಟದ ಪಕ್ಷಗಳು ಒಂದೊಂದಾಗಿ ಕಳಚುತ್ತಾ ಹೋದರೆ I. N. D. I. A., ದಲ್ಲಿ ಕೊನೆಗೆ ಉಳಿಯುವುದು, I ಎಂದರೆ "ನಾನು, ಎನ್ನುವುದು ಮಾತ್ರ!! ಅಂದ ಹಾಗೆ ಈ ಅಭಿಯಾನ "ಇಂಡಿಯಾ" ಎಂದು ನಾಮಕರಣ ಮಾಡಿದ ಹಾಗೂ ಮೈತ್ರಿಕೂಟಕ್ಕೆ ಕಾಂಗ್ರೆಸ್ ಅಧ್ಯಕ್ಷರನ್ನು ನಾಯಕರಾಗಿ ಸೂಚಿಸಿದ ಮಮತಾ ಬ್ಯಾನರ್ಜಿ ಯವರಿಂದಲೇ ಆರಂಭವಾಗಿರುವುದು ಕಾಕತಾಳೀಯ!!

–ಮುಳ್ಳೂರು ಪ್ರಕಾಶ್, ಮೈಸೂರು.

ವಿದ್ಯಾರ್ಥಿಗಳ ಸಮಸ್ಯೆ ಪರಿಹರಿಸಿ

ಮಾನ್ಯರೆ,

ಹೆಚ್ ಡಿ ಕೋಟೆ ಪಟ್ಟಣದ ಶಾಲಾ ಕಾಲೇಜಿಗೆ ಪ್ರತಿನಿತ್ಯ ನೂರಾರು ವಿದ್ಯಾರ್ಥಿಗಳು ಸರ್ಕಾರಿ ಸಾರಿಗೆ ಬಸ್ಸುಗಳಲ್ಲಿ ಪ್ರಯಾಣ ಮಾಡುತ್ತಾರೆ. ನಾವು ಪ್ರತಿದಿನ ಕಾಣುವ ಸಮಸ್ಯೆ ಏನೆಂದರೆ ಹ್ಯಾಂಡ್ ಪೋಸ್ಟ್ ಮಾರ್ಗದಿಂದ ತೆರಳುವ ವಿದ್ಯಾರ್ಥಿಗಳಿಗೆ ಮೈಸೂರು, ಸರಗೂರು, ಅಂತರಸಂತೆ ಮಾರ್ಗದಿಂದ ಬರುವ ಬಹುತೇಕ ಬಸ್ಸುಗಳು ಹ್ಯಾಂಡ್ ಪೋಸ್ಟ್‌ನಲ್ಲಿ ನಿಲುಗಡೆ ಮಾಡದೆ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಸಮಯ 10 ಆದರೂ ಸಹ ವಿದ್ಯಾರ್ಥಿಗಳು ಶಾಲಾ ಕಾಲೇಜು ತಲುಪಲಾಗದೆ ಪರದಾಡುವಂತಾಗಿದೆ. ಸಂಬಂದಪಟ್ಟ ಸಾರಿಗೆ ಅಧಿಕಾರಿಗಳು ಸಮಸ್ಯೆಯನ್ನು ಪರಿಹರಿಸಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

–ಕೆ.ಎಸ್.ಸುರೇಶ್, ಹೆಚ್ ಡಿ ಕೋಟೆ

ಹನಿ ಪಂಚಕ

ಮಾನ್ಯರೆ,

1. **ಕಾಲ :** ನಾ. ಕಸ್ತೂರಿಯವರು ತಮ್ಮ 'ಅನರ್ಥಕೋಶ'ದಲ್ಲಿ ಪ್ರಾತಃಕಾಲವನ್ನು 'ನಾತಃಕಾಲ'ವಾಗಿಸಿದ್ದಾರೆ ! ನಿತ್ಯ ಬೆಳಗ್ಗೆ ಎದ್ದ ಕೂಡಲೇ ಪತ್ರಿಕೆಗಳಲ್ಲಿ ಪರಿಪರಿಯ ಕೆಟ್ಟ ಸುದ್ದಿಗಳನ್ನು ಓದುವಾಗ, 'ನಾತ' ಅರ್ಥಗರ್ಭಿತವಾಗಿ ತೋರುವುದಿಲ್ಲವೆ?


2. **ಸರಳ? :** ಈ ವರ್ಷದ 'ಸರಳ' ದಸರಾ'ಕ್ಕೆ ಸುಮಾರು 50 ಕೋಟಿ ವೆಚ್ಚ ವಾಯಿತಂತೆ! ಒಳ್ಳೆಯದು. ಇನ್ನು ನಿಘಂಟಿನಲ್ಲಿ 'ಸರಳ' ಶಬ್ದಕ್ಕೆ 'ಅತಿ ಅದ್ದೂರಿ' ಎಂಬ ಅರ್ಥ ದಾಖಲಿಸಬಹುದು!

3. **ಅರ್ಜುನ** ಎಂಬ ಭಾರೀ ಆನೆ ಮೃತಪಟ್ಟಿತು. ಮಹಾಭಾರತದ ಅಶ್ವತ್ಥಾಮೋ ಹತಃ (ಕುಂಜರಃ)" ಎಂಬ ಯುಧಿಷ್ಠಿರವಾಣಿಯನ್ನು "ಅರ್ಜುನೋ ಹತಃ" ಎಂದು ತಿದ್ದಿಕೊಳ್ಳಬಹುದು.

4. **ಪಾತಃ** ಜಗತ್ತಿನಲ್ಲಿ ಹಲವಾರು ಸುಂದರ ಜಲಪಾತಗಳಿವೆ. ಆದರೆ ಕುರೂಪಿಯಾದುದು ಮಾನವನ (ನೈತಿಕ) ಅದಃಪಾತ! "ಅವತಾರವೆಂದು ಎಂದಾಳೆ ತಾಯೆ ಈ ಅಧಃಪಾತವನ್ನೇ?" ಎಂದು ಹೇಳುತ್ತಾರೆ ಬೇಂದ್ರೆ, 'ಗಂಗಾವತರಣ'ದಲ್ಲಿ!

5. **ಸಂಸ್ಕೃತಿ :** ಇತ್ತೀಚೆಗೆ ನಗರದಲ್ಲಿ 'ದಿವ್ಯತ್ರಯ' –ಶ್ರೀರಾಮಕೃಷ್ಣ ಪರಮಹಂಸ, ವಿವೇಕಾನಂದ, ಶಾರದಾದೇವಿ–ಸಂಬಂಧವಾದ ಕಾರ್ಯಕ್ರಮವೊಂದು ಅದ್ದೂರಿಯಾಗಿ ಅರ್ಥವತ್ತಾಗಿ ನಡೆಯಿತಷ್ಟೆ, ಅವರಲ್ಲಿ ಮುಖ್ಯರಾದವರು ಒಂದರ್ಥದಲ್ಲಿ ಶ್ರೀಮಾತೆ ಶಾರದಾದೇವಿ ! ಅವರ ಬಗೆಗೆ ಸೋದರಿ ನಿವೇದಿತಾ ಹೇಳುತ್ತಾರೆ : "ಮಾಧುರ್ಯ ಮತ್ತು ವಿವೇಕ "sweetless and wisdom" ಅವರಲ್ಲಿ ಸಾಕಾರಗೊಂಡಿವೆ. ಸಂಸ್ಕೃತಿಯ ಲಕ್ಷಣವನ್ನು ಮ್ಯಾಥ್ಯೂ ಅರ್ನಾಲ್ಡ್ ಹೀಗೆಯೇ ಹೇಳುತ್ತಾನೆ : "ಮಾಧುರ್ಯ ಮತ್ತು ಬೆಳಕು". ಎಲ್ಲರೂ ಹೀಗೆ 'ಸುಸಂಸ್ಕೃತ'ರಾಗುವಂಥ ಕಾಲ ಎಂದು ಬಂದೀತು?

– ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಆಧುನಿಕತೆ ಭರದಲ್ಲಿ ಆರೋಗ್ಯ ಹಾಳಾಗುತ್ತದೆ...!?

ಈಗಿನ ನಮ್ಮ ಜೀವನ ನೈಜತೆಗಿಂತ ಕೃತಕತೆಯತ್ತ ಸಾಗುತ್ತಿದೆ ಎನಿಸುತ್ತದೆ. ನೈಜತೆ ಎಂದರೆ ನಮ್ಮ ಹಿಂದಿನವರು ಹಾಕಿಕೊಟ್ಟ ಜೀವನ ಪದ್ಧತಿ. ವಾಸ್ತುಶಾಸ್ತ್ರದಲ್ಲಿ ಒಂದು ಮಾತಿದೆ. 'ಯಾವ ಮನೆಯಲ್ಲಿ 60 ವರ್ಷಕ್ಕಿಂತ ಮೇಲ್ಪಟ್ಟ ವಯೋಮಾನದವರು ಆರೋಗ್ಯಪೂರ್ಣವಾಗಿ, ಸಂತೋಷವಾಗಿ ಇರುತ್ತಾರೋ ಆ ಮನೆಯ ವಾಸ್ತು ನೋಡುವ ಅಗತ್ಯವಿಲ್ಲ. ಅಂದರೆ ವಾಸ್ತು ಎಂದರೆ ಅದು ನಮ್ಮ ಜೀವನಕ್ಕೆ ಸಂಬಂಧಿಸಿದ್ದು. ನಾವು ನೆಮ್ಮದಿಯಿಂದ ಆರೋಗ್ಯಪೂರ್ಣವಾಗಿರಬೇಕು ಎಂಬುದೇ ನಮ್ಮ ಜೀವನದ ಉದ್ದೇಶವಾಗಿರುತ್ತದೆ. ಅಂತಹ ಆರೋಗ್ಯ ಹಾಗೂ ನೆಮ್ಮದಿ ನಮ್ಮ ಮನೆಯಲ್ಲಿದೆ ಎಂದರೆ ಮನೆಯಲ್ಲಿ ವಾಸ್ತುವಿನ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ. ಯಾವ ಮನೆಯಲ್ಲಿ ನೆಮ್ಮದಿ ಸಿಗುತ್ತದೆ ಎಂದರೆ ಆ ಮನೆಯ ಹಿರಿಯರಿಗೆ ಗೌರವ, ಅವರ ಮಾತಿಗೆ ಮನ್ನಣೆ ಇದ್ದಾಗ ಅಲ್ಲಿ ಯಾವ ಸಂದಿಗ್ಧಗಳು ಇರುವುದಿಲ್ಲ. ಹಿರಿಯರು ಅನುಭವದ ಗಣಿಗಳು. ಅವರಿಗೆ ಆದ್ಯತೆ ನೀಡಿದರೆ ಅವರಿಂದ ನಮಗೆ ಉಪಯುಕ್ತ ಸಲಹೆಗಳು ದೊರಕುತ್ತವೆ. ಈ ಕಾರಣದಿಂದ ಹಿರಿಯರು ನೆಮ್ಮದಿಯಾಗಿ ಆರೋಗ್ಯಪೂರ್ಣವಾಗಿದ್ದರೆ ಆ ಮನೆಯು ನೆಮ್ಮದಿಯ ತಾಣ ಎಂದು ಹೇಳಬಹುದು.

ಹಿಂದಿನವರು ಎಂದರೆ ಬಹಳ ಹಿಂದೆ ಹೋಗಬೇಕಾದ್ದಿಲ್ಲ. ಈಗ್ಗೆ ಮೂವತ್ತು, ನಲವತ್ತು ವರ್ಷಗಳ ಹಿಂದೆ ನಮ್ಮ ಹಾಗೂ ನಮ್ಮ ಸಾಮಾಜಿಕ ಜೀವನ ಹೇಗಿತ್ತು ಎಂದು ನೆನಪಿಸಿಕೊಂಡರೆ ಸಾಕಾಗುತ್ತದೆ. ಆಗ ಈಗಿನಂತಹ ಯಾವುದೇ ಆಡಂಬರದ ಜೀವನ ಇರಲಿಲ್ಲ. ಮನೆಗೆ ನೆಂಟರು–ಇಷ್ಟರು ಬಂದು ಹೋಗುತ್ತಿದ್ದರು. ಮನೆಗೆ ಬಂದವರೂ ನಾಲ್ಕಾರು ದಿನ ಇದ್ದು ಹೋಗುತ್ತಿದ್ದರು. ಹಾಗೆ ಬರುವಾಗ ತಮ್ಮ ಕೈಲಾದಷ್ಟು ಮಕ್ಕಳಿಗೆ ತಿಂಡಿ–ಪದಾರ್ಥ, ಬಟ್ಟೆಗಳನ್ನು ತರುತ್ತಿದ್ದರು. ಅವರಲ್ಲಿ ಯಾವುದೇ ಕೃತಕತೆ ಇರುತ್ತಿರಲಿಲ್ಲ. ಬದಲಾಗಿ ಒಂದು ರೀತಿಯ ಪ್ರೀತಿ, ವಿಶ್ವಾಸವಿರುತ್ತಿತ್ತು. ಅವರು ಬರುವುದಕ್ಕೆ ಮುಂಚೆ ಸಾಕಷ್ಟು ಸಿದ್ಧತೆ ಮಾಡಿಕೊಂಡೇ ಬರುತ್ತಿದ್ದರು. ಬರುವ ಬಗ್ಗೆ ಮಾಹಿತಿ ದೊರಕಿದ ದಿನದಿಂದಲೇ ನಮ್ಮ ಮನೆಗಳಲ್ಲೂ ದಿನಗಣನೆ ಆರಂಭವಾಗುತ್ತಿತ್ತು. ಅವರುಗಳು ಬಂದಾಗ ಮನೆಯಲ್ಲಿ ಹಬ್ಬದ ವಾತಾವರಣ ಹಾಗೂ ಸಂಭ್ರಮ ಕಂಡುಬರುತ್ತಿತ್ತು. ಇದು ಜೀವನಕ್ಕೆ ಒಂದು ರೀತಿಯ ಟಾನಿಕ್ ಇದ್ದ ಆಗಿರುತ್ತಿತ್ತು. ಇದು ಒಂದು ರೀತಿಯ ಸಹಜವಾದ ನಡೆಯಾಗಿತ್ತು. ಮನೆಯಲ್ಲಿ ತಂದೆ, ತಾಯಿ, ತಾತ, ಅಜ್ಜಿ ಎಲ್ಲರೂ ಇರುತ್ತಿದ್ದರು. ಎಲ್ಲರಲ್ಲೂ ಒಂದು ರೀತಿಯ ಆತ್ಮೀಯತೆ ಇರುತ್ತಿತ್ತು.

ಆದರೆ ಕಾಲಕಳೆದಂತೆ ಒಟ್ಟು ಕುಟುಂಬಗಳ ಸದಸ್ಯರ ಸಂಖ್ಯೆ ಕಡಿಮೆಯಾಗತೊಡಗಿದೆ. ಮನೆಯಲ್ಲಿ ಮೂರು ನಾಲ್ಕು ಜನರಿದ್ದರೆ ಜಾಸ್ತಿ ಎಂಬಂತಾಗಿದೆ. ಗಂಡಹೆಂಡತಿ ಹಾಗೂ ಅವರ ಮಕ್ಕಳೇ ಕುಟುಂಬ. ಅದರಲ್ಲೂ ಹಣ ಗಳಿಸುವ ಧಾವಂತದಲ್ಲಿ ಒಟ್ಟಿಗೆ ಕುಳಿತು ಮಾತನಾಡುವುದು, ಊಟತಿಂಡಿ ಒಟ್ಟಾಗಿ ಮಾಡುವುದೂ ಕಡಿಮೆಯಾಗಿದೆ. ಊಟತಿಂಡಿ ಮಾಡುವಾಗಲೂ ಟಿವಿ, ಮೊಬೈಲ್‌ಗಳು ಆನ್ ಆಗಿರುತ್ತವೆ. ಏನು ಊಟ ಮಾಡಿದೆವೋ, ಎಷ್ಟು ಊಟ ಮಾಡಿದೆವೋ ಎಂಬುದೇ ಗೊತ್ತಾಗುವುದಿಲ್ಲ. ಹೀಗಾದಾಗ ತಿಂದ ಆಹಾರದ ಶಕ್ತಿ ಹೇಗೆ ನಮ್ಮಲ್ಲಿ ಸಂಚಯನವಾಗಲು ಸಾಧ್ಯ? ಹಿಂದೆ ಊಟ ಮಾಡುವಾಗ ಒಂದು ಪದ್ಧತಿ ಇರುತ್ತಿತ್ತು. ನೆಲದ ಮೇಲೆ ಕುಳಿತುಕೊಳ್ಳಬೇಕು, ಊಟಕ್ಕೆ ಅಡಚಣೆಯಾಗದಂತಹ ಉಡುಪು ಧರಿಸಬೇಕು, ಊಟದ ನಡುವೆ ಹೆಚ್ಚು ಮಾತುಕತೆ ಇರಬಾರದು. ತಿನ್ನುವ ಅನ್ನಕ್ಕೆ ಗೌರವವಾಗಿ ನಮಿಸಿ ತಿನ್ನಬೇಕು. ಎಷ್ಟು ಬೇಕೋ ಅಷ್ಟು ಹಾಕಿಸಿಕೊಂಡು ತಿನ್ನಬೇಕು ಇತ್ಯಾದಿ ಸ್ವಯಂ ಹಾಕಿಕೊಂಡ ನಿಬಂಧನೆಗಳಿದ್ದವು. ಆಹಾರಕ್ಕೆ ಗೌರವ ನೀಡಿದರೆ, ಅದರ ಸಾರ ನಮಗೆ ಒದಗುತ್ತದೆ ಎಂಬ ನಂಬಿಕೆ ಇತ್ತು ಆದರೆ ಇಂದು ಇದಾವುದೂ ಇಲ್ಲ. ಊಟ ಮಾಡುವಾಗಲೂ ನಾವು ಒಂದು ಶಿಸ್ತನ್ನು ಪಾಲಿಸುತ್ತಿಲ್ಲ. ಅನ್ನವನ್ನು ಹಿಂದಿನವರು ಬ್ರಹ್ಮ ಸ್ವರೂಪ ಎಂದೇ ಭಾವಿಸಿದ್ದರು ಹಾಗೂ ಅದನ್ನು ಮಕ್ಕಳಿಗೂ ಕಲಿಸುತ್ತಿದ್ದರು. ತಿನ್ನುವ ಆಹಾರದ ಬಗ್ಗೆ ಗೌರವವಿರುತ್ತಿತ್ತು. ಈ ಕಾರಣದಿಂದಾಗಿ ಆರೋಗ್ಯದಲ್ಲಿ ಹೆಚ್ಚು ಏರುಪೇರಾಗುತ್ತಿರಲಿಲ್ಲ. ಆರೋಗ್ಯದಲ್ಲಿ ಸ್ವಲ್ಪ ಕೊರತೆ ಕಂಡಾಗ ಅದಕ್ಕೆ ಮನೆಮದ್ದು ಇದ್ದೇ ಇರುತ್ತಿತ್ತು. ಇವೆಲ್ಲಾ ಆರೋಗ್ಯದ ಸೂತ್ರಗಳಾಗಿತ್ತು. ಇಂದೂ ನಾವು ಊಟ ತಿಂಡಿ ತಿನ್ನುತ್ತೇವೆ. ಆದರೆ ಧಾವಂತ ಹಾಗೂ ಅನ್ಯಮನಸ್ಕರಾಗಿ ಬಾಯಿ ಚಪಲಕ್ಕಾಗಿ ಮಾತ್ರ ತಿನ್ನುತ್ತಿದ್ದೇವೆ. ಇದರಿಂದಾಗಿ ಇಂದು ವಿವಿಧ ರೀತಿಯ ಖಾಯಿಲೆಗಳು ನಮ್ಮನ್ನು ಕಾಡುತ್ತಿವೆ.

ಇತ್ತೀಚೆಗೆ ಒಂದು ತಾಲೂಕು ಕೇಂದ್ರದಲ್ಲಿ ಭೇಟಿಯಾದ ಹಿರಿಯ ವೈದ್ಯರೊಡನೆ ಮಾತನಾಡುವಾಗ ಅವರು ಹಿಂದಿನ, ಅಂದರೆ 60–70 ರ ದಶಕದ ಬಗ್ಗೆ ಅವಲೋಕನ ಮಾಡಿದರು. ಹಿಂದೆ ಸರ್ಕಾರಿ ಆಸ್ಪತ್ರೆಗಳೇ ಆಸ್ಪತ್ರೆಗಳು. ಖಾಸಗಿ ಆಸ್ಪತ್ರೆಗಳು ಕಡಿಮೆ. ಸರ್ಕಾರಿ ಆಸ್ಪತ್ರೆಯಲ್ಲಿ ಕೆಲವು ಬಣ್ಣಬಣ್ಣದ ದ್ರವ ರೂಪದ ಔಷಧಿಗಳು. ಅದೂ ಜಾಸ್ತಿ ಏನಲ್ಲಾ ನಾಲ್ಕಾರು ಬಗೆಯದು ಅಷ್ಟೇ. ಜೊತೆಗೆ ಒಂದಷ್ಟು ಮಾತ್ರೆಗಳು ಮಾತ್ರವೇ ಇತ್ತು. ಆಸ್ಪತ್ರೆಗೆ ಹೋಗುವಾಗ ಜನರು ಒಂದು ಗಾಜಿನ ಬಾಟಲ್ ತೆಗೆದುಕೊಂಡು ಹೋಗುತ್ತಿದ್ದರು. ಅಲ್ಲಿ ಕೊಡುವ ದ್ರವರೂಪದ ಔಷಧಿ ತಂದು, ಕುಡಿದು ಆರೋಗ್ಯ ಸುಧಾರಿಸಿಕೊಳ್ಳುತ್ತಿದ್ದರು. ಆಸ್ಪತ್ರೆಗಳಲ್ಲೂ ಅನಿವಾರ್ಯವಾದರೆ ಎಂದ ಹೊರತು ಚುಚ್ಚುಮದ್ದನ್ನೂ ನೀಡುತ್ತಿರಲಿಲ್ಲ. ಜ್ವರ ಇತ್ಯಾದಿಗಳು ಮೂರ್‍ನಾಲ್ಕು ದಿನಗಳಲ್ಲಿ ಹೊರಟುಹೋಗುತ್ತಿದ್ದವು. ಮನೆಯವರಿಗೆ ಯಾವ ಖಾಯಿಲೆ ಬಂದಾಗ ಯಾವ ಆಹಾರ ಸೇವಿಸಬೇಕು, ಯಾವುದನ್ನು ಸೇವಿಸಬಾರದು ಎಂಬ ಪಥ್ಯ ಇರುತ್ತಿತ್ತು. ಹಾಗಾಗಿ ದೀರ್ಘಾವಧಿ ಖಾಯಿಲೆಯಿಂದ ನರಳುವವರ ಸಂಖ್ಯೆ ಕಡಿಮೆ ಇತ್ತು. ತಾಲೂಕಿನಲ್ಲಿ ಬೆರಳೆಣಿಕೆಯಷ್ಟು ಖಾಸಗಿ ವೈದ್ಯರಿರುತ್ತಿದ್ದರು. ಊರಿನಲ್ಲಿ ದೊರಕಿದ ಔಷಧಿ (ಪಥ್ಯ) ಯಿಂದ ಗುಣವಾಗದವರು, ಎತ್ತಿನ ಗಾಡಿ ಮಾಡಿಕೊಂಡು ಪಟ್ಟಣದಲ್ಲಿನ ದವಾಖಾನೆಗೆ ಬರುತ್ತಿದ್ದರು. ಆದರೆ ಇಂದು ಗಲ್ಲಿಗಲ್ಲಿಗಳಲ್ಲಿ ಖಾಸಗಿ ವೈದ್ಯರು ಕಂಡು ಬರುತ್ತಾರೆ. ಸಣ್ಣ ಊರುಗಳಲ್ಲಿಯೂ ಖಾಸಗಿ ಆಸ್ಪತ್ರೆಗಳಾಗಿವೆ. ಎಲ್ಲೆಡೆ ನಿಮ್ಮಲ್ಲಿರುವ ಹಣದ ಆಧಾರದ ಮೇಲೆ ಚಿಕಿತ್ಸೆ ದೊರಕುತ್ತದೆ. ಹಿಂದೆ ಹೀಗಿರಲಿಲ್ಲ. ಖಾಯಿಲೆ ಇರುವವರು ಬಂದಾಗ ಅವರು ಗುಣಮುಖರಾದರೆ, ವೈದ್ಯರ ಬಗ್ಗೆ ಅವರು ಅಪಾರವಾದ ಗೌರವ ತೋರುತ್ತಿದ್ದರು ಎಂದು ಆಗಿನ ಪರಿಸ್ಥಿತಿಯನ್ನು ನೆನಪಿಸಿಕೊಂಡರು. ಈಗವರಿಗೆ ಎಂಭತ್ತು ದಾಟಿದ ವಯಸ್ಸು. ಈಗ ನಾನು ಪ್ರಾಕ್ಟೀಸ್ ಮಾಡುತ್ತಿಲ್ಲ ಎಂದರು. ಅವರು ಸುಮಾರು ಐವತ್ತು ವರ್ಷಗಳಿಗೂ ಮೀರಿ ವೈದ್ಯರಾಗಿದ್ದವರು, ಜನಪ್ರಿಯ ವೈದ್ಯರೂ ಹೌದು. ಅದೇಕೇ ಪ್ರಾಕ್ಟೀಸ್ ಮುಂದುವರೆಸಿಲ್ಲ ಎಂದಾಗ ಅವರು ಹೇಳಿದ್ದು, 'ನನಗೆ ವಯಸ್ಸಾಗಿದೆ. ನಾನು ಹಗಲು ಹೊತ್ತಿನಲ್ಲಿ ಕ್ಲಿನಿಕ್‌ನಲ್ಲಿ ಕೆಲಸ ಮಾಡಬಹುದು. ಯಾವುದಾದರೂ ರೋಗಿಗೆ ಮಧ್ಯರಾತ್ರಿಯಲ್ಲಿ ಖಾಯಿಲೆ ಉಲ್ಬಣವಾದರೆ, ಆ ಸಮಯದಲ್ಲಿ ನಾನು ಅವರ ಮನೆಗೆ ಹೋಗಲಾಗುವುದಿಲ್ಲ. ಹೋಗದಿದ್ದರೆ ನನ್ನನ್ನು ನಂಬಿದ ಅವರಿಗೆ ಮೋಸ ಮಾಡಿದಂತೆ. ಹಣಕ್ಕಾಗಿ ನಾನು ಸುಳ್ಳೂ ಹೇಳಲಾರೆ, ಮೋಸವನ್ನೂ ಮಾಡಲಾರೆ ಎಂದರು. ಇದು ಹಳೆಯ ಕಾಲದ ವೈದ್ಯರ ಮನೋಭಾವ.



> ಆಗ ಈಗಿನಂತಹ ಯಾವುದೇ ಆಡಂಬರದ ಜೀವನ ಇರಲಿಲ್ಲ. ಮನೆಗೆ ನೆಂಟರು–ಇಷ್ಟರು ಬಂದು ಹೋಗುತ್ತಿದ್ದರು. ಮನೆಗೆ ಬಂದವರೂ ನಾಲ್ಕಾರು ದಿನ ಇದ್ದು ಹೋಗುತ್ತಿದ್ದರು. ಹಾಗೆ ಬರುವಾಗ ತಮ್ಮ ಕೈಲಾದಷ್ಟು ಮಕ್ಕಳಿಗೆ ತಿಂಡಿ–ಪದಾರ್ಥ, ಬಟ್ಟೆಗಳನ್ನು ತರುತ್ತಿದ್ದರು. ಅವರಲ್ಲಿ ಯಾವುದೇ ಕೃತಕತೆ ಇರುತ್ತಿರಲಿಲ್ಲ. ಬದಲಾಗಿ ಒಂದು ರೀತಿಯ ಪ್ರೀತಿ, ವಿಶ್ವಾಸವಿರುತ್ತಿತ್ತು. ಅವರು ಬರುವುದಕ್ಕೆ ಮುಂಚೆ ಸಾಕಷ್ಟು ಸಿದ್ಧತೆ ಮಾಡಿಕೊಂಡೇ ಬರುತ್ತಿದ್ದರು. ಬರುವ ಬಗ್ಗೆ ಮಾಹಿತಿ ದೊರಕಿದ ದಿನದಿಂದಲೇ ನಮ್ಮ ಮನೆಗಳಲ್ಲೂ ದಿನಗಣನೆ ಆರಂಭವಾಗುತ್ತಿತ್ತು. ಅವರುಗಳು ಬಂದಾಗ ಮನೆಯಲ್ಲಿ ಹಬ್ಬದ ವಾತಾವರಣ ಹಾಗೂ ಸಂಭ್ರಮ ಕಂಡುಬರುತ್ತಿತ್ತು. ಇದು ಜೀವನಕ್ಕೆ ಒಂದು ರೀತಿಯ ಟಾನಿಕ್ ಇದ್ದ ಆಗಿರುತ್ತಿತ್ತು.

ಇಂದು ಏನಾಗಿದೆ? ಬರುವ ಪೇಷೆಂಟ್‌ನ ಖಾಯಿಲೆ ಏನು ಎಂದು ಕಂಡುಹಿಡಿಯುವ ಮುಂಚೆಯೇ ಖಾಸಗಿ ಆಸ್ಪತ್ರೆಗಳು ಅವರನ್ನು ದಾಖಲಿಸಿಕೊಳ್ಳುತ್ತವೆ. ಮೊದಲು ಇಷ್ಟು ಎಂದು ಹಣ ಕಟ್ಟಿಬನ್ನಿ, ಆನಂತರ ಅವರಿಗೆ ಚಿಕಿತ್ಸೆ ಆರಂಭಿಸೋಣ ಎನ್ನುತ್ತವೆ. ಇಲ್ಲಿ ಖಾಯಿಲೆಪೀಡಿತನ ಚಿಕಿತ್ಸೆಗಿಂತ ಅವನಿಂದ ಎಷ್ಟು ಹಣ ಪಡೆಯಬಹುದು ಎಂಬ ಮನೋಭಾವವೇ ಪ್ರಧಾನವಾಗಿ ಕಾಣುತ್ತದೆ. ಇದು ನಮಗೆಲ್ಲಾ ಗೊತ್ತಿರುವ ಸಂಗತಿಯೇ. ಆದರೂ ನಮ್ಮ ನಡವಳಿಕೆಯಲ್ಲಿ ಬದಲಾವಣೆ ಕಂಡುಬರುತ್ತಿಲ್ಲ.

ನಮ್ಮ ಆರೋಗ್ಯ ಹೇಗಿದೆ? ಎಂದರೆ ನಮ್ಮ ಅಡುಗೆ ಮನೆಯಂತೆ ಎಂದು ಹಿಂದೆ ಹೇಳುತ್ತಿದ್ದರು. ಅಡುಗೆ ಮನೆ ಎಂದರೆ ಅದು ಆರೋಗ್ಯದ ಉಗ್ರಾಣ. ನಮಗೆ ಏನು ಬೇಕು, ಏನು ಬೇಡ ಎಂದು ಚಿಂತಿಸಿ ಅದಕ್ಕೆ ಅನುಗುಣವಾಗಿ ಆಹಾರ ತಯಾರಿಸಲಾಗುತ್ತಿತ್ತು. ಭಾರತೀಯ ಆಹಾರ ಪದ್ಧತಿ ಮೊದಲಿನಿಂದಲೂ ಶ್ರೇಷ್ಠತೆಯಲ್ಲಿ ತನ್ನ ಸ್ಥಾನ ಉಳಿಸಿಕೊಂಡಿದೆ. ಆದರೆ ಈಗಿನ ಯುವ ಪೀಳಿಗೆಗೆ ಮನೆಯ ಅಡುಗೆಗಿಂತ, ಹೊಟೇಲ್‌ನ ಆಹಾರವೇ ರುಚಿ. ಕೆಲವು ಸಲ ಹೊರಗಡೆಯಿಂದ ತಂದು ತಿಂದ ಕೂಡಲೇ ಆರೋಗ್ಯದಲ್ಲಿ ಏರುಪೇರಾಗುತ್ತದೆ. ಅದಕ್ಕೆ ಕಾರಣವೂ ನಮಗೆ ಗೊತ್ತು. ಆದರೂ ನಮ್ಮ ಚಾಳಿ ಬಿಡುವುದಿಲ್ಲ. ಆರೋಗ್ಯಕ್ಕಾಗಿ ಆಹಾರ ಎನ್ನುವುದರ ಬದಲು ಬಾಯಿರುಚಿಗಾಗಿ ಆಹಾರ ಎನ್ನುವಂತಾಗಿದೆ. ಅದರ ಪರಿಣಾಮವನ್ನೂ ನಾವು ಎದುರಿಸುತ್ತಿದ್ದೇವೆ. ಹಿಂದೆ ಮನೆಗಳಲ್ಲಿ ಸೌದೆ, ಇದ್ದಿಲುಗಳಿಂದ ಆಹಾರ ತಯಾರಾಗುತ್ತಿತ್ತು, ಆಹಾರ ತಯಾರಿಸಲು ಯಾವುದೇ ಕುಕ್ಕರ್‌ನಂತಹ ಪದಾರ್ಥ ಇರುತ್ತಿರಲಿಲ್ಲ. ಅದೆಲ್ಲಾ ನಮ್ಮ ಆರೋಗ್ಯಕ್ಕೆ ಪೂರಕವಾಗಿರುತ್ತಿತ್ತು. ಇತ್ತೀಚೆಗೆ ಅನೇಕರು ಆರೋಗ್ಯಕ್ಕಾಗಿ ಕುಕ್ಕರ್ ಬಳಸಬಾರದು, ಮಣ್ಣಿನಿಂದ ತಯಾರಾದ ಪರಿಕರಗಳನ್ನು ಉಪಯೋಗಿಸಬೇಕು ಎಂಬುದನ್ನು ಕಂಡುಕೊಂಡಿದ್ದಾರೆ.

ಇತ್ತೀಚೆಗೆ ನಮ್ಮ ಹೆಣ್ಣುಮಕ್ಕಳಿಗೆ ಕೂದಲು ಬಾಚಿಕೊಂಡು ಹೆರಳು ಕಟ್ಟಿಕೊಳ್ಳುವುದು ಓಲ್ಡ್ ಫ್ಯಾಷನ್ ಎನ್ನುವಂತಾಗಿದೆ. ಈ ರೀತಿ ತಲೆ ಬಾಚದೆ ಮನೆಯೊಳಗೆ ಓಡಾಡುವುದು, ಊಟತಿಂಡಿ ತಯಾರಿಸುವಾಗ ಕೂದಲು ಉದುರಿ ಆಹಾರ ಪದಾರ್ಥಗಳಲ್ಲಿ ಬೀಳಬಹುದು ಎಂಬುದೇ ತಿಳಿಯದಂತಹ ವರ್ತನೆ ಕಾಣಿತ್ತೇವೆ. ಫ್ಯಾಷನ್ ಹೆಸರಿನಲ್ಲಿ ಆರೋಗ್ಯವನ್ನೇ ಹಾಳುಮಾಡಿಕೊಳ್ಳುವುದು ಎಷ್ಟು ಸೂಕ್ತ? ಎಂಬ ಬಗ್ಗೆ ಯೋಚಿಸಬೇಕಾಗಿದೆ.

ಹಿಂದಿನವರು, ಅಂದರೆ ನಮ್ಮೊಡನಿರುವ ಎಂಬತ್ತು, ತೊಂಬತ್ತು ವರ್ಷವಾಗಿರುವ ಅನೇಕರನ್ನು ಗಮನಿಸಿದಾಗ, ಅವರಲ್ಲಿ ಬಹುತೇಕರಿಗೆ ಕಣ್ಣು ಕಾಣುತ್ತದೆ, ಕಿವಿ ಕೇಳುತ್ತದೆ. ತಲೆಯಲ್ಲಿ ಕೂದಲು ಸೊಂಪಾಗಿರುವುದನ್ನು ಕಾಣಬಹುದು. ಇದಕ್ಕೆ ಕಾರಣ ಅವರನ್ನು ಯಾವ ಫ್ಯಾಷನ್‌ಗಳು ಬಾಧಿಸಿಲ್ಲ ಎಂಬುದು. ಅವರಿಗೆ ತಾವು ಆರೋಗ್ಯ ಪೂರ್ಣವಾಗಿ ಹೇಗಿರಬೇಕು ಎಂಬುದರ ಅರಿವಿದೆ. ಅವರನ್ನು ಕಂಡಾಗ ನಾವೂ ಹಾಗೆ ಇದ್ದರೆ ಎಷ್ಟು ಚೆನ್ನಾಗಿರುತ್ತದೆ ಎನಿಸುತ್ತದೆ. ಆದರೆ ಅವರ ಜೀವನ ವಿಧಾನವನ್ನು ನಾವು ಗಮನಿಸುವುದಿಲ್ಲ.

ನಮ್ಮಲ್ಲಿ ಹಿಂದಿನಿಂದ ಹೇಳಿಕೊಂಡು ಬಂದಿರುವುದು 'ಓಲ್ಡ್ ಈಸ್ ಗೋಲ್ಡ್' ಎಂದು. ಅಂದರೆ ಹಳೆಯದೆಲ್ಲವೂ ಅಪರಂಜಿ ಎಂದು. ಈಗಿನದು ಬರೀ ಥಳಕು–ಬಳಕು ಎಂಬಂತಾಗಿದೆ. ಆದರೆ ಹಳೆಯ ಪದ್ಧತಿಯನ್ನು ಮಾತ್ರ ಅನುಸರಿಸುವುದಿಲ್ಲ. ನಿಜ, ನಾವು ಆಧುನಿಕತೆಗೆ ತೆರೆದುಕೊಳ್ಳಬೇಕು, ತಪ್ಪಿಲ್ಲ. ಅಪ್ಪ ಹಾಕಿದ ಆಲದ ಮರ ಎಂದು ಅದರಲ್ಲಿ ನೇಣು ಹಾಕಿಕೊಳ್ಳಬೇಕೆ? ಎಂದು ಕೆಲವರು ಹೇಳುತ್ತಾರೆ. ಇದೊಂದು ರೀತಿಯ ಪಲಾಯನ ವಾದ. ಹಳೆಯ ಪದ್ಧತಿ ಎಷ್ಟು ಚೆಂದ ಎಂಬುದನ್ನು ಒಮ್ಮೆ ಅವಲೋಕನ ಮಾಡಿ, ಆರೋಗ್ಯ ಕೆಟ್ಟ ನಂತರ ಚಿಂತಿಸುವುದಕ್ಕಿಂತ ಆರೋಗ್ಯ ಕಾಪಾಡಿಕೊಳ್ಳುವುದು ಮುಖ್ಯ ಎಂಬುದನ್ನು ಅರಿತುಕೊಳ್ಳಬೇಕು. ಹಳೆಯ ಪದ್ಧತಿಯನ್ನು ಬೇಕಾದರೆ ಈಗಿನ ಕಾಲಕ್ಕೆ ತಕ್ಕ ಹಾಗೆ ಸ್ವಲ್ಪ ಮಾರ್ಪಾಡು ಮಾಡಿಕೊಳ್ಳುವುದು ತಪ್ಪೆನಿಸುವುದಿಲ್ಲ. ಆದರೆ ವಿವೇಚನೆ ಮಾಡದೆ ಹಳೆಯದೆಲ್ಲಾ ಸರಿಯಿಲ್ಲ ಎಂದು ಮಾತ್ರ ನಿರ್ಧರಿಸಬಾರದು. ನಮ್ಮ ಜೀವನ ಆರೋಗ್ಯಪೂರ್ಣವಾಗಿರಬೇಕೇ ಹೊರತು ಆಧುನಿಕತೆಯ ಹೆಸರಿನಲ್ಲಿ ಅದನ್ನು ಹಾಳು ಮಾಡಿಕೊಳ್ಳಬಾರದು. ವಿವೇಚನೆ ಇರಬೇಕು. ನನ್ನ ಬದುಕು ನನ್ನದು ಎಂಬುದನ್ನು ಅರಿತುಕೊಳ್ಳಬೇಕು.

ಹಲವು ಉತ್ಪನ್ನಗಳಿಗೆ 'ಮೈಸೂರು' ಬ್ರಾಂಡ್; ಯದುವೀರ್ ಹರ್ಷ



ಉದ್ಯಮ ಶೀಲತೆ, ನಾವೀನ್ಯತೆ, ವಿನ್ಯಾಸ ಹಾಗೂ ಬೂಟ್ ಕ್ಯಾಂಪ್ ಕಾರ್ಯಕ್ರಮದ ಸಮರೋಪವನ್ನು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು.

ಮೈಸೂರು, ಫೆ.2(ಎಸ್‌ಪಿಎನ್)– ಮೈಸೂರು ರಾಜರ ಕಾಲದಲ್ಲಿ ಮೈಸೂರು ಸಿಲ್ಕ್, ಮೈಸೂರು ಪಾಕ್ ಸೇರಿದಂತೆ ಒಟ್ಟು 25ರಿಂದ 30 ಉತ್ಪನ್ನಗಳನ್ನು 'ಮೈಸೂರು' ಹೆಸರಿನಲ್ಲಿ ಬ್ರಾಂಡೆಡ್ ಮಾಡಲಾಗಿದ್ದು, ಈ ಹೆಸರು ಗುಣಮಟ್ಟಕ್ಕೆ ಹೆಸರುವಾಸಿಯಾಗಿ ಇಂದಿಗೂ ಪ್ರಸ್ತುತವಾಗಿರುವುದು ಹೆಮ್ಮೆಯ ವಿಷಯ ಎಂದು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟರು.

ಮೈಸೂರು–ಮಾನಂದವಾಡಿ ರಸ್ತೆಯಲ್ಲಿರುವ ಎನ್‌ಐಇ ಕಾಲೇಜಿನ ಡೈಮಂಡ್ ಜುಬಿಲಿ ಕ್ರೀಡಾ ಸಂಕೀರ್ಣದಲ್ಲಿ ಎನ್‌ಐಇ, ಎಐಸಿಟಿಇ. ವಿಶ್ವೇಶ್ವರಯ್ಯ ತಾಂತ್ರಿಕ ವಿವಿ, ಕೇಂದ್ರ ಶಿಕ್ಷಣ ಸಚಿವಾಲಯ ಹಾಗೂ ಆವಿಷ್ಕಾರ ಕೋಶ ಸಹಯೋಗದೊಂದಿಗೆ ಆಯೋಜಿಸಿದ್ದ ಉದ್ಯಮ ಶೀಲತೆ, ನಾವೀನ್ಯತೆ, ವಿನ್ಯಾಸ ಹಾಗೂ ಬೂಟ್ ಕ್ಯಾಂಪ್ ಕಾರ್ಯಕ್ರಮದ ಸಮರೋಪದಲ್ಲಿ ಅವರು ಮಾತನಾಡಿದರು.

'ಮೈಸೂರು ಸಿಲ್ಕ್' ಸ್ಥಾಪನೆಯಾಗಿ ನೂರು ವರ್ಷ ಕಳೆದಿವೆ. ಇಲ್ಲಿ ಉತ್ಪಾದನೆಗೊಳ್ಳುವ ಉತ್ಪನ್ನಗಳ ಗುಣಮಟ್ಟದಿಂದ ಇಂದಿಗೂ ದೇಶ–ವಿದೇಶದ ಗ್ರಾಹಕರನ್ನು ಸೆಳೆಯುತ್ತಿದೆ. ಇಂತಹ ಬ್ಯಾಂಡೆಡ್ ಉತ್ಪನ್ನಗಳನ್ನು ಸೃಷ್ಟಿಸಿದರೆ, ದೀರ್ಘ ಕಾಲದ ಉದ್ಯೋಗಾವಕಾಶ, ಉತ್ಪಾದಕತೆಯ ಜೊತೆಗೆ ನಮ್ಮ ದೇಶದ ಹೆಸರು ಹೆಸರುವಾಸಿಯಾಗುತ್ತದೆ. ಮೈಸೂರು ಪ್ರಾಂತ್ಯಕ್ಕೆ ಸೀಮಿತವಾಗಿ ಯೋಚಿಸುವುದಾದರೆ, ಮೈಸೂರಿನ ಹೆಸರನ್ನು ಬ್ರಾಂಡೆಡ್ ಮಾಡಲು ನಮ್ಮ ಪೂರ್ವಿಕರು ಅಂದಿನ ಜಾಗತಿಕ ಮಾರುಕಟ್ಟೆಯಲ್ಲಿನ ತಲ್ಲಣಗಳನ್ನು ಯೋಚಿಸಿಯೇ ಈ ತೀರ್ಮಾನ ಮಾಡಿರಬಹುದು ಎಂದು ಹೇಳಿದರು.

ಮೈಸೂರು ಪ್ರಾಂತ್ಯದ ಹೆಸರನ್ನು ಜಗತ್ತಿನ ಮೂಲೆಮೂಲೆಗೆ ಪರಿಚಯಿಸಲು ನಮ್ಮ ಪೂರ್ವಿಕರು ಹಾಗೂ ಸರ್.ಎಂ. ವಿಶ್ವೇಶ್ವರಯ್ಯರ ಪಾತ್ರ ಹಿರಿದು. ರಾಜರ ಆಳ್ವಿಕೆ ಕೊನೆಗೊಂಡು ಪ್ರಜಾಪ್ರಭುತ್ವ ಆಳ್ವಿಕೆ ಬಂದ ಮೇಲೆ ತಾಂತ್ರಿಕತೆ, ಕೈಗಾರಿಕೆ ಹಾಗೂ ಇತರೆ ವಿಷಯಗಳಲ್ಲಿ ಸಾಕಷ್ಟು ಆವಿಷ್ಕಾರಗಳ ಆಗಿವೆ. ಅದೇ ರೀತಿ 1973ರಲ್ಲಿ ಮೈಸೂರು ರಾಜ್ಯದ ಹೆಸರು 'ಕರ್ನಾಟಕ' ಎಂದು ಬದಲಾದ ನಂತರ ಸ್ಥಳೀಯ ಉತ್ಪನ್ನಗಳು 'ಕರ್ನಾಟಕ' ಹೆಸರಿನಲ್ಲಿ ಬ್ರಾಂಡೆಡ್ ಆಗಬೇಕು. ಇದರತ್ತ ಇಂದಿನ ಯುವ ಪೀಳಿಗೆ ಯೋಚಿಸಬೇಕು. ಅಲ್ಲದೆ, ಬ್ರಾಂಡೆಡ್‌ಗಳನ್ನು ಸೃಷ್ಟಿಸುವುದರ ಹಿಂದೆ ದೇಶಿ ಉತ್ಪನ್ನಗಳ ಮಾರಾಟ ಹಾಗೂ ಮಾರುಕಟ್ಟೆಯ ಗುಣಮಟ್ಟವನ್ನು ಕಾಪಾಡಲು ಅನುಕೂಲವಾಗುತ್ತದೆ ಎಂದರು.

ಮೊದಲನೇ ವಿಶ್ವ ಯುದ್ಧದಲ್ಲಿ ಮೈಸೂರು ಯೋಧರ ಪಾತ್ರ ಪ್ರಮುಖವಾಗಿದೆ. ಈ ಅಂಶವನ್ನು ಇತಿಹಾಸದಲ್ಲಿ ಕಾಣಬಹುದು. ಏಕೆಂದರೆ, ತಂತ್ರಜ್ಞಾನ ಬೆಳೆದಂತೆ, ಯುದ್ಧ ಶೈಲಿಯಲ್ಲೂ ಬದಲಾಗಿದೆ. ಹಾಗಾಗಿ ಭಾರತದ ರಕ್ಷಣಾ ಕ್ಷೇತ್ರ ಪ್ರಸ್ತುತ ಸನ್ನಿವೇಶಕ್ಕೆ ತಕ್ಕಂತೆ ಆಧುನಿಕರಣಗೊಳಿಸಲು ತಂತ್ರಜ್ಞಾನ ಪ್ರಮುಖ ಪಾತ್ರ ವಹಿಸುತ್ತದೆ. ಇದರ ಜತೆಗೆ ಪ್ರಪಂಚದಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ, ಹವಮಾನ ಬದಲಾವಣೆ, ಸೈಬ್ರರ್ ಭದ್ರತೆ ಹಾಗೂ ಇಂಧನ ಕ್ಷೇತ್ರದ ಸ್ವಾವಲಂಬನೆ ಕುರಿತು ಹೆಚ್ಚಿನ ಆದ್ಯತೆ ಚರ್ಚೆಯಾಗುತ್ತಿದೆ. ಇದರ ಬಗ್ಗೆ ಯುವ ಪೀಳಿಗೆಗೆ ಚಿಂತಿಸಬೇಕು ಎಂದು ಸಲಹೆ ನೀಡಿದರು.

ವೇದಿಕೆಯಲ್ಲಿ ವಾದ್ವನಿ ಫೌಂಡೇಶನ್‌ನ ವಿಷ್ಣುಪ್ರಿಯಾ, ಎನ್‌ಐಇ ಕಾಲೇಜಿನ ಕಾರ್ಯದರ್ಶಿ ಎಸ್.ಬಿ.ಉದಯ್ ಶಂಕರ್, ಉಪಪ್ರಾಂಶುಪಾಲ ಪ್ರೊ.ಎಂ.ಎಸ್.ಗಣೇಶ್ ಪ್ರಸಾದ್, ಡಾ.ರೋಹಿಣಿ ನಾಗಪ್ರಸಾದ್, ಡಾ.ಪೂಜಾ ರಾವತ್, ಡಾ.ಸಿ.ಕೆ. ವನಮಾಲ ಉಪಸ್ಥಿತರಿದ್ದರು.



ಮಾನಸಿನಗರದಲ್ಲಿ ಇತ್ತೀಚೆಗೆ 75ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ನಿವಾಸಿಗಳ ಸಂಘದ ನೂತನ ಅಧ್ಯಕ್ಷ ಬಾಬು ನಾಯಕ್, ಖಜಾಂಚಿ ಹೆಚ್. ನರಸಿಂಹೇಗೌಡ ಇನ್ನಿತರರು ಉಪಸ್ಥಿತರಿದ್ದರು. ಈ ವೇಳೆ ಮಾತನಾಡಿದ ಬಾಬು ಅವರು, ಸಂವಿಧಾನದ ಲಕ್ಷಣಗಳು ಮತ್ತು ಅದರ ಪೂರ್ವ ಪೀಠಿಕೆ ಬಗ್ಗೆ ಮಾಹಿತಿ ನೀಡಿದರು. ಇದೇ ವೇಳೆ ಪರಿಸರವಾದಿ ಕೃಷ್ಣಪ್ಪ ಅವರನ್ನು ಸನ್ಮಾನಿಸಲಾಯಿತು. ಹೆಚ್.ಎಂ.ಮಲ್ಲೇಶ್, ಕಾರ್ಯದರ್ಶಿ ಹರಿರಾಮ್ ಇನ್ನಿತರರು ಈ ವೇಳೆ ಉಪಸ್ಥಿತರಿದ್ದರು.

KSRTC 'ಅಶ್ವಮೇಧ'ಕ್ಕೆ ಫೆ.5ರಂದು ಚಾಲನೆ

ಬೆಂಗಳೂರು: ಹೊಸವಿನ್ಯಾಸ ಹಾಗೂ ಹೊಸಬ್ರಾಂಡ್‌ನ ಪಾಯಿಂಟ್ ಟು ಪಾಯಿಂಟ್ ಎಕ್ಸ್‌ಪ್ರೆಸ್ 'ಅಶ್ವಮೇಧ' ಕರ್ನಾಟಕ ಸಾರಿಗೆ ಬಸ್ ಸಂಚಾರಕ್ಕೆ ಸಿದ್ಧಗೊಂಡಿದೆ.

3.42 ಮೀಟರ್ ಎತ್ತರ ಇರುವ ಅಶ್ವಮೇಧ (ಕ್ಲಾಸಿಕ್) ಬಸ್ ಅನ್ನು 'ಪ್ರಯಾಣದ ಮರು ಕಲ್ಪನೆ' ಘೋಷವಾಕ್ಯದೊಂದಿಗೆ ಪರಿಚಯಿಸಲಾಗುತ್ತಿದೆ. ಈ ಬಸ್‌ನಲ್ಲಿ 52 ಆಸನಗಳಿದ್ದು, 'ಬಕೆಟ್ ಟೈಪ್' ವಿನ್ಯಾಸವನ್ನು ಹೊಂದಿವೆ. ವಾಹನದ ಮುಂದಿನ ಮತ್ತು ಹಿಂದಿನ ಗಾಜು ವಿಶಾಲವಾಗಿವೆ. ಕಿಟಕಿ ಫ್ರೇಮ್ ಹಾಗೂ ಮೇಲಿನ ಗಾಜು ದೊಡ್ಡದಾಗಿದ್ದು, ಟಿಂಟೆಡ್ ಗಾಜುಗಳನ್ನು ಹೊಂದಿವೆ.

ವಾಹನದ ಒಳಾಂಗಣದ ಲಗೇಜ್ ಕ್ಯಾರಿಯರ್ ಅನ್ನು ವಿನೂತನವಾಗಿ ವಿನ್ಯಾಸ ಮಾಡಲಾಗಿದೆ. ಒಳಾಂಗಣದಲ್ಲಿ ನಿರಂತರ ಉರಿಯುವ ಎಲ್‌ಇಡಿ ದೀಪಗಳಿವೆ.



ಎಲ್‌ಇಡಿ ಮಾರ್ಗಫಲಕ ಇದೆ. ಸ್ವಯಂ ಚಾಲಿತ ಬಾಗಿಲುಗಳು ಮತ್ತು ತುರ್ತು ಬಟನ್ ವ್ಯವಸ್ಥೆ ಇದೆ. ಈ ಬಸ್‌ಗಳು ಎಲ್ಲ ಜಿಲ್ಲಾ ಕೇಂದ್ರಗಳಿಂದ ಬೆಂಗಳೂರಿಗೆ ಸಂಪರ್ಕ ಕಲ್ಪಿಸಲಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧ ಪೂರ್ವದ್ವಾರದ ಮುಂಭಾಗ ಫೆ.5ರಂದು 100 'ಅಶ್ವಮೇಧ' ಬಸ್‌ಗಳಿಗೆ ಚಾಲನೆ ನೀಡಲಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಸ್.ಆರ್. ಶ್ರೀನಿವಾಸ ಭಾಗವಹಿಸಲಿದ್ದಾರೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಅಪಘಾತಕ್ಕೆ ಬಾಯ್ತೆರೆದ ಮಳೆ ನೀರು ಚರಂಡಿ ರಿಪೇರಿ



ಮಿತ್ರನ ಫಲಶ್ರುತಿ

ಮೈಸೂರು, ಫೆ.2(ಬಿಎಲ್‌ಯು)– ಮೈಸೂರು ಅರಮನೆ ಬಳಿ ಅಪಘಾತಕ್ಕೆ ಬಾಯ್ತೆರೆದು ಮಹಿಳೆಯೊಬ್ಬರ ಬಲಿ ಪಡೆದ ಮಳೆ ನೀರಿನ ಚರಂಡಿಯನ್ನು ನಗರ ಪಾಲಿಕೆ ಅಧಿಕಾರಿಗಳು ಕೊನೆಗೂ ರಿಪೇರಿ ಮಾಡಿಸಿದ್ದಾರೆ.

ಮೈಸೂರು ಅರಮನೆಯ ಕೋಟೆ ಮಾರಮ್ಮ ದೇವಸ್ಥಾನದ ಮುಂದೆ ಮಳೆ ನೀರಿನ ಚರಂಡಿಯ ಮೇಲೆ ಹಾಕಿದ್ದ ಕಬ್ಬಿಣದ ಗ್ರಿಲ್ ಮುರಿದಿತ್ತು. ಹಳ್ಳಕ್ಕೆ ವಾಹನಗಳು ಬಿದ್ದು ಅಪಘಾತವಾಗುತ್ತಿದ್ದ ಕಾರಣ ಸಂಚಾರಿ ಪೊಲೀಸರು ಚರಂಡಿ ಬಳಿ ಬ್ಯಾರಿಕೇಡ್ ಹಾಕಿದ್ದರು.

ಕಳೆದ ತಿಂಗಳು ಇದೇ ಸ್ಥಳದಲ್ಲಿ ಮಹಿಳೆ ಬ್ಯಾರಿಕೇಡ್‌ಗೆ ಡಿಕ್ಕಿ ಹೊಡೆಯುವುದರಿಂದ ತಪ್ಪಿಸಿಕೊಳ್ಳಲು ಬಲಕ್ಕೆ ತಿರುಗಿದಾಗ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದು ಮೃತಪಟ್ಟಿದ್ದರು. ಈ ಬಗ್ಗೆ 'ಮೈಸೂರು ಮಿತ್ರ' ವರದಿ ಮಾಡಿ ನಗರ ಪಾಲಿಕೆ ಅಧಿಕಾರಿಗಳನ್ನು ಎಚ್ಚರಿಸಿತ್ತು. ಪಾಲಿಕೆ ಅಧಿಕಾರಿಗಳು ಈಗ ಚರಂಡಿ ಮೇಲೆ ಗಟ್ಟಿಯಾದ ಕಬ್ಬಿಣದ ಜಾಲರಿ ಹಾಕಿದ್ದಾರೆ. ಇದರಿಂದ ಈ ಸ್ಥಳದಲ್ಲಿ ಆಗುತ್ತಿದ್ದ ಅಪಘಾತಗಳು ನಿಯಂತ್ರಣಕ್ಕೆ ಬಂದಿದೆ. ಈ ಮೊದಲೇ ಮಳೆ ನೀರು ಚರಂಡಿಯನ್ನು ರಿಪೇರಿ ಮಾಡಿದ್ದರೆ ಅಮಾಯಕ ಮಹಿಳೆಯೊಬ್ಬರ ಪ್ರಾಣ ಉಳಿಯುತ್ತಿತ್ತು.

ಹೆಣ್ಣು ಮಕ್ಕಳ ಸಮಗ್ರ ಅಭಿವೃದ್ಧಿಯಿಂದ ಗಾಂಧೀಜಿ ಕನಸಿನ ರಾಮರಾಜ್ಯ ಸ್ಥಾಪನೆ ಸಾಕಾರ

● ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡರ ಅಭಿಮತ ● ಕಾರ್ಮಿಕರ ಪ್ರತಿಭಾನ್ವಿತ ಮಕ್ಕಳಿಗೆ ಲ್ಯಾಪ್‌ಟಾಪ್ ವಿತರಣೆ ● ಐದು ವರ್ಷ ಶ್ರದ್ಧೆಯಿಂದ ಅಭ್ಯಸಿಸಿದರೆ 50 ವರ್ಷ ಬದುಕು ಸುಸೂತ್ರ: ಕಿವಿಮಾತು

> ❝ ಶಿಕ್ಷಣದಿಂದ ಮಾತ್ರ ಸಮಾಜದಲ್ಲಿ ಸಮಾನತೆ ಸಾಧ್ಯ. ಶಿಕ್ಷಣ ಪಡೆದು ಎತ್ತರಕ್ಕೆ ಬೆಳೆದಾಗ ನಿಮ್ಮನ್ನು ಎಲ್ಲರೂ ಪ್ರೀತಿಸುತ್ತಾರೆ. ನಾನು ಉನ್ನತ ಶಿಕ್ಷಣ ಸಚಿವನಾಗಿದ್ದಾಗ 1.09 ಲಕ್ಷ ಪದವಿ ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್ ವಿತರಿಸಿದೆ. ಅದಕ್ಕೆ ವಿರೋಧ ವ್ಯಕ್ತವಾಗಿತ್ತು. ಆದರೆ ಕೋವಿಡ್ ಸಂದರ್ಭದಲ್ಲಿ ಅವು ತುಂಬಾ ಉಪಯುಕ್ತವಾದವು. ಕಟ್ಟಡ ಕಾರ್ಮಿಕ ಮಕ್ಕಳ ಶಿಕ್ಷಣಕ್ಕೆ ನೆರವಾಗುವ ನಿಟ್ಟಿನಲ್ಲಿ ಸರ್ಕಾರ ನೀಡಿರುವ ಲ್ಯಾಪ್‌ಟಾಪ್‌ಗಳನ್ನು ಶಿಕ್ಷಣಕ್ಕಾಗಿ ಸದ್ಬಳಕೆ ಮಾಡಿ ಕೊಳ್ಳಬೇಕು.
>
> –ಜಿ.ಟಿ.ದೇವೇಗೌಡರು



ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಾಯಿಸಲ್ಪಟ್ಟಿರುವ ಚಾಮುಂಡೇಶ್ವರಿ ಕ್ಷೇತ್ರದ ಕಾರ್ಮಿಕರ ಪ್ರತಿಭಾನ್ವಿತ ಮಕ್ಕಳಿಗೆ ಶಾಸಕ ಜಿ.ಟಿ.ದೇವೇಗೌಡರು ಜಲದರ್ಶಿನಿ ಅತಿಥಿಗೃಹದಲ್ಲಿ ಶುಕ್ರವಾರ ಲ್ಯಾಪ್‌ಟಾಪ್ ವಿತರಿಸಿದರು. ಜಿಲ್ಲಾ ಕಾರ್ಮಿಕ ಅಧಿಕಾರಿ ರಾಜೇಶ್ ಜಾದವ್ ಸೇರಿದಂತೆ ಅಧಿಕಾರಿಗಳು, ಮುಖಂಡರು, ವಿದ್ಯಾರ್ಥಿಗಳ ಪೋಷಕರು ಉಪಸ್ಥಿತರಿದ್ದರು.

ಮೈಸೂರು, ಫೆ.2(ಎಸ್‌ಬಿಡಿ)– ಹೆಣ್ಣು ಮಕ್ಕಳ ಸಮಗ್ರ ಅಭಿವೃದ್ಧಿ ಮೂಲಕ ಮಹಾತ್ಮ ಗಾಂಧೀಜಿ ಕನಸಿನ ರಾಮ ರಾಜ್ಯ ಸ್ಥಾಪನೆ ಸಾಧ್ಯವಿದೆ ಎಂದು ಮಾಜಿ ಸಚಿವರೂ ಆದ ಶಾಸಕ ಜಿ.ಟಿ. ದೇವೇಗೌಡರು ಅಭಿಪ್ರಾಯಿಸಿದರು.

ರಾಜ್ಯ ಕಾರ್ಮಿಕ ಇಲಾಖೆ ಹಾಗೂ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಶುಕ್ರವಾರ ಆಯೋಜಿಸಿದ್ದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ನೋಂದಾಯಿತ ಕಟ್ಟಡ ಕಾರ್ಮಿಕರ ಪ್ರತಿಭಾನ್ವಿತ 39 ಮಕ್ಕಳಿಗೆ ಉಚಿತವಾಗಿ ಲ್ಯಾಪ್‌ಟಾಪ್ ವಿತರಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಆರಂಭದಲ್ಲಿ ಸಾಮೂಹಿಕವಾಗಿ ಪ್ರಾರ್ಥನೆ ಮಾಡಿಸಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಿಮ್ಮ ಅಂಕವೆಷ್ಟು? ಯಾವ ಶಾಲೆ? ಯಾವ ಕ್ರೀಡೆ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುತ್ತೀರಿ? ನಿತ್ಯ ಎಷ್ಟು ಮಂದಿ ಯೋಗ, ಪ್ರಾರ್ಥನೆ, ಧ್ಯಾನ ಮಾಡುತ್ತೀರಿ? ಎಂದೆಲ್ಲಾ ವಿಚಾರಿಸಿದ ಜಿ.ಟಿ.ದೇವೇಗೌಡರು, ಇಲ್ಲಿರುವ 39 ವಿದ್ಯಾರ್ಥಿಗಳಲ್ಲಿ ಐದಾರು ಹುಡುಗರು ಮಾತ್ರ ಇದ್ದಾರೆ. ಶಿಕ್ಷಣದಲ್ಲಿ ಉತ್ತಮ ಸಾಧನೆ ಮಾಡುತ್ತಿರುವ ಹೆಣ್ಣು ಮಕ್ಕಳು, ಎಲ್ಲಾ ಕ್ಷೇತ್ರಗಳಲ್ಲೂ ಮುಂದೆ ಬರಬೇಕು. ಆಗ ಮಾತ್ರ ರಾಮರಾಜ್ಯ ಸ್ಥಾಪನೆ ಸಾಧ್ಯ ಎಂದು ಹೇಳಿದರು.

ದುಡಿಯುವ ವರ್ಗಗಳಲ್ಲಿ ಶೇ.50ರಷ್ಟು ಮಹಿಳೆಯರಿದ್ದಾರೆ. ಜಮೀನು, ಹೈನುಗಾರಿಕೆ, ಗುಡಿ ಕೈಗಾರಿಕೆ, ಜವಳಿ ಸೇರಿದಂತೆ ಬಹುತೇಕ ಕ್ಷೇತ್ರಗಳೂ ಸೇರಿದಂತೆ ಮನೆಗಳಲ್ಲೂ ಕೆಲಸ ಮಾಡುತ್ತಿದ್ದಾರೆ. ಕೃಷಿ ಕೆಲಸಗಳನ್ನೂ ಪುರುಷರಿಗೆ ಸಮಾನವಾಗಿ ಮಾಡುತ್ತಿದ್ದಾರೆ. ಇದರೊಂದಿಗೆ ಹೆಣ್ಣು ಮಕ್ಕಳು ಉತ್ತಮ ಶಿಕ್ಷಣ ಪಡೆದು ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮೆರೆಯಬೇಕು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸರ್ಕಾರದ ವಿತ್ತ ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ಆರ್ಥಿಕ ಸಚಿವರಾಗಿ 6 ಬಾರಿ ಬಜೆಟ್ ಮಂಡಿಸಿ, ದಾಖಲೆ ಬರೆದಿದ್ದಾರೆ. ಇಂತಹ ಸಾಧಕ ಮಹಿಳೆಯರು ನಿಮಗೆ ಮಾದರಿಯಾಗಬೇಕು ಎಂದು ಸಲಹೆ ನೀಡಿದರು.

ಗುರಿ ಸ್ಪಷ್ಟವಾಗಿರಲಿ: ವಿದ್ಯಾಭ್ಯಾಸದ ಜೊತೆಗೆ ಬದುಕು ಕಟ್ಟಿಕೊಳ್ಳಲು ಚಿಂತನೆ ಇರಬೇಕು. ಜೀವನದಲ್ಲಿ ಒಂದು ಸ್ಪಷ್ಟ ಗುರಿ ಇರಬೇಕು. ಯಾವುದೇ ಗೊಂದಲವಿಲ್ಲದೆ ಆಯ್ಕೆ ಮಾಡಿಕೊಂಡ ದಾರಿಯಲ್ಲಿ ಏಕಾಗ್ರತೆಯಿಂದ ಮುಂದುವರೆಯಬೇಕು. ತಮ್ಮ ಆಯ್ಕೆಯ ವಿಷಯದ ಬಗ್ಗೆ ಆಳವಾದ ಅಧ್ಯಯನ ಮಾಡಿದರೆ ಯಾವ ಕ್ಷೇತ್ರದಲ್ಲಾದರೂ ಸಾಧನೆ ಸಾಧ್ಯವಿದೆ. ಇದರೊಂದಿಗೆ ಮನೆ ಹಾಗೂ ಪರಿಸರದ ಸ್ವಚ್ಛತೆ, ಸುರಕ್ಷತೆಯ ಜವಾಬ್ದಾರಿ ನಿರ್ವಹಿಸಬೇಕು. ಮನೆ ಬಳಿ ಕನಿಷ್ಠ ಎರಡು ಗಿಡಗಳನ್ನಾದರೂ ಪ್ರೀತಿಯಿಂದ ಬೆಳೆಸಬೇಕು. ಒಳ್ಳೆಯ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಇದು ಸುವರ್ಣ ಕಾಲ: ಪದವಿಪೂರ್ವ ಶಿಕ್ಷಣ ಹಂತದಲ್ಲಿರುವ ನಿಮಗೆ ಇದು ಸುವರ್ಣ ಕಾಲ. ಐದು ವರ್ಷಗಳ ಕಾಲ ಕಷ್ಟಪಟ್ಟು ಓದಿದರೆ ಮುಂದಿನ 50 ವರ್ಷ ಸುಖವಾಗಿ ಬದುಕು ನಡೆಸಬಹುದು. ಯಾವ ಕಾರಣಕ್ಕೂ ನೀವು ಸೋಮಾರಿತನ ರೂಢಿಸಿಕೊಳ್ಳಬಾರದು. ತಮಗೆ ಎಷ್ಟೇ ಕಷ್ಟವಿದ್ದರೂ ನಿಮ್ಮನ್ನು ಓದಿಸುತ್ತಿರುವ ತಂದೆ–ತಾಯಿಯನ್ನು ಎಂದಿಗೂ ಮರೆಯಬೇಡಿ. ನಿಮ್ಮ ಬೆಳವಣಿಗೆಯಲ್ಲಿ ತಮ್ಮ ಖುಷಿ ಕಾಣುವ ಪೋಷಕರನ್ನು ಪೂಜಿಸಬೇಕು. ಜೀವನದಲ್ಲಿ ಸಾಧಿಸುವ ಮೂಲಕ ಕುಟುಂಬ ಹಾಗೂ ದೇಶಕ್ಕೆ ಕೀರ್ತಿ ತರಬೇಕು ಎಂದು ಪ್ರೋತ್ಸಾಹಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಮಿಕ ಅಧಿಕಾರಿ ರಾಜೇಶ್ ಜಾಧ್‌ವ್, ಮುಖಂಡರಾದ ಚನ್ನೇಗೌಡ, ಸತೀಶ್, ರಾಜು, ಕುಮಾರಸ್ವಾಮಿ, ಮಹದೇವು, ಶಿವಲಿಂಗು, ಹಿರಿಯ ಕಾರ್ಮಿಕ ನಿರೀಕ್ಷಕರಾದ ಶಶಿಧರ್, ಮಾದಪ್ಪ, ಜಯಣ್ಣ, ಮಂಗಳಗೌರಿ ಮತ್ತಿತರರು ಉಪಸ್ಥಿತರಿದ್ದರು.

ಜಿಲ್ಲೆಯಲ್ಲಿ 450 ವಿದ್ಯಾರ್ಥಿಗಳಿಗೆ ಸೌಲಭ್ಯ

ಮೈಸೂರು ಜಿಲ್ಲೆಯಲ್ಲಿ 1,42,260 ಪುರುಷರು ಹಾಗೂ 37,144 ಮಹಿಳೆಯರು ಸೇರಿ ಒಟ್ಟು 1,79,404 ಕಾರ್ಮಿಕರು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಣಿ ಮಾಡಿಕೊಂಡಿದ್ದಾರೆ. ಇವರಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಸ್ತುತ ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿದ್ಯಾಭ್ಯಾಸ ಮಾಡುತ್ತಿರುವ ಕಾರ್ಮಿಕರ ಮಕ್ಕಳಿಂದ ಉಚಿತ ಲ್ಯಾಪ್‌ಟಾಪ್‌ಗೆ ಅರ್ಜಿ ಆಹ್ವಾನಿಸಲಾಗಿತ್ತು. ಅದರಂತೆ ಸಲ್ಲಿಕೆಯಾಗಿದ್ದ 6461 ಅರ್ಜಿಗಳಲ್ಲಿ, ಜಿಲ್ಲೆಗೆ ಹಂಚಿಕೆಯಾಗಿರುವ ಲ್ಯಾಪ್‌ಟಾಪ್ ಸಂಖ್ಯೆಗೆ ಅನುಗುಣವಾಗಿ ಜಿಲ್ಲಾ ಮಟ್ಟದ ಸಮಿತಿ ಮೂಲಕ 450 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಇದರಲ್ಲಿ ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ 39 ವಿದ್ಯಾರ್ಥಿಗಳಿಗೆ ಇಂದು ಲ್ಯಾಪ್‌ಟಾಪ್ ವಿತರಿಸಲಾಗಿದೆ. ಇವರಲ್ಲಿ ಬಹುತೇಕರು ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿದ್ದಾರೆ. ಉಳಿದ ಕ್ಷೇತ್ರಗಳಲ್ಲೂ ಲ್ಯಾಪ್‌ಟಾಪ್ ವಿತರಣೆಗೆ ಕ್ರಮ ವಹಿಸಲಾಗಿದೆ ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿ ರಾಜೇಶ್ ಜಾದವ್ ತಿಳಿಸಿದರು.

ಕಾಂಗ್ರೆಸ್ ಜನರ ತೀರ್ಪಿನಿಂದ ಅಧಿಕಾರಕ್ಕೆ ಬಂದರೆ ಬಿಜೆಪಿ ಆಪರೇಷನ್‌ನಿಂದ ಅಧಿಕಾರ ಹಿಡಿಯುತ್ತೆ!



ಬೆಂಗಳೂರು, ಫೆ.2(ಕೆಎಂಶಿ)– ಜನರ ವಿಶ್ವಾಸ, ನಂಬಿಕೆಗಳಿಸುವಲ್ಲಿ ವಿಫಲವಾಗಿರುವ ಬಿಜೆಪಿಗೆ ಆಪರೇಷನ್ ಬಿಟ್ಟರೆ ಬೇರೇನೂ ಗೊತ್ತಿಲ್ಲ, ಹಣ ಕೊಟ್ಟು ಶಾಸಕರನ್ನು ಕೊಂಡುಕೊಂಡು ಬಹುಮತ ಮಾಡಿಕೊಳ್ಳುತ್ತಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹಾಗೂ ವಿಧಾನ ಪರಿಷತ್ ಮಾಜಿ ಸದಸ್ಯ ಜಗದೀಶ್ ಶೆಟ್ಟರ್ ಅವರುಗಳು, ಕಾಂಗ್ರೆಸ್ಸಿನಿಂದ ಹಲವು ನಾಯಕರು ದುಂಬಾಲು ಬಿದ್ದಿದ್ದಾರೆ ಎಂಬುದಾಗಿ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿ, ಹಿಂದೆಯೂ ಎರಡು ಬಾರಿ ಇದೇ ರೀತಿ ಮಾಡಿದ್ದಾರೆ ಎಂದರು.

ರಾಜ್ಯದಲ್ಲಿ ಜನರು ಬಿಜೆಪಿಗೆ ಪೂರ್ಣ ಅಧಿಕಾರ ಕೊಟ್ಟೇ ಇಲ್ಲ, 2008, 2013, 2018ರಲ್ಲಿ ಅವರು ಬಹುಮತದಿಂದ ಗೆದ್ದೇ ಇಲ್ಲ, ಕಾಂಗ್ರೆಸ್ 2013ರಲ್ಲಿ ಗೆದ್ದಿದೆ, 2018ರಲ್ಲಿ ಸೋತು ಪುನಃ 2023ರಲ್ಲಿ 136 ಸ್ಥಾನಗಳನ್ನು ಪಡೆದು ಗೆದ್ದಿದ್ದೇವೆ. ಕಾಂಗ್ರೆಸ್ ಪಕ್ಷ ಜನರ ವಿಶ್ವಾಸ ಹಾಗೂ ತೀರ್ಪಿನಂತೆ ಅಧಿಕಾರಕ್ಕೆ ಬರುತ್ತದೆ, ಬಿಜೆಪಿಯವರು ಆಪರೇಷನ್ ಕಮಲ ಮಾಡಿ ಅಧಿಕಾರಕ್ಕೆ ಬರುತ್ತಾರೆ ಎಂದರು.

ಮಂಡ್ಯದ ಹನುಮ ಧ್ವಜ ಪ್ರಕರಣದ ವಾಸ್ತವಾಂಶವೇ ತಿಳಿದಿಲ್ಲ, ಅಲ್ಲಿ ಕೇವಲ ರಾಷ್ಟ್ರಧ್ವಜ ಹಾಗೂ ಕನ್ನಡ ಧ್ವಜ ಹಾರಿಸುವುದಾಗಿ ಕೆರಗೋಡು ಗ್ರಾಮಪಂಚಾಯ್ತಿಯಲ್ಲಿ ಅನುಮತಿ ಪಡೆದುಕೊಂಡು ಕೇಸರಿ ಧ್ವಜ ಹಾರಿಸಲು ಮುಂದಾಗಿದ್ದರು. ಗೃಹಲಕ್ಷ್ಮೀ ಯೋಜನೆಯಡಿ ರಾಜ್ಯದ 1.17 ಕೋಟಿ ಮಹಿಳೆಯರಿಗೆ ಡಿಬಿಟಿ ಮೂಲಕ ಹಣ ವರ್ಗಾವಣೆಯಾಗುತ್ತಿದೆ ಎಂದರು.

ಸಿಬಿಐ, ಐಟಿ, ಇಡಿ ಈಗ ಸ್ವಾಯತ್ತ ಸಂಸ್ಥೆಗಳಲ್ಲ, ಬಿಜೆಪಿ ಅಂಗ ಸಂಸ್ಥೆಗಳು

ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕೆ

ಬೆಂಗಳೂರು, ಫೆ. 2(ಕೆಎಂಶಿ)– ಸಿಬಿಐ, ಐಟಿ, ಇಡಿ ಸಂಸ್ಥೆಗಳು ಈಗ ಸ್ವಾಯತ್ತ ಸಂಸ್ಥೆಗಳಾಗಿ ಉಳಿದಿಲ್ಲ, ಬಿಜೆಪಿ ಪಕ್ಷದ ಅಂಗ ಸಂಸ್ಥೆಗಳಂತೆ ಕಾರ್ಯನಿರ್ವಹಿಸುತ್ತಿವೆ ಎಂಬುದಕ್ಕೆ ಕಳೆದ ಹತ್ತು ವರ್ಷಗಳಲ್ಲಿ ವಿರೋಧ ಪಕ್ಷಗಳ ನಾಯಕರ ಮೇಲೆ ನಡೆದ ಇಡಿ (ಜಾರಿ ನಿರ್ದೇಶನಾಲಯ) ದಾಳಿಯೇ ಸಾಕ್ಷಿಯಾಗಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತೀವ್ರವಾಗಿ ಟೀಕಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಕೇಂದ್ರದಲ್ಲಿನ ಬಿಜೆಪಿ ಸರ್ಕಾರ ಸ್ವಾರ್ಥ ರಾಜಕೀಯದ ಮೇರೆ ಮೀರಿದೆ, ವಿರೋಧ ಪಕ್ಷಗಳು ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಸೆಣಸಬೇಕಿರುವುದು ಮಾತ್ರವಲ್ಲ ಆದಾಯ ತೆರಿಗೆ (ಐಟಿ), ಕೇಂದ್ರ ತನಿಖಾ ದಳ (ಸಿಬಿಐ) ಮತ್ತು ಜಾರಿ ನಿರ್ದೇಶನಾಲಯ (ಇಡಿ) ಸಂಸ್ಥೆಗಳ ವಿರುದ್ಧವೂ ಹೋರಾಡಬೇಕಾದ ಅನಿವಾರ್ಯತೆ ಎದುರಾಗಿದೆ ಎಂದಿದ್ದಾರೆ.

ಕೇಂದ್ರದ ಬಿಜೆಪಿ ಆಡಳಿತದಲ್ಲಿ ದೇಶದ ಸಂವಿಧಾನ, ಪ್ರಜಾಪ್ರಭುತ್ವ ಅವಸಾನದ ಹಾದಿಗೆ ಸರಿಯುತ್ತಿದೆ ಎಂದು ಅವರು ಕಟುವಾಗಿ ಟೀಕಿಸಿದ್ದಾರೆ.

ಪಾಲಿಕೆ ಪೌರಕಾರ್ಮಿಕರ ಖಾಯಂಮಾತಿಗೆ ಸಿಎಂ ಭರವಸೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ನಾರಾಯಣ್ ಮಾತನಾಡಿದರು.

ಮೈಸೂರು, ಫೆ.2(ಜಿಎ)–ಮಹಾನಗರ ಪಾಲಿಕೆಗಳ ಪೌರಕಾರ್ಮಿಕರ ಖಾಯಂ ಮಾತಿಗೆ ಬರುವ ಬಜೆಟ್‌ನಲ್ಲಿ ಕ್ರಮ ವಹಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ ಎಂದು ರಾಜ್ಯ, ನಗರ ಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾ ಸಂಘದ ರಾಜ್ಯಾಧ್ಯಕ್ಷ ನಾರಾಯಣ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ 10 ಮಹಾನಗರ ಪಾಲಿಕೆಯಲ್ಲಿ 26,200 ಜನ ಪೌರಕಾರ್ಮಿಕರು ಖಾಯಂ ಆಗದೆ ಗುತ್ತಿಗೆದಾರರ ಕಪಿಮುಷ್ಠಿಯಲ್ಲಿ ದುಡಿಯುತ್ತಿದ್ದು, ಲೋಡರ್ಸ್, ಕ್ಲೀನರ್ಸ್, ಚಾಲಕರನ್ನೂ ಸೇರಿದಂತೆ ನೇಮಕಾತಿ ಮಾಡಬೇಕು ಎಂದು ಮುಖ್ಯಮಂತ್ರಿಗಳ ಬಳಿ ಮನವಿ ಮಾಡಿದ್ದು, ಅದರಂತೆ ಈಗಾಗಲೇ, ಪಾಲಿಕೆಗಳ 544 ಜನ ಒಳಚರಂಡಿ ಸಹಾಯಕರು, 481 ಲೋಡರ್ಸ್ ಮತ್ತು 294 ಕ್ಲೀನರ್ಸ್‌ಗಳ ಖಾಯಂ ಮಾತಿಗೆ ಮುಖ್ಯಮಂತ್ರಿ ಸಹಿ ಹಾಕಿದ್ದು, ಶೀಘ್ರವೇ ಆದೇಶ ಹೊರಬೀಳಲಿದೆ. ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ನೇಮಕಾತಿ ಮಾಡುವ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಪಳನಿ, ರಾಜ್ಯ ಉಪಾಧ್ಯಕ್ಷ ಆರ್.ಶಿವ ಜಿಲ್ಲಾಧ್ಯಕ್ಷ ಎಸ್.ನಾಗರಾಜ, ಉಸ್ತುವಾರಿ ಅಧ್ಯಕ್ಷ ರಾಜು, ಮಹಾಪ್ರಧಾನ ಕಾರ್ಯದರ್ಶಿ ಎಂ.ಕೆ.ಮಹಾದೇವ ಉಪಸ್ಥಿತರಿದ್ದರು.

ಪ್ರಾಯೋಗಿಕ ಕಾರ್ಯಾಗಾರ 'ಸಶಕ್ತಿಗೆ' ಅರ್ಜಿ ಆಹ್ವಾನ

ಮೈಸೂರು, ಫೆ. 2– ಮೈಸೂರಿನ ಕ್ಯಾಟಲಿಸ್ಟ್ ಫಾರ್ ವುಮೆನ್ ಎಂಟರ್‌ಪ್ರಿನರ್‌ಶಿಪ್ ಸಂಸ್ಥೆಯು ಉದ್ಯಮ ಆರಂಭಿಸಲು ಬಯಸುವ ಮಹಿಳೆಯರಿಗಾಗಿ ಮೈಸೂರಿನಲ್ಲಿ ಫೆ.22 ಮತ್ತು 23ರಂದು ಪ್ರಾಯೋಗಿಕ ಕಾರ್ಯಾಗಾರ 'ಸಶಕ್ತಿಗೆ' ಅರ್ಜಿ ಆಹ್ವಾನಿಸಿದೆ.

ಕಾರ್ಯಾಗಾರದಲ್ಲಿ ಆಯ್ಕೆಯಾದ ಮಹಿಳಾ ಉದ್ಯಮಿಗಳಿಗೆ ಕಂಪನಿ ರಚನೆಯ ಮೂಲ ಅಂಶಗಳು ಮತ್ತು ಹಣಕಾಸು ನಿರ್ವಹಣೆ, ಲೆಕ್ಕಪತ್ರ ನಿರ್ವಹಣೆ, ಮಾರ್ಕೆಟಿಂಗ್, ಬ್ರ್ಯಾಂಡಿಂಗ್, ವ್ಯಾಪಾರ ಯೋಜನೆ ಅಭಿವೃದ್ಧಿ, ಪಿಚ್ಡೆಕ್ ತಯಾರಿಕೆಯಂತಹ ಅಗತ್ಯ ವ್ಯವಹಾರ ಕೌಶಲ್ಯಗಳ ಕುರಿತು ಸಿಡಬ್ಲ್ಯುಇ ತರಬೇತಿ ನೀಡಲಾಗುತ್ತದೆ. ಆಯ್ಕೆಯಾದವರಿಗೆ ಉದ್ಯಮ ತಜ್ಞರು ಮತ್ತು ಯಶಸ್ವಿ ಮಹಿಳಾ ಉದ್ಯಮಿಗಳಿಂದ ಮಾರ್ಗದರ್ಶನ ನೀಡಲಾಗುವುದು. ಮಹಿಳಾ ಉದ್ಯಮಶೀಲತೆಯನ್ನು ಉತ್ತೇಜಿಸಲು ಶ್ರಮಿಸುತ್ತಿದೆ. ಮಹಿಳೆಯರು ತಮ್ಮ ವ್ಯವಹಾರಗಳನ್ನು ಪ್ರಾರಂಭಿಸಲು ಮತ್ತು ಅವುಗಳನ್ನು ಯಶಸ್ವಿಯಾಗಿ ನಡೆಸಲು ಅನುವು ಮಾಡಿಕೊಡುವ ವೇದಿಕೆಯಾಗಿದೆ. ಪ್ರಸ್ತುತ 4500 ಮಹಿಳಾ ಉದ್ಯಮಿಗಳಿಗೆ ಆನ್ಲೈನ್ ಮತ್ತು ಆಫ್ಲೈನ್ ಬೆಂಬಲ, ವ್ಯಾಪಾರ ಕೌಶಲ್ಯ ತರಬೇತಿ, ಹಣಕಾಸು ಪ್ರವೇಶ, ಹೊಸ ಮಾರುಕಟ್ಟೆಗಳು ಮತ್ತು ತಂತ್ರಜ್ಞಾನವನ್ನು ಸಕ್ರಿಯಗೊಳಿಸುವ ತರಬೇತಿ ನೀಡಲಾಗುತ್ತಿದೆ. ಆಸಕ್ತ ಮಹಿಳೆಯರು ಕಾರ್ಯಾಗಾರದಲ್ಲಿ ಭಾಗವಹಿಸಲು meenakshi@cwe.org.in/8088061845 ಸಂಪರ್ಕಿಸಬಹುದು. ಅರ್ಜಿ ಸಲ್ಲಿಸಲು ಫೆ. 16 ಕೊನೆಯ ದಿನವಾಗಿದೆ.

ಅವೈಜ್ಞಾನಿಕ ರೋಡ್ ಹಂಪ್ಸ್ ನಿರ್ಮಿಸಿದ ಅಧಿಕಾರಿಗಳ ವಿರುದ್ಧ ಕೊಲೆ ಪ್ರಕರಣ ದಾಖಲಿಸಿ

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಆಗ್ರಹ



ಎಂ.ಲಕ್ಷ್ಮಣ

ಮೈಸೂರು, ಫೆ.2(ಬಿಎಲ್‌ಯು)– ಮೈಸೂರಿನ ಬೋಗಾದಿ ರಸ್ತೆಯ ಕುಕ್ಕರಹಳ್ಳಿ ಕೆರೆ ಜಂಕ್ಷನ್‌ನಿಂದ ಆಯಿಷ್ ಜಂಕ್ಷನ್ ನಡುವೆ ಅವೈಜ್ಞಾನಿಕ ರೋಡ್ ಹಂಪ್ಸ್ ನಿರ್ಮಿಸಿ ಮೂವರು ಅಮಾಯಕರ ಸಾವಿಗೆ ಕಾರಣರಾದ ಅಧಿಕಾರಿಗಳ ವಿರುದ್ಧ ಕೊಲೆ ಪ್ರಕರಣ ದಾಖಲಿಸಬೇಕು ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಆಗ್ರಹಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅವೈಜ್ಞಾನಿಕ ರೋಡ್ ಹಂಪ್ಸ್ ನಿರ್ಮಾಣ ಮಾಡಿದ ಸ್ಥಳದಲ್ಲಿ ಸೂಚನಾ ಫಲಕ ಸೇರಿದಂತೆ ಯಾವುದೇ ಸುರಕ್ಷತಾ ಕ್ರಮ ಕೈಗೊಳ್ಳಲ್ಲಿಲ್ಲ ಇದರಿಂದ ಮೂವರು ಅಮಾಯಕರು ಸಾವನ್ನಪ್ಪಿದ್ದು, ಇದಕ್ಕೆ ಯಾರು ಹೊಣೆ? ಎಂದು ಪ್ರಶ್ನಿಸಿದರು.

ಇಂತಹ ಘಟನೆ ಮತ್ತೆ ಮರುಕಳಿಸದಂತೆ ಎಚ್ಚರಿಕೆ ಸಂದೇಶ ರವಾನಿಸಲು ಅವೈಜ್ಞಾನಿಕ ರೋಡ್ ಹಂಪ್ಸ್ ನಿರ್ಮಾಣ ಮಾಡಿದ ಅಧಿಕಾರಿಗಳ ವಿರುದ್ಧ ಕೊಲೆ ಪ್ರಕರಣ ದಾಖಲಿಸಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಮುಂದಿನ ದಿನಗಳಲ್ಲಿ ನಗರದ ಯಾವುದೇ ಭಾಗದಲ್ಲೂ ಇಂತಹ ಅನಾಹುತ ಸಂಭವಿಸದಂತೆ ಎಚ್ಚರಿಕೆ ವಹಿಸಬೇಕು. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಡಾ.ರಾಜೇಂದ್ರ ಗಮನ ಹರಿಸಬೇಕು ಎಂದು ಲಕ್ಷ್ಮಣ ಮನವಿ ಮಾಡಿದರು.

ಕೇಸರಿ ಪಕ್ಷದ ವಿದಾಯಕ ಬಜೆಟ್: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮ್ ನಿನ್ನೆ ಮಂಡಿಸಿರುವ ಬಜೆಟ್ ಕೇಸರಿಕರಣ ಪಕ್ಷದ ವಿದಾಯಕ ಆಯವ್ಯಯ ಎಂದು ಇದೇ ವೇಳೆ ಲಕ್ಷ್ಮಣ ಲೇವಡಿ ಮಾಡಿದರು.

ಯಾವ ಯೋಜನೆಗೆ ಎಷ್ಟು ಹಣ ಮೀಸಲಿಡಬೇಕು ಎಂಬುದು ಆಯವ್ಯಯದ ಮೂಲ ಪರಿಕಲ್ಪನೆ. ಆದರೆ ಯಾವ ಯೋಜನೆಗೂ ಹಣ ಮೀಸಲಿಟ್ಟಿಲ್ಲ ಎಂದು ಟೀಕಿಸಿದರು.

ಬರೀ ರೈಲ್ವೆ ಬಜೆಟ್ ಮಂಡಿಸಲು ಕನಿಷ್ಠ ಮೂರು ಗಂಟೆಗಳ ಕಾಲಾವಕಾಶ ಬೇಕು. ಆದರೆ ನಿರ್ಮಲಾ ಸೀತಾರಾಮ್ ಕೇವಲ 59 ನಿಮಿಷದಲ್ಲಿ ಬಜೆಟ್ ಮಂಡಿಸಿ ಕೈ ತೊಳೆದುಕೊಂಡರು. ನಿರುದ್ಯೋಗ ಹಾಗೂ ರೈತರ ಸಮಸ್ಯೆ ನಿವಾರಣೆ, ಶಿಕ್ಷಣ ಸೇರಿದಂತೆ ಯಾವುದೇ ವಿಚಾರಗಳ ಬಗ್ಗೆಯೂ ಪ್ರಸ್ತಾಪವನ್ನೆ ಮಾಡಿಲ್ಲ ಎಂದು ಹೇಳಿದರು. ದೇಶದ 25 ಕೋಟಿ ಜನರ ಬಡತನ ಮುಕ್ತ ಮಾಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದಾರೆ. ಆದರೆ ದೇಶದ ಪ್ರಜ್ಞಾವಂತ ಜನರು ತಮ್ಮ ಸುಳ್ಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ ಎಂಬ ಅರಿವು ಅವರಿಗಿಲ್ಲ ಎಂದರು.

ಸಾಲ ಮಾಡಿ ತುಪ್ಪ ತಿನ್ನು ಎಂಬಂತೆ 2014 ರಲ್ಲಿ 53 ಲಕ್ಷ ಕೋಟಿ ಹಾಗೂ 2024 ರಲ್ಲಿ 195 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ಈ ಅಂಕಿ ಅಂಶಗಳನ್ನು ಕೇಂದ್ರ ಸರ್ಕಾರವೇ ನೀಡಿದೆ. ಈ ಮೂಲಕ ದೇಶದ ಮೇಲೆ ಸಾಲದ ಹೊರೆ ಹೊರಿಸಿದ್ದಾರೆ ಎಂದು ಲಕ್ಷ್ಮಣ ಆಪಾದಿಸಿದರು. ದೇಶದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ದಿನದಿಂದ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆ ಶೇಕಡ 25ರಷ್ಟು ಹೆಚ್ಚಾಗಿದೆ. ದೇಶದ 16 ರಾಜ್ಯಗಳಲ್ಲಿ ಬರಗಾಲವಿದೆ. ಆದರೆ ಇದಕ್ಕೆಲ್ಲಾ ಪರಿಹಾರ ಸೂಚಿಸುವ ನಿಟ್ಟಿನಲ್ಲಿ ನಿರ್ಮಲಾ ಸೀತಾರಾಮ್ ಮಂಡಿಸಿದ ಬಜೆಟ್‌ನಲ್ಲಿ ಪ್ರಸ್ತಾಪವೇ ಇಲ್ಲ ಎಂದು ಹೇಳಿದರು.

ಕೇಂದ್ರದಲ್ಲಿ ಡಾ.ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರ ಅಸ್ತಿತ್ವದಲ್ಲಿದ್ದಾಗ ಶೇಕಡ 13.7 ರಷ್ಟು ಜಿಡಿಪಿ ಬೆಳವಣಿಗೆ ಸಾಧಿಸಿತ್ತು. ಆದರೆ ಬಿಜೆಪಿ ಸರ್ಕಾರದ ಅವಧಿಯಲ್ಲಿ 2014 ರಿಂದ ಇಲ್ಲಿವರೆಗೆ ಶೇಕಡ 9.6 ರಷ್ಟು ಮಾತ್ರ ಜಿಡಿಪಿ ಬೆಳವಣಿಗೆಯಾಗಿದೆ ಎಂದು ಅಂಕಿ ಅಂಶಗಳ ವಿವರ ನೀಡಿದರು.

ಇನ್ನು ಕರ್ನಾಟಕದ ಮಹದಾಯಿ, ಮೇಕೆದಾಟು, ಆಲಮಟ್ಟಿ ಅಣೆಕಟ್ಟು ಎತ್ತರ ಸೇರಿದಂತೆ ಯಾವುದೇ ವಿಚಾರಗಳು ಬಜೆಟ್‌ನಲ್ಲಿ ಪ್ರಸ್ತಾಪಿಸಿಲ್ಲ. ಇದರಿಂದ ನಿರ್ಮಲಾ ಸೀತಾರಾಮ್ ಮಂಡಿಸಿದ ಬಜೆಟ್‌ನಿಂದ ಜನ ಸಾಮಾನ್ಯರಿಗೆ ಯಾವುದೇ ಪ್ರಯೋಜನವಾಗುವುದಿಲ್ಲ ಎಂದು ಲಕ್ಷ್ಮಣ ಆರೋಪಿಸಿದರು.

ಅವೈಜ್ಞಾನಿಕ ರೋಡ್ ಹಂಪ್ಸ್‌ನಿಂದ ಮೂವರ ಸಾವು

ಸರ್ಕಾರದಿಂದಲ್ಲ, ತಪ್ಪಿತಸ್ಥ ಅಧಿಕಾರಿಗಳಿಂದಲೇ ಪರಿಹಾರ ಕೊಡಿಸಿ

ಶ್ರದ್ಧಾಂಜಲಿ ಸಭೆಯಲ್ಲಿ ಅನ್ವೇಷಣಾ ಸೇವಾ ಟ್ರಸ್ಟ್ ಆಗ್ರಹ



ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅಮರ್‌ನಾಥ ರಾಜೇ ಅರಸ್ ಮಾತನಾಡಿದರು.

ಮೈಸೂರು, ಫೆ2(ಜಿಎ)– ಅವೈಜ್ಞಾನಿಕ ರೋಡ್ ಹಂಪ್ಸ್‌ನಿಂದ ಮೃತಪಟ್ಟವರ ಕುಟುಂಬಕ್ಕೆ ಸರ್ಕಾರದಿಂದ ಪರಿಹಾರ ನೀಡುವ ಬದಲು ತಪ್ಪಿತಸ್ಥ ಅಧಿಕಾರಿಗಳೇ ಪರಿಹಾರ ನೀಡಬೇಕು ಎಂದು ಅನ್ವೇಷಣ ಸೇವಾ ಟ್ರಸ್ಟ್ ಆಗ್ರಹಿಸಿದೆ.

ಇತ್ತೀಚೆಗೆ ಮೈಸೂರು ಮಹಾನಗರಪಾಲಿಕೆ ವಲಯ ಕಚೇರಿ–4ರ ಅಧಿಕಾರಿಗಳು ಆಯಿಷ್ ಸರ್ಕಲ್‌ನಿಂದ ಕುಕ್ಕರಹಳ್ಳಿ ಕೆರೆ ಜಂಕ್ಷನ್‌ವರೆಗೆ ಬೋಗಾದಿ ರಸ್ತೆಯ 4 ಕಡೆ ರಾತ್ರೋರಾತ್ರಿ ಅವೈಜ್ಞಾನಿಕವಾಗಿ ರಸ್ತೆ ಡುಬ್ಬ ನಿರ್ಮಿಸಿದ್ದರು. ಬಿಳಿ ಪಟ್ಟೆ ಬಳಿದು, ಸೂಚನಾ ಫಲಕವನ್ನಾಗಲೀ ಅಥವಾ ಬ್ಯಾರಿಕೇಡ್‌ಗಳನ್ನು ಹಾಕದೇ ನಿರ್ಲಕ್ಷ್ಯ ವಹಿಸಿದ್ದರಿಂದ ದ್ವಿಚಕ್ರ ವಾಹನ ಸವಾರರು ನಿಯಂತ್ರಣ ತಪ್ಪಿ ಬಿದ್ದು ಮೂವರು ಸಾವನ್ನಪ್ಪಿದ (ಯಶ್ವಂತ್, ಶಿವಮ್, ಕುಮಾರ್)ವರಿಗೆ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ಅನ್ವೇಷಣ ಸೇವಾ ಟ್ರಸ್ಟ್‌ನ ಸಂಸ್ಥಾಪಕ ಕಾರ್ಯದರ್ಶಿ ಅಮರ್‌ನಾಥ ರಾಜೇ ಅರಸ್ ಮಾತನಾಡಿ, ಪಾಲಿಕೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಮೂವರು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಈ ತಪ್ಪಿತಸ್ಥ ಪಾಲಿಕೆ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ, ತಪ್ಪಿತಸ್ಥರಿಂದಲ್ಲೇ ಮೃತರ ಕುಟುಂಬಕ್ಕೆ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಮೃತ ಯುವಕ ಯಶ್ವಂತ್ ಅವರ ತಂದೆ ರಾಜೇಂದ್ರ ಪ್ರಸಾದ್ ಮಾತನಾಡಿ, ಯಶ್ವಂತ್ ಇಡೀ ಕುಟುಂಬವನ್ನು ನೋಡಿಕೊಳ್ಳುತ್ತಿದ್ದ. ಆತನಿಗೆ ಒಂದೂವರೆ ವರ್ಷದ ಮಗು ಸಹಾ ಇದೆ. ಜೊತೆಗೆ ಅತಿ ಕಡಿಮೆ ವಯಸ್ಸಿನ ಪತ್ನಿ ಇದ್ದಾಳೆ. ಯುವಕ ಆ ರೀತಿ ದಾರುಣ ಸಾವನ್ನಪ್ಪಲು ಪಾಲಿಕೆ ಅಧಿಕಾರಿಗಳು ಹಾಕಿದ ಅವೈಜ್ಞಾನಿಕ ರೋಡ್ ಹಂಪ್ ಕಾರಣವಾಗಿದೆ. ಇನ್ನು, ದುರಂತ ನಡೆದ ಬಳಿಕ ಯಾವುದೇ ಅಧಿಕಾರಿಗಳು, ಜನ ಪ್ರತಿನಿಧಿಗಳು ನಮ್ಮನ್ನು ಭೇಟಿ ಮಾಡಿ ಸಂಕಷ್ಟವನ್ನು ಕೇಳಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಪಾಲಿಕೆ ಅಧಿಕಾರಿಗಳಿಗೆ ಕೇವಲ ಅಮಾನತಿನಂತಹ ಶಿಕ್ಷೆ ವಿಧಿಸಿದರೆ ಸಾಲದು. ಯಶ್ವಂತ್ ಸಾವಿನಿಂದ ಆಗಿರುವ ನಷ್ಟವನ್ನು ವೈಯಕ್ತಿಕವಾಗಿ ಅವರೇ ಭರಿಸುವಂತೆ ನೋಡಿಕೊಳ್ಳಬೇಕು. ಜೊತೆಗೆ, ಯಶ್ವಂತ್‌ನ ಪತ್ನಿಗೆ ಉದ್ಯೋಗ ಕೊಡಿಸಬೇಕೆಂದು ಆಗ್ರಹಿಸಿದರು.

ಪತ್ರಕರ್ತ ಕೆ.ದೀಪಕ್ ಮಾತನಾಡಿ, ಮೈಸೂರಿನಲ್ಲಿ ಇತ್ತೀಚೆಗೆ ಪೊಲೀಸ್ ಇಲಾಖೆ ಮತ್ತು ಪಾಲಿಕೆ ನಡುವಿನ ಸಮನ್ವಯತೆ ಕೊರತೆಯಿಂದ ಈ ಘಟನೆಗಳು ಸಂಭವಿಸುತ್ತಿದ್ದು, ಸಂಚಾರಿ ಪೊಲೀಸರು ಕೇವಲ ಹೆಲ್ಮೆಟ್ ಧರಿಸಿಲ್ಲ, ಇನ್ನಿತರ ದಾಖಲೆ ಇಲ್ಲ ಎಂದು ದಂಡ ವಿಧಿಸುವುದರಲ್ಲೇ ಕಾಲ ಕಳೆಯುತ್ತಿದ್ದಾರೆ. ನಗರದಲ್ಲಿ ಸಂಚಾರ ವ್ಯವಸ್ಥೆ ಸುಗಮವಾಗಿರುವಂತೆ ನೋಡಿಕೊಳ್ಳುವತ್ತ, ಅಪಘಾತ ತಡೆಯುವತ್ತ ಗಮನ ಹರಿಸುತ್ತಿಲ್ಲ. ಇದೇ ಕಾರಣದಿಂದಲೇ ಒಂದು ರೋಡ್ ಹಂಪ್‌ನಿಂದ ಮೂವರು ಪ್ರಾಣ ಕಳೆದುಕೊಳ್ಳಬೇಕಾಯಿತು. ಹೀಗಾಗಿ ಈ ರೀತಿಯ ಅವ್ಯವಸ್ಥೆ ವಿರುದ್ಧ ಜನತೆ ಸಹಾ ಧ್ವನಿ ಎತ್ತಬೇಕಿದೆ ಎಂದರು. ಈ ವೇಳೆ ರವಿಶಂಕರ್, ವಿನುತ, ಸುರೇಶ್, ದಿನೇಶ್, ಸೈಯದ್ ಉಪಸ್ಥಿತರಿದ್ದರು.

ಲೋಕಸಭಾ ಚುನಾವಣೆ: ಮಂಡ್ಯದಲ್ಲಿ ಬಿಜೆಪಿ ಅಭ್ಯರ್ಥಿ ಸ್ಪರ್ಧಿಸಲಿ

ಡಾ.ಸಿದ್ದರಾಮಯ್ಯ ಅವರಿಗೆ ಟಿಕೆಟ್ ನೀಡಲು ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಜಿಲ್ಲಾ ಮುಖಂಡರ ಆಗ್ರಹ

ಮಂಡ್ಯ, ಫೆ.2– ಮುಂಬರುವ ಲೋಕಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರವನ್ನು ಮಿತ್ರ ಪಕ್ಷ ಜೆಡಿಎಸ್‌ಗೆ ಬಿಟ್ಟುಕೊಡದೇ ಬಿಜೆಪಿಯು ತನ್ನ ಬಳಿಯೇ ಉಳಿಸಿಕೊಂಡು 2018ರ ಉಪಚುನಾವಣೆಯ ಪರಾಜಿತ ಬಿಜೆಪಿ ಅಭ್ಯರ್ಥಿ ಡಾ.ಸಿದ್ದರಾಮಯ್ಯ ಅವರಿಗೆ ಟಿಕೆಟ್ ನೀಡಬೇಕೆಂದು ಬಿಜೆಪಿ ಜಿಲ್ಲಾ ಮುಖಂಡರು ವರಿಷ್ಠರನ್ನು ಒತ್ತಾಯಿಸಿದ್ದಾರೆ.

ನಗರದ ತಾವರೆಗೆರೆಯ ಕೃಷ್ಣ ರೈಸ್ ಮಿಲ್ ಆವರಣದಲ್ಲಿ ಡಾ.ಸಿದ್ದರಾಮಯ್ಯ ಅಭಿಮಾನಿಗಳು ಮತ್ತು ಬಿಜೆಪಿ ಕಾರ್ಯಕರ್ತರು ಶುಕ್ರವಾರ ಸಭೆ ನಡೆಸುವ ಮೂಲಕ ಜಾ.ದಳ–ಬಿಜೆಪಿ ಮೈತ್ರಿಯಾದರೂ ಬಿಜೆಪಿ ವತಿಯಿಂದಲೇ ಡಾ.ಸಿದ್ದರಾಮಯ್ಯ ಅವರಿಗೆ ಟಿಕೆಟ್ ನೀಡಬೇಕೆಂದು ನಿರ್ಣಯ ಕೈಗೊಂಡರು.

ಬಿಜೆಪಿ ಟಿಕೆಟ್ ಆಕಾಂಕ್ಷಿ ಡಾ.ಸಿದ್ದರಾಮಯ್ಯ ಮಾತನಾಡಿ, 2019ರ ಲೋಕಸಭೆ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ದೊರೆಯುವ ನಿರೀಕ್ಷೆಯಿತ್ತು ಆದರೆ, ಆ ಸಂದರ್ಭದಲ್ಲಿ ರಾಜಕೀಯ ಕಾರಣಗಳಿಂದಾಗಿ ಪಕ್ಷೇತರ ಅಭ್ಯರ್ಥಿ ಸುಮಲತಾ ಅಂಬರೀಶ್ ಅವರಿಗೆ ಬೆಂಬಲ ಘೋಷಿಸಿತ್ತು. ಇದರಿಂದ ಆಗ ಅವಕಾಶ ತಪ್ಪಿದ ಹಿನ್ನೆಲೆಯಲ್ಲಿ 2024ರ ಲೋಕಸಭೆ ಚುನಾವಣೆಯಲ್ಲಾದರೂ ಟಿಕೆಟ್ ನೀಡಬೇಕು. 2018ರ ಲೋಕಸಭೆ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದ ನಾನು 2.50 ಲಕ್ಷ ಮತ ಪಡೆದಿದ್ದು, ಇಂದು ಜಿಲ್ಲೆಯಲ್ಲಿ ಬಿಜೆಪಿಯು ಪ್ರತಿ ಬೂತ್ ಮಟ್ಟದಲ್ಲಿ ಸದೃಢವಾಗಿದೆ. ಆದ್ದರಿಂದ ಬಿಜೆಪಿಗೇ ಜಾ.ದಳದವರು ಬಿಟ್ಟುಕೊಡಬೇಕೆಂದು ಮನವಿ ಮಾಡಿದರು.

ಬಿಜೆಪಿ ಹಿರಿಯ ನಾಯಕ ಚಂದಗಾಲು ಶಿವಣ್ಣ ಮಾತನಾಡಿ, ಲೋಕಸಭಾ ಚುನಾವಣೆ ಸಮೀಪಿಸುತ್ತಿದೆ. ಇಡೀ ದೇಶದಲ್ಲಿ ಬಿಜೆಪಿ ಪರ ಅಲೆ ಇದ್ದು, ಮಂಡ್ಯ ಲೋಕಸಭಾ ಕ್ಷೇತ್ರ ಕೂಡ ಬಿಜೆಪಿ ಅಭ್ಯರ್ಥಿಗೆ ಪೂರಕವಾಗಿದೆ. ಜಿಲ್ಲೆಯಲ್ಲಿ ಬಿಜೆಪಿಯಿಂದ ಸಮರ್ಥ ಅಭ್ಯರ್ಥಿಗಳಿದ್ದು, ಅದರಲ್ಲಿಯೂ ಸಜ್ಜನ ರಾಜಕಾರಣಿಯಾಗಿರುವ ಡಾ.ಸಿದ್ದರಾಮಯ್ಯ ಅವರು 2018 ರ ಲೋಕಸಭಾ ಉಪಚುನಾವಣೆಯಲ್ಲಿ 2 ಲಕ್ಷದ 50 ಸಾವಿರ ಮತ ಪಡೆದಿರುವುದು ಇತಿಹಾಸ. ರಾಜ್ಯ ನಾಯಕರಿಗೆ ಇದನ್ನು ತಿಳಿಸಬೇಕಿದೆ. ಡಾ.ಸಿದ್ದರಾಮಯ್ಯರೇ ಮಂಡ್ಯ ಬಿಜೆಪಿ ಅಭ್ಯರ್ಥಿ ಆಗಬೇಕು, ಅವರು ಗೆದ್ದು ಬರಬೇಕು. ಜಾ.ದಳದ ಜತೆ ಹೊಂದಾಣಿಕೆಗೆ ಬಿಜೆಪಿ ಹೈಕಮಾಂಡ್ ತೀರ್ಮಾನ ಮಾಡಿದೆ. ಆದರೆ ಮತದಾರರ ಆಲೋಚನೆ ಏನಿದೆ ಎಂಬುದನ್ನು ಹೈಕಮಾಂಡ್ ಗ್ರಹಿಸಬೇಕಿದೆ. ಅದನ್ನು ರಾಜ್ಯ ಹಾಗೂ ಕೇಂದ್ರ ನಾಯಕರಿಗೆ ತಿಳಿಸಬೇಕು ಎಂದರು. ಸಭೆಯಲ್ಲಿ ಬಿಜೆಪಿ ಮುಖಂಡರಾದ ಇಂಡುವಾಳು ಸಚ್ಚಿದಾನಂದ, ಎಸ್.ಪಿ.ಸ್ವಾಮಿ, ಅಶೋಕ್ ಜಯರಾಂ, ವಿದ್ಯಾ ನಾಗೇಂದ್ರ, ಯಮದೂರು ಸಿದ್ದರಾಜು, ಎಚ್.ಪಿ.ಮಹೇಶ್, ರೂಪಾ, ಶೀಳನೆರೆ ಅಂಬರೀಶ್ ಇತರರು ಭಾಗವಹಿಸಿದ್ದರು.



ಮಂಡ್ಯದ ತಾವರೆಗೆರೆಯಲ್ಲಿ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯನ್ನು ಉದ್ಘಾಟಿಸುತ್ತಿರುವ ಮುಖಂಡರು.

ಕೆರಗೋಡು ಧ್ವಜಸ್ತಂಭ ತೆರವಿನ ಬಗ್ಗೆ ಯಾವುದೇ ಆದೇಶ ಹೊರಡಿಸಿಲ್ಲ

ಮಂಡ್ಯ ಜಿಲ್ಲಾ ಪಂಚಾಯಿತಿ ಸಿಇಓ ಸ್ಪಷ್ಟನೆ

ಸಾಮಾಜಿಕ ಜಾಲತಾಣಗಳಲ್ಲಿ ಸಮಾಜದ ಸ್ವಾಸ್ಥ ಹಾಳು ಮಾಡುವವರ ವಿರುದ್ಧ ಕ್ರಮದ ಎಚ್ಚರಿಕೆ

ಮಂಡ್ಯ,ಫೆ.2– ಮಂಡ್ಯ ತಾಲೂಕು ಕೆರಗೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆರಗೋಡು ಗ್ರಾಮದ ರಂಗಮಂದಿರದ ಮುಂಭಾಗದಲ್ಲಿ ಧ್ವಜಸ್ತಂಭದ ವಿಚಾರವಾಗಿ ಸಾಮಾಜಿಕ ಜಾಲತಾಣಗಳಲ್ಲಿ ಧ್ವಜಸ್ಥಂಭವನ್ನು ತೆರವುಗೊಳಿಸುವಂತೆ ಆದೇಶವಾಗಿದೆ ಎಂದು ಸುದ್ದಿಗಳು ಹರಡುತ್ತಿದ್ದು, ಧ್ವಜಸ್ಥಂಭವನ್ನು ತೆರವುಗೊಳಿಸುವ ಸಂಬಂಧ ಯಾವುದೇ ಆದೇಶ ಮಾಡಿಲ್ಲ ಎಂದು ಜಿಪಂ ಸಿಇಓ ಶೇಖ್ ತನ್ವೀರ್ ಆಸಿಫ್ ಪತ್ರಿಕಾ ಪ್ರಕಟಣೆಯಲ್ಲಿ ಸ್ಪಷ್ಟ ಪಡಿಸಿದ್ದಾರೆ.

ಇದಲ್ಲದೇ ಡಿಸಿ ಕುಮಾರ್ ಹಾಗೂ ಎಸ್ಪಿ ಎನ್.ಯತೀಶ್ ಸಹ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ಮಂಡ್ಯ ಜಿಲ್ಲೆಯ ಕೆರಗೋಡು ಗ್ರಾಮದಲ್ಲಿ ಇತ್ತೀಚಿಗೆ ನಡೆದ ಧ್ವಜ ಸ್ತಂಭದ ವಿಚಾರವು ಸೂಕ್ಷ್ಮ ವಿಚಾರವಾಗಿದ್ದು, ಸಮಾಜದ ಸ್ವಾಸ್ಥ್ಯಕ್ಕೆ ಭಂಗ ತರುವ ಸಾಮಾಜಿಕ ಜಾಲತಾಣದ ಪೋಸ್ಟ್‌ಗಳ ಮೇಲೆ ಜಿಲ್ಲಾಡಳಿತ ತೀವ್ರತರ ನಿಗಾ ವಹಿಸಿದೆ ಎಂದು ಪ್ರಕಟಣೆ ನೀಡಿದ್ದಾರೆ.

ಸಾಮಾಜಿಕ ಜಾಲತಾಣಗಳಾದ ಟ್ವಿಟ್ಟರ್, ಫೇಸ್‌ಬುಕ್, ವಾಟ್ಸಾಪ್, ಇನ್ಸ್ಟಾಗ್ರಾಮ್, ಯೂಟ್ಯೂಬ್ ಸೇರಿದಂತೆ ಇತ್ಯಾದಿಗಳಲ್ಲಿ ಸಮಾಜಕ್ಕೆ ಸ್ವಾಸ್ಥ್ಯಕ್ಕೆ ಭಂಗ ತರುವ ಚಿತ್ರಗಳು, ವಿಡಿಯೋಗಳು, ಪ್ರಚೋದನಾಕಾರಿ ಹೇಳಿಕೆಗಳು, ಪೋಸ್ಟರ್‌ಗಳು ಹಾಗೂ ಉದ್ರೇಕಕಾರಿ ಭಾಷಣಗಳನ್ನು ಮಾಡಿ ಅವುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಕಳುಹಿಸುವವರ ಹಾಗೂ ಇದಕ್ಕೆ ಪ್ರಚೋದನೆ ನೀಡುವಂತವರ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು. ಉಭಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಪ್ರಚೋದನಕಾರಿ ವ್ಯಕ್ತಿಗಳ ಪ್ರವೇಶ ನಿರ್ಬಂಧಕ್ಕೆ ಮನವಿ: ಕೆರಗೋಡು ಹನುಮಧ್ವಜ ವಿವಾದದ ಹಿನ್ನೆಲೆಯಲ್ಲಿ ಕೋಮು ಪ್ರಚೋದನೆಗೆ ಕೆಲ ಸಂಘಟನೆಗಳು ಮುಂದಾಗುತ್ತಿದ್ದು, ಹಾಗಾಗಿ ಪ್ರಚೋದನಕಾರಿ ಭಾಷಣಕ್ಕೆ ಹೆಸರಾಗಿರುವ ಕಲ್ಲಡ್ಕ ಪ್ರಭಾಕರ್ ಭಟ್, ಪ್ರಮೋದ್ ಮುತಾಲಿಕ್ ಹಾಗೂ ಚಕ್ರವರ್ತಿ ಸೂಲಿಬೆಲೆ ಜಿಲ್ಲೆಗೆ ಪ್ರವೇಶಿಸಿದಂತೆ ನಿರ್ಬಂಧಿಸಬೇಕು ಎಂದು ಪ್ರಗತಿಪರರು ಸಚಿವ ಎನ್.ಚಲುವರಾಯಸ್ವಾಮಿ ಅವರಿಗೆ ಮನವಿ ಮಾಡಿದ್ದಾರೆ.



ಮಂಡ್ಯ ಜಿಲ್ಲೆಯ ನಿಗಮ ಮಂಡಳಿ ಆಕಾಂಕ್ಷಿತ ಕಾಂಗ್ರೆಸ್ ಮುಖಂಡರ ಮನೆಗಳಿಗೆ ಶಾಸಕ ಗಣಿಗ ರವಿಕುಮಾರ್ ಭೇಟಿ ನೀಡಿ, ಮಾತುಕತೆ ನಡೆಸಿದರು. ಮಂಡ್ಯದ ಗಾಂಧಿ ನಗರದಲ್ಲಿರುವ ಹಿರಿಯ ಕಾಂಗ್ರೆಸ್ ಮುಖಂಡ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಸಾದುಲ್ಲಾಖಾನ್ ನಿವಾಸಕ್ಕೆ ಭೇಟಿ ನೀಡಿ, ಅವರ ನಿವಾಸದಲ್ಲೇ ಅನೇಕ ಕಾಂಗ್ರೆಸ್ ಮುಖಂಡರುಗಳನ್ನು ಕರೆದು ಮಾತುಕತೆ ನಡೆಸಿದರು. ಶೀಘ್ರದಲ್ಲೇ ಕಾರ್ಯಕರ್ತರಿಗೂ ನಿಗಮ ಮಂಡಳಿ ಹಂಚಿಕೆಯಾಗುವುದರಿಂದ ಇನ್ನಿತರೆ ಆಕಾಂಕ್ಷಿತರೊಂದಿಗೂ ಸ್ಥಳದಲ್ಲೇ ದೂರವಾಣಿ ಮೂಲಕ ಮಾತುಕತೆ ನಡೆಸಿದರು.

ಕಬ್ಬಿನ ಗದ್ದೆಗೆ ಬೆಂಕಿ: ಅಪಾರ ಹಾನಿ

ಕಿಕ್ಕೇರಿ, ಫೆ2– ಹೋಬಳಿಯ ಬಸವನಹಳ್ಳಿ ಗ್ರಾಮದಲ್ಲಿ ರೈತ ಮಹಿಳೆಯೋರ್ವರು ಬೆಳೆದಿದ್ದ ಕಬ್ಬಿನಗದ್ದೆಗೆ ಬೆಂಕಿ ಬಿದ್ದು ಭಾರೀ ಹಾನಿಯಾಗಿದೆ. ನಷ್ಟವಾದ ಕಬ್ಬು ರೈತ ಮಹಿಳೆ ರೇಣುಕಾ ದೇವರಾಜು ಅವರಿಗೆ ಸೇರಿದಾಗಿದೆ ಆಕಸ್ಮಿಕ ಬೆಂಕಿ ಘಟನೆಗೆ ಕಾರಣ ಎನ್ನಲಾಗಿದೆ. 6 ಎಕರೆ ಕೃಷಿ ಭೂಮಿಯಲ್ಲಿ 4 ಎಕರೆಗೆ ಕಬ್ಬು ಹಾಕಿದ್ದರು. ಹನಿ ನೀರಾವರಿ ಮೂಲಕ ಕಬ್ಬಿಗೆ ನೀರು ಹಾಯಿಸಿ ಉತ್ತಮವಾಗಿ ಬೆಳೆಯುತ್ತಿದ್ದರು. ಕಬ್ಬಿಗೆ 8 ತಿಂಗಳು ಆಗಿದ್ದು, ಕೆಲವು ದಿನಗಳಲ್ಲಿ ಕಬ್ಬುಕಟಾವು ಮಾಡಲು ಸಜ್ಜಾಗಿದ್ದರು.

ಶುಕ್ರವಾರ ಮಧ್ಯಾಹ್ನ ಬೆಂಕಿ ಕಬ್ಬಿನ ಗರಿಗೆ ತಗುಲಿ ಹೊತ್ತಿ ಉರಿದಿದೆ. ಕಬ್ಬಿನ ಗದ್ದೆಯಲ್ಲಿ ಬೆಂಕಿ ಹೊತ್ತಿಕೊಂಡು ದಟ್ಟ ಹೊಗೆ ಬರುತ್ತಿರುವುದನ್ನು ಅಕ್ಕಪಕ್ಕದವರು ಕಂಡಿದ್ದಾರೆ. ಬಿರು ಬಿಸಿಲಿನಿಂದ ಬೆಂಕಿ ನುದಿಸಲು ಪರದಾಡಿದ್ದಾರೆ.

ವಿಷಯ ತಿಳಿದು ತಾಲೂಕು ಅಗ್ನಿಶಾಮಕ ದಳದವರು ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸಲು ಯಶಸ್ವಿಯಾದರು. ಸುಮಾರು 3 ಎಕರೆಯಷ್ಟು ಕಬ್ಬು ನಾಶವಾಗಿದೆ. ಜೊತೆಗೆ ಹನಿ ನೀರಾವರಿ ಪೈಪು ಹಾಳಾಗಿದೆ. ಪ್ರಕರಣ ಕಿಕ್ಕೇರಿ ಆರಕ್ಷಕ ಠಾಣೆಯಲ್ಲಿ ದಾಖಲಾಗಿದೆ. ಕಾರ್ಯಾಚರಣೆಯಲ್ಲಿ ಠಾಣಾಧಿಕಾರಿ ಶಿವಣ್ಣ, ಸಿಬ್ಬಂದಿಗಳಾದ ದಿನೇಶ್, ಸಚಿನ್, ಯಮನಪ್ಪ, ಪಾಟೀಲ್ ಭಾಗವಹಿಸಿದ್ದರು.

ಜೂ.7ರಿಂದ ಮಂಡ್ಯದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ



ಚಲುವರಾಯಸ್ವಾಮಿ

ಮಂಡ್ಯ: ಮಂಡ್ಯದಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಜೂನ್ 7 ರಿಂದ 9ರವರೆಗೆ 3 ದಿನಗಳ ಕಾಲ ನಡೆಸಲಾಗುವುದು ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಶುಕ್ರವಾರ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸಂಬಂಧ ಪೂರ್ವಭಾವಿ ಸಭೆ ನಡೆಸಿ ಮಾತನಾಡಿದ ಅವರು, ಮಂಡ್ಯ ಜಿಲ್ಲೆಯಲ್ಲಿ ಈ ಹಿಂದೆ 1974ರಲ್ಲಿ ಮೊದಲನೇ ಬಾರಿಗೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಿತ್ತು. ಎರಡನೇ ಬಾರಿಗೆ 1994ರಲ್ಲಿ ನಡೆದಿದೆ. ಈ ಐತಿಹಾಸಿಕ ಸಮ್ಮೇಳನವನ್ನು ನಡೆಸಿದ್ದರಿಂದ ಜಿಲ್ಲೆಯಲ್ಲಿ 3ನೇ ಬಾರಿಗೆ 30 ವರ್ಷಗಳ ನಂತರ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ಅವಕಾಶ ಸಿಕ್ಕಿರುವುದು ಮಂಡ್ಯ ಜಿಲ್ಲೆಯ ಸೌಭಾಗ್ಯವಾಗಿದೆ ಎಂದರು.

ಸಮ್ಮೇಳನ ಯಶಸ್ವಿಯಾಗಿ ನಡೆಸಲು ಜಿಲ್ಲೆಯ ಹಿರಿಯ ಸಾಹಿತಿಗಳು ಕನ್ನಡ ಅಭಿಮಾನಿಗಳು ಸಾಹಿತ್ಯ ಪ್ರೇಮಿಗಳು, ಜನಪ್ರತಿನಿಧಿಗಳು, ಹಿರಿಯ ಸಾಹಿತ್ಯಾಸಕ್ತರ ಪಾಲ್ಗೊಳ್ಳುವಿಕೆ ಅಮೂಲ್ಯವಾಗಿದೆ. ಈ ನಿಟ್ಟಿನಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಪರಿಷತ್ತು, ಕೇಂದ್ರ ಸಾಹಿತ್ಯ ಪರಿಷತ್ತಿನ ಸಲಹೆಗಳೊಂದಿಗೆ ಸಮ್ಮೇಳನವನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರನ್ನೂ ಒಳಗೊಂಡಂತೆ 25 ಸಮಿತಿಗಳನ್ನು ರಚಿಸಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ಸಮ್ಮೇಳನದಲ್ಲಿ ಸ್ವಾಗತ ಸಮಿತಿ, ಸಮನ್ವಯ ಸಮಿತಿ, ಹಣಕಾಸು ಮತ್ತು ಲೆಕ್ಕ ಪರಿಶೋಧನಾ ಸಮಿತಿ, ವೇದಿಕೆ ಸಮಿತಿ, ಆಹಾರ ಮತ್ತು ಮೆರವಣಿಗೆ, ವಸತಿ, ಆರೋಗ್ಯ ಮತ್ತು ನೈರ್ಮಲ್ಯ, ಸಾಂಸ್ಕೃತಿಕ ಸಾರಿಗೆ, ನಗರ ಅಲಂಕಾರ ವಿದ್ಯುತ್, ಪುಸ್ತಕ ಬಿಡುಗಡೆ, ಪ್ರಚಾರ, ಆಮಂತ್ರಣ, ಸ್ಮರಣಿಕೆ, ಮಾಧ್ಯಮ ಮತ್ತು ಶಿಷ್ಟಾಚಾರ ಸೇರಿದಂತೆ 25 ಸಮಿತಿಗಳನ್ನು ರಚಿಸಲಾಗುವುದು. ಸಮ್ಮೇಳನದಲ್ಲಿ ಕವಿಗೋಷ್ಠಿ, ಉಪನ್ಯಾಸ, ಪುಸ್ತಕ ಮಳಿಗೆ ಆಯೋಜಿಸಲು ಹಾಗೂ ಪ್ರತಿನಿತ್ಯ ಸಮ್ಮೇಳನ ಸುಮಾರು 3 ರಿಂದ 4 ಲಕ್ಷ ಜನ ಸೇರುವ ನಿರೀಕ್ಷೆ ಇದ್ದು, ವಸತಿ ಹಾಗೂ ಊಟದ ವ್ಯವಸ್ಥೆಗೆ ಯೋಜಿಸಲಾಗಿದೆ ಎಂದರು. ಸಭೆಯಲ್ಲಿ ಶಾಸಕ ಪಿ.ರವಿಕುಮಾರ್, ಡಿಸಿ ಡಾ.ಕುಮಾರ್, ಜಿಪಂ ಸಿಇಓ ಶೇಖ್ ತನ್ವೀರ್ ಆಸಿಫ್, ಎಸ್ಪಿ ಎನ್.ಯತೀಶ್ ಸೇರಿದಂತೆ ಇನ್ನಿತರು ಹಾಜರಿದ್ದರು.

ಫೆ.7, ಗ್ಯಾರಂಟಿ ಯೋಜನೆಗಳ ಸಮಾವೇಶ

ಪಾಂಡವಪುರ: ಫೆ.7ರಂದು ಪಟ್ಟಣದಲ್ಲಿ ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳ ಸಮಾವೇಶ ನಡೆಸುವ ಸಂಬಂಧ ಪಟ್ಟಣದ ತಾಪಂ ಸಭಾಂಗಣದಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಅಪರ ಜಿಲ್ಲಾಧಿಕಾರಿ ಡಾ.ಎಚ್.ಎಲ್.ನಾಗರಾಜು ಅವರು ಅಧಿಕಾರಿಗಳ ಸಭೆ ನಡೆಸಿದರು. ಅಪರ ಜಿಲ್ಲಾಧಿಕಾರಿ ಡಾ.ಎಚ್.ಎಲ್.ನಾಗರಾಜು ಮಾತನಾಡಿ, ರಾಜ್ಯ ಸರಕಾರ ಐದು ಗ್ಯಾರಂಟಿ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನಗೊಳಿಸಿ, ಯೋಜನೆಗಳಿಗೆ ಜನರು, ಫಲಾನುಭವಿಗಳಿಗೆ ಯಾವ ರೀತಿ ಅನುಕೂಲವಾಗಿದೆ ಎನ್ನುವ ಬಗ್ಗೆ ಮಾಹಿತಿ ಪಡೆಯುವುದು, ಜತೆಗೆ ಫಲಾನುಭವಿಗಳೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವರು ಸಂವಾದ ನಡೆಸಲಿದ್ದಾರೆ ಎಂದರು.

ಪ್ರಶಸ್ತಿ ಆಯ್ಕೆ ಸಮಿತಿಗೆ ಮಳವಳ್ಳಿ ಸಾಯಿಕೃಷ್ಣ ಆಯ್ಕೆ

ಮಂಡ್ಯ: ರಾಜ್ಯ ಸರ್ಕಾರವು 2019ನೇ ಸಾಲಿನ ಚಲನಚಿತ್ರ ರಾಜ್ಯ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯರಾಗಿ ಖ್ಯಾತ ಸಂಭಾಷಣೆಗಾರ ಹಾಗೂ ನಟ ಮಳವಳ್ಳಿ ಸಾಯಿಕೃಷ್ಣ ಅವರನ್ನು ಆಯ್ಕೆ ಮಾಡಿದೆ. ಅಧ್ಯಕ್ಷರಾಗಿ ನಿರ್ದೇಶಕರಾದ ನಂಜುಂಡೇಗೌಡ ಒಳಗೊಂಡಿದ್ದು, ಉಳಿದಂತೆ ರಾಮನಾಥ್ ಋಗ್ವೇದಿ, ಬಸವರಾಜ ಅರಸು, ತುಂಗಾ ರೇಣುಕಾ, ಪೂಜಾ ಗಾಂಧಿ, ಶ್ರೀಧರ್ ಸಂಭ್ರಮ್ ಸದಸ್ಯರಾಗಿದ್ದಾರೆ.



ಸಾಯಿಕೃಷ್ಣ ಅವರು ಮಳವಳ್ಳಿಯ ಗ್ರಾಮಾಂತರ ಪ್ರದೇಶದಿಂದ ಸ್ಯಾಂಡಲ್‌ವುಡ್ ಪ್ರವೇಶಿಸಿ, ಬರವಣಿಗೆ ಮೂಲಕ ಜನಮಾನಸಕ್ಕೆ ಪರಿಚಿತರಾದವರು. ಮಳವಳ್ಳಿಯ ಸಂಭಾಷಣೆಯ ಶೈಲಿಯನ್ನು ಕನ್ನಡ ಚಿತ್ರ ಲೋಕಕ್ಕೆ ಪರಿಚಯಿಸಿದರು.

ಜೋಗಿ ಚಿತ್ರ ಸೇರಿದಂತೆ ನೂರಾರು ಚಿತ್ರಗಳಿಗೆ ಸಂಭಾಷಣೆ ಒದಗಿಸಿ, ಸ್ವತ: ಕಲಾವಿದ, ನಿರ್ದೇಶಕರಾಗಿ ಕನ್ನಡ ಚಿತ್ರರಂಗದಲ್ಲಿ ಮಿನುಗುತ್ತಿದ್ದಾರೆ. ಅಲ್ಲದೇ ಸೆನ್ಸಾರ್ ಮಂಡಳಿಯ ನಿರ್ದೇಶಕರೂ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ತಂಬೂರಿ ಜವರಯ್ಯ ನಿಧನ

ಮಂಡ್ಯ,ಫೆ.2– ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ತಂಬೂರಿ ಜವರಯ್ಯ(80) ಶುಕ್ರವಾರ ತೀವ್ರ ಅನಾರೋಗ್ಯದಿಂದ ವಿಧಿವಶರಾದರು.



ತಂಬೂರಿ ಜವರಯ್ಯ ಅವರು ಮಂಡ್ಯ ಜಿಲ್ಲೆಯ ಬಸರಾಳು ಗ್ರಾಮದವರಾಗಿದ್ದು, ಜಂಬಾಡಿ ದಾಸಯ್ಯ ಮತ್ತು ಗಿರಿಜಮ್ಮನವರ ಮಗನಾಗಿ 1938ರಲ್ಲಿ ಜನಿಸಿದರು. 5ನೇ ತರಗತಿಯವರೆಗೆ ಬಸರಾಳು ಸರ್ಕಾರಿ ಶಾಲೆಯಲ್ಲಿ ಓದಿದ್ದ ಇವರು ಬಡ ಕುಟುಂಬದಲ್ಲಿ ಜನಿಸಿದ್ದರಿಂದ ಉನ್ನತ ಶಿಕ್ಷಣ ಕೈಗೆಟಕಲಿಲ್ಲ.

ತಂಬೂರಿ ಜವರಯ್ಯನವರ ತತ್ವಪದವನ್ನು ಗುರುತಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಿರಿಯ ತತ್ವಪದ ಗಾಯಕರಾಗಿ ಆಯ್ಕೆಮಾಡಿ 2017ರಲ್ಲಿ ರಾಜ್ಯ ಮಟ್ಟದ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು. ವಯೋವೃದ್ಧ ಕಾಯಿಲೆಯಿಂದ ಬಳಲುತ್ತಿದ್ದ ತಂಬೂರಿ ಜವರಯ್ಯ ಅವರು ಫೆಬ್ರವರಿ 2ರ ಬೆಳಿಗ್ಗೆ 6.15ಕ್ಕೆ ಬಸರಾಳು ಗ್ರಾಮದ ತಮ್ಮ ಸ್ವಗೃಹದಲ್ಲಿ ನಿಧನರಾಗಿದ್ದಾರೆ.

ಫೆ.5, ಶ್ರೀಕರಿ ಬಸವೇಶ್ವರಸ್ವಾಮಿ ದೇವಸ್ಥಾನ ಉದ್ಘಾಟನೆ

ತಿ.ನರಸೀಪುರ, ಫೆ.2– ತಾಲೂಕಿನ ತಲಕಾಡು ಗ್ರಾಮದ ಹಳೇ ಬೀದಿಯಲ್ಲಿ ಜೀರ್ಣೋದ್ಧಾರಗೊಂಡಿರುವ ಶ್ರೀಕರಿ ಬಸವೇಶ್ವರಸ್ವಾಮಿ ದೇವಸ್ಥಾನ ಉದ್ಘಾಟನಾ ಕಾರ್ಯಕ್ರಮ ಫೆ.5 ರಂದು ನಡೆಯಲಿದೆ.

ತಲಕಾಡಿನ ಕರಿ ಬಸವೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ದೇವಸ್ಥಾನ ಜೀರ್ಣೋದ್ಧಾರ ಸಮಿತಿ ಕಾರ್ಯದರ್ಶಿ ಶಂಭುದೇವನಪುರ ಎಸ್.ಬಿ.ಸುಗಂಧ ರಾಜು, ಪಂಚಲಿಂಗ ದರ್ಶನ ಖ್ಯಾತಿಯ ಗಜಾರಣ್ಯ ಕ್ಷೇತ್ರ ತಲಕಾಡು ಗ್ರಾಮದ ಹಳೇ ಬೀದಿಯಲ್ಲಿ ಜೀರ್ಣೋದ್ಧಾರಗೊಂಡಿರುವ ಕರಿ ಬಸವೇಶ್ವರ ದೇವಸ್ಥಾನದ ಉದ್ಘಾಟನಾ ಕಾರ್ಯಕ್ರಮ ಫೆ.4 ಮತ್ತು 5 ರಂದು 2 ದಿನಗಳ ಕಾಲ ನಡೆಯಲಿದೆ.

ಫೆ.4ರಂದು ಸಂಜೆ 4 ಗಂಟೆಗೆ ಗೋ ದೇವತೆ, ಗಂಗಾ ಪೂಜೆಯೊಂದಿಗೆ ಅಗ್ರೋದಕ ಸಹಿತ ಯಾಗ ಶಾಲೆ ಪ್ರವೇಶ, ಗಣಪತಿ ಪೂಜೆ, ವಾಸ್ತು ಪೂಜೆ ಹಾಗೂ ನೂತನ ಉತ್ಸವ ಮೂರ್ತಿಗೆ ಜಲಾಧಿವಾಸ, ಧಾನ್ಯಾದಿವಾಸ ಮೂರ್ತಿ ಸಂಸ್ಕಾರ ನಡೆಯಲಿದೆ. ಫೆ5ರಂದು ಕರಿ ಬಸವೇಶ್ವರ ಸ್ವಾಮಿಯ ಶಿಖರ ಕಳಸ ಸ್ಥಾಪನೆ, ನಂತರ ಪ್ರಧಾನ ಕಳಶ ಪೂಜೆ, ನವಗ್ರಹ ಹೋಮ, ಮೂಲ ಮೂರ್ತಿಗೆ ರುದ್ರಾಭಿಷೇಕ, ಮಹಾ ಮಂಗಳಾರತಿ ಕಾರ್ಯಕ್ರಮ ಸೇರಿದಂತೆ ಮತ್ತಿತರ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಸೋಮವಾರ ಬೆಳಗ್ಗೆ 10.30ಕ್ಕೆ ಧಾರ್ಮಿಕ ಸಭೆ ನಡೆಯಲಿದ್ದು, ಕಾರ್ಯಕ್ರಮದ ಸಾನಿಧ್ಯವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ವಹಿಸಲಿದ್ದಾರೆ. ತುಮಕೂರು ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿಗಳ ಸಮ್ಮುಖದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಕನಕಪುರ ದೇಗುಲ ಮಠದ ಡಾ. ಶ್ರೀಮುಮ್ಮಡಿ ನಿರ್ವಾಣಸ್ವಾಮಿ ನೇತೃತ್ವ ವಹಿಸಲಿದ್ದಾರೆ. ಕಾರ್ಯಕ್ರಮವು ತಲಕಾಡು ಹಸ್ತಿಕೇರಿ ಮಠದ ಡಾ.ಸಿದ್ದಮಲ್ಲಿಕಾರ್ಜುನಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಲಿದ್ದು, ಹರಗುರು ಚರಮೂರ್ತಿಗಳು ಆಶೀರ್ವಚನ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್ ಆಗಮಿಸಲಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕು ಎಂದು ಮನವಿ ಮಾಡಿದರು.

ಧಾರ್ಮಿಕ ಕಾರ್ಯಕ್ರಮಕ್ಕೆ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಲಿರುವ ಹಿನ್ನೆಲೆಯಲ್ಲಿ 5 ಸಾವಿರ ಮಂದಿಗೆ ಪ್ರಸಾದ ವ್ಯವಸ್ಥೆ ಸಿದ್ದತೆ ಮಾಡಿಕೊಳ್ಳಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಶಂಭುದೇವನಪುರ ಎಸ್.ಎಂ.ಜಯಶಂಕರಮೂರ್ತಿ, ಎಸ್.ಎಂ.ರಮೇಶ್, ಗೌಡರ ಮಹದೇವಸ್ವಾಮಿ, ಎಸ್.ಕುಮಾರಸ್ವಾಮಿ, ಬಸವಲಿಂಗಪ್ಪ, ಪುಟ್ಟಸ್ವಾಮಿ, ತೊಟ್ಟವಾಡಿ ಚಂದ್ರಧರ, ಮೊಸಂಬಾಯನಹಳ್ಳಿ ರಾಜೇಂದ್ರ, ನಾಗರಾಜು, ಲೋಕೇಶ್, ಬಿಳಿಜಗಲಿ ಮೋಳೆ ನಂಜುಂಡಸ್ವಾಮಿ, ಹೆಮ್ಮಿಗೆ ಶಾಂತ ಕುಮಾರ್, ಅರ್ಚಕ ಪ್ರಶಾಂತ್ ಉಪಸಿತರಿದ್ದರು.



ಪತ್ರಿಕಾಗೋಷ್ಠಿಯಲ್ಲಿ ದೇವಸ್ಥಾನದ ಕಾರ್ಯದರ್ಶಿ ಎಸ್.ಬಿ.ಸುಗಂಧರಾಜು ಮಾತನಾಡಿದರು.

60 ಗ್ರಾಮಗಳಲ್ಲಿ ಭಕ್ತ ಸಮೂಹ!

ಕರಿ ಬಸವೇಶ್ವರಸ್ವಾಮಿಗೆ 60 ಗ್ರಾಮಗಳಲ್ಲಿ ಸಾವಿರಾರು ಭಕ್ತ ಸಮೂಹವಿದೆ. ಶಂಭುದೇವನಪುರ, ದೊಡ್ಡನಹುಂಡಿ, ಬೆನಕನಹಳ್ಳಿ, ಡಣಾಯಕನಪುರ, ಚಾಮರಾಜನಗರ ಜಿಲ್ಲೆಯ ಯಡಿಯೂರು, ಬಸವನಪುರ ಭಕ್ತ ಸಮೂಹವಿರುವ ಮುಖ್ಯ ಗ್ರಾಮಗಳಾಗಿವೆ. ಮೈಸೂರು ಜಿಲ್ಲೆ ಮೊಸಂಬಾಯನಹಳ್ಳಿ ಗ್ರಾಮದಲ್ಲೂ ಸ್ವಾಮಿಗೆ ಭಕ್ತ ಸಮೂಹವಿದೆ.

ರಾಷ್ಟ್ರೀಯ ಸ್ವಚ್ಛತಾ ದಿನ ಕಾರ್ಯಕ್ರಮಕ್ಕೆ ಚಾಲನೆ

ನಾಗಮಂಗಲ: ತಾಲೂಕಿನ ನ್ಯಾಯಾಲಯ ಆವರಣದಲ್ಲಿ ರಾಷ್ಟ್ರೀಯ ಸ್ವಚ್ಛತಾ ದಿನ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಕಾನೂನು ಸೇವಾ ಸಮಿತಿ, ಪುರಸಭೆ ನಾಗಮಂಗಲ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರಾದ ಯೋಗೇಶ್, ನಮ್ಮ ಸುತ್ತಮುತ್ತಲಿನ ಪರಿಸರವನ್ನು ಕಾಪಾಡಿ ಮತ್ತೊಬ್ಬರಲ್ಲಿಯೂ ಪರಿಸರದ ಬಗ್ಗೆ ಅರಿವು ಉಂಟಾದಾಗ ಉತ್ತಮ ಪರಿಸರ, ಆರೋಗ್ಯ ಸಾಧ್ಯವೆಂದು ತಿಳಿಸಿದರು.

ಪರಿಸರದ ಬಗ್ಗೆ ತಾತ್ಸಾರ ಮನೋಭಾವ ತೋರದೆ ನಾವು ವಾಸಿಸುವ ಪ್ರದೇಶ ನಮ್ಮ ಸುತ್ತಮುತ್ತಲಿನ ಜಾಗದಲ್ಲಿ ಸಮೃದ್ಧ ಪರಿಸರ ನಿರ್ಮಾಣ ಮಾಡಿ ಪರಿಸರ ಮಾಲಿನ್ಯವನ್ನು ತಡೆಗಟ್ಟುವುದರಿಂದ ಸ್ವಚ್ಛ ಭಾರತ ಸ್ವಚ್ಛ ಗ್ರಾಮ ಸಾಧ್ಯ ಎಂದರು.

ಅಪಾರ ಸಿವಿಲ್ ನ್ಯಾಯಾಧೀಶರಾದ ಸಿದ್ದಪ್ಪಾಜಿ ಕೆ.ಪಿ. ಮಾತನಾಡಿದರು. ಸ್ವಚ್ಛತಾ ಅಭಿಯಾನದಲ್ಲಿ ಕುಮಾರಿ ಅರುಣಬಾಯಿ, ಸಹಾಯಕ ಸರ್ಕಾರಿ ಅಭಿಯೋಜಕರಾದ ನಾಗಮಂಗಲ ಪಿ.ಸಿ. ಮಂಜುನಾಥ್, ಸರ್ಕಾರಿ ವಕೀಲರಾದ ಚಂದ್ರಶೇಖರ್ ಪುರುಷೋತ್ತಮ್, ಹಾಗೂ ಪುರಸಭೆ ಆರೋಗ್ಯ ನಿರೀಕ್ಷಕರಾದ ವೆಂಕಟೇಶ್, ನಾಗರಾಜ್ ಹಾಗೂ ಪೌರಕಾರ್ಮಿಕರು ಸಿಬ್ಬಂದಿವರ್ಗ ಹಾಜರಿದ್ದರು.

ಮತಗಟ್ಟೆ ಸಿಬ್ಬಂದಿ ಮಾಹಿತಿ ಸಂಗ್ರಹಣೆ

ಮಂಡ್ಯ,ಫೆ.2– ಲೋಕಸಭಾ ಸಾರ್ವತ್ರಿಕ ಚುನಾವಣೆ–2024ಕ್ಕೆ ಸಂಬಂಧಿಸಿದಂತೆ ಮತಗಟ್ಟೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ನೇಮಕ ಮಾಡಲು ಸಿದ್ಧತೆ ಮಾಡಿಕೊಳ್ಳಿ ಎಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆ ನಡೆಸಿ ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ಕೆ.ಆರ್. ಪೇಟೆ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾಗಿ ರಾಧಾ ಈಶ್ವರಪ್ರಸಾದ್ ಆಯ್ಕೆ




ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷೆ ರಾಧಾ ಈಶ್ವರಪ್ರಸಾದ್ ಅವರನ್ನು ಅಭಿನಂದಿಸಲಾಯಿತು.

ಕೆ.ಆರ್.ಪೇಟೆ: ಪಟ್ಟಣದಲ್ಲಿರುವ ಪಿಎಲ್‌ಡಿ ಬ್ಯಾಂಕ್ ಆಡಳಿತ ಮಂಡಳಿಯ ನೂತನ ಅಧ್ಯಕ್ಷರಾಗಿ ರಾಧಾ ಈಶ್ವರಪ್ರಸಾದ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹಿಂದಿನ ಅಧ್ಯಕ್ಷರಾಗಿದ್ದ ಜಯಶೀಲ ರಾಮೇಗೌಡ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಇಂದು ಚುನಾವಣೆ ನಿಗಧಿಯಾಗಿತ್ತು. ಅಧ್ಯಕ್ಷ ಸ್ಥಾನ ಬಯಸಿ ರಾಧಾ ಈಶ್ವರ್ ಪ್ರಸಾದ್ ಹಾಗೂ ರಾಜಾನಾಯಕ್ ನಾಮಪತ್ರ ಸಲ್ಲಿಸಿದ್ದರು. ರಾಜಾನಾಯಕ್ ನಾಮಪತ್ರವನ್ನು ವಾಪಸ್ಸು ಪಡೆದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ಸಿಡಿಓ ಭರತ್‌ಕುಮಾರ್ ಆಯ್ಕೆಯನ್ನು ಪ್ರಕಟಿಸಿದರು. ಸಂಘದ ಮಾಜಿ ಅಧ್ಯಕ್ಷ, ಹಾಲಿ ನಿರ್ದೇಶಕ ಕಬ್ಬಲಗೆರೆ ಪುಟ್ಟಸ್ವಾಮಿಗೌಡ, ತಾ.ಪಂ ಮಾಜಿ ಅಧ್ಯಕ್ಷ ಈಶ್ವರ್ ಪ್ರಸಾದ್, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಅಗಸರಹಳ್ಳಿ ಗೋವಿಂದರಾಜು, ಕಬ್ಬಲಗೆರೆ ಪುಟ್ಟಸ್ವಾಮೀಗೌಡ, ಬಣ್ಣೇನಹಳ್ಳಿ ಧನಂಜಯ, ಜಯಶೀಲ ರಾಮೇಗೌಡ, ಮಾಜಿ ಉಪಾಧ್ಯಕ್ಷೆ ಕಮಲಮ್ಮ ರಾಮಕೃಷ್ಣ, ಚಂದ್ರೇಗೌಡ, ಶಿವಕುಮಾರ್, ಆನಂದ್, ಅಂಜನಿಗೌಡ, ಏಜಾಜ್ ಪಾಷಾ, ಕೆ.ಬಿ.ವಿವೇಕ್, ಕುವೆಂಪು ಸೇವಾ ಟ್ರಸ್ಟ್ ಅಧ್ಯಕ್ಷ ಕೆಬಿಸಿ ಮಂಜುನಾಥ್, ವಕೀಲ ಮೂಡನಹಳ್ಳಿ ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

46 ಕೆರೆ ತುಂಬಿಸುವ ಕಾಮಗಾರಿ ಪೂರ್ಣ



ಕಾಮಗಾರಿಯನ್ನು ಕೆ.ಆರ್.ಪೇಟೆ ತಾಲೂಕು ಕಾಂಗ್ರೆಸ್ ಮುಖಂಡರಾದ ಬಿ.ಎಲ್.ದೇವರಾಜು ಮತ್ತು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹರಳಹಳ್ಳಿ ವಿಶ್ವನಾಥ್ ಅಧಿಕಾರಿಗಳ ಸಮ್ಮುಖದಲ್ಲಿ ಪರಿಶೀಲನೆ ನಡೆಸಿದರು.

ಕೆ.ಆರ್.ಪೇಟೆ, ಫೆ.2– ತಾಲೂಕಿನ ಬೂಕನಕೆರೆ ಹೋಬಳಿಯ 46 ಕೆರೆಗಳನ್ನು ಹೇಮಾವತಿ ನದಿ ನೀರಿನಿಂದ ತುಂಬಿಸುವ ಕಟ್ಟಹಳ್ಳಿ ಏತ ನೀರಾವರಿ ಯೋಜನೆಯ ಮೊದಲ ಹಂತದ ಕಾಮಗಾರಿ ಮುಕ್ತಾಯಗೊಂಡಿದ್ದು, ಸದರಿ ಕಾಮಗಾರಿಯನ್ನು ಕೆ.ಆರ್.ಪೇಟೆ ತಾಲೂಕು ಕಾಂಗ್ರೆಸ್ ಮುಖಂಡರಾದ ಬಿ.ಎಲ್.ದೇವರಾಜು ಮತ್ತು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹರಳಹಳ್ಳಿ ವಿಶ್ವನಾಥ್ ಸಂಬಂಧಪಟ್ಟ ಅಧಿಕಾರಿಗಳ ಸಮ್ಮುಖದಲ್ಲಿ ಪರಿಶೀಲಿಸಿ ಮಾಹಿತಿ ಪಡೆದರು.

ಗುತ್ತಿಗೆದಾರರು ಕಾಮಗಾರಿಯ ಗುಣಮಟ್ಟ ಕಾಪಾಡಿಕೊಳ್ಳಬೇಕು. ಕಾಮಗಾರಿಯನ್ನು ಆದಷ್ಟು ಬೇಗ ಉದ್ಘಾಟನೆ ಮಾಡಲು ಅನುವು ಮಾಡಿಕೊಡಬೇಕು. ಈ ಏತ ನೀರಾವರಿ ಯೋಜನೆಯಿಂದ ಮೊದಲ ಹಂತದ ಯೋಜನೆಯಿಂದ ಬೂಕನಕೆರೆ ಹೋಬಳಿಯ 46 ಕೆರೆಗಳನ್ನು ಶೀಘ್ರವೇ ಹೇಮಾವತಿ ನದಿ ನೀರಿನಿಂದ ತುಂಬಿಸಲಾಗುವುದು. ಇದರಿಂದ ಬೂಕನಕೆರೆ ಹೋಬಳಿಯ ಜನರ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗಲಿದೆ.

ಎರಡನೇ ಹಂತದ ಕಾಮಗಾರಿಯಲ್ಲಿ ಶೀಳನೆರೆ ಹೋಬಳಿಯ ಎಲ್ಲಾ ಕೆರೆಗಳನ್ನು ತುಂಬಿಸುವ ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವರಾದ ಎನ್. ಚೆಲುವರಾಯಸ್ವಾಮಿ ಅವರನ್ನು ಬೇಟಿ ಮಾಡಿ ಉದ್ಘಾಟನೆಗೆ ಆಗಮಿಸುವಂತೆ ಬ್ಲಾಕ್ ಕಾಂಗ್ರೆಸ್ ವತಿಯಿಂದ ಮನವಿ ಮಾಡಲಾಗಿದೆ.

ಆದಷ್ಟು ಬೇಗ ಯೋಜನೆಯನ್ನು ಉದ್ಘಾಟಿಸುವ ಮೂಲಕ ಬೂಕನಕೆರೆ ಹೋಬಳಿ ರೈತರ ಸುಮಾರು 40 ವರ್ಷಗಳ ಬೇಡಿಕೆಯನ್ನು ಈಡೇರಿಸಲಾಗುವುದು ಎಂದು ಕಾಂಗ್ರೆಸ್ ಮುಖಂಡರಾದ ಬಿ.ಎಲ್.ದೇವರಾಜು ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಹರಳಹಳ್ಳಿ ವಿಶ್ವನಾಥ್ ಪತ್ರಕರ್ತರಿಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಏತ ನೀರಾವರಿಗೆ ಸಂಬಂಧಪಟ್ಟ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಅಂಬೇಡ್ಕರ್ ಜೀವನ, ಸಾಧನೆ ಜಗತ್ತಿಗೆ ಮಾದರಿ



ಸಿದ್ದಾಪುರಕ್ಕೆ ಆಗಮಿಸಿದ ಸಂವಿಧಾನ ಜಾಗೃತಿ ರಥವನ್ನು ಗ್ರಾಪಂ ಅಧ್ಯಕ್ಷ ರಂಗಸ್ವಾಮಿ, ಪಿಡಿಓ ಗಿರೀಶ್ ಸ್ವಾಗತಿಸಿದರು.

ಕೆ.ಆರ್.ನಗರ, ಫೆ.2– ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಜಗತ್ತಿಗೆ ಸ್ಫೂರ್ತಿಯ ಚಿಲುಮೆಯಾಗಿದ್ದು, ಅವರ ಜೀವನ ಮತ್ತು ಸಾಧನೆ ಜಗತ್ತಿಗೆ ಮಾದರಿ ಎಂದು ಸಿದ್ದಾಪುರ ಗ್ರಾಪಂ ಅಧ್ಯಕ್ಷ ರಂಗೇಶ್ ಕುಮಾರ್ ತಿಳಿಸಿದರು.

ತಾಲೂಕಿನ ಸಿದ್ದಾಪುರ ಗ್ರಾಮಕ್ಕೆ ಆಗಮಿಸಿದ ಸಂವಿಧಾನ ಜಾಗೃತಿ ಜಾಥಾ ರಥ ಸ್ವಾಗತಿಸಿ ನಂತರ ಮಾತನಾಡಿದ ಅವರು, ಇಡೀ ಪ್ರಪಂಚವೇ ಮೆಚ್ಚುವಂತಹ ಸಂವಿಧಾನ ರಚಿಸಿ ದೇಶದ ಜನರು ನೆಮ್ಮದಿಯ ಬದುಕು ನಡೆಸಲು ಕಾರಣವಾಗಿರುವ ಆ ಮಹಾನ್ ನಾಯಕ ನಮ್ಮ ದೇಶದಲ್ಲಿ ಜನಿಸಿರುವುದು ನಮ್ಮೆಲ್ಲರ ಪುಣ್ಯ ಎಂದರು. ದಲಿತ ಮುಖಂಡ ರಾಜಯ್ಯ, ಗ್ರಾಪಂ ಮಾಜಿ ಅಧ್ಯಕ್ಷ ತ್ಯಾಗರಾಜು, ಉಪಾಧ್ಯಕ್ಷೆ ಸುಕನ್ಯಾ, ಸದಸ್ಯರಾದ ಮಹದೇವ್, ಮೋಹನ್, ಸ್ವಾಮಿ, ಸತೀಶ್, ರಮೇಶ್, ಸಮಾಜ ಕಲ್ಯಾಣಾಧಿಕಾರಿ ಎಸ್.ಎಂ.ಅಶೋಕ್, ಸಹಾಯಕ ಕೃಷಿ ನಿರ್ದೇಶಕ ಮಲ್ಲಿಕಾರ್ಜುನ್, ಪಿಡಿಓ ಗಿರೀಶ್ ಮತ್ತಿತರರಿದ್ದರು.

ದೇವನೂರು ಮಠಕ್ಕೆ ಬಿ.ಸೋಮಶೇಖರ್ ಭೇಟಿ



ನಂಜನಗೂಡು ತಾಲೂಕಿನ ದೇವನೂರು ಗ್ರಾಮದ ಶ್ರೀಗುರು ಮಲ್ಲೇಶ್ವರ ದಾಸೋಹ ಮಠಕ್ಕೆ ಚಾಮರಾಜನಗರ ಲೋಕಸಭಾ ಕ್ಷೇತ್ರದ ಪ್ರಬಲ ಟಿಕೆಟ್ ಆಕಾಂಕ್ಷಿ, ಮಾಜಿ ಸಚಿವ ಬಿ.ಸೋಮಶೇಖರ್ ಭೇಟಿ ನೀಡಿ ಶ್ರೀಮಹಾಂತ ಸ್ವಾಮೀಜಿ ಅವರ ಆಶೀರ್ವಾದ ಪಡೆದರು. ಈ ವೇಳೆ ದೇವನೂರು ಶಿವಮಲ್ಲು, ಕಾಂಗ್ರೆಸ್ ಮುಖಂಡರಾದ ರಂಗಸ್ವಾಮಿ ಜಿ.ಮರಳ್ಳಿ ಇತರರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಬೆಲೆ ಕೆಜಿಗೆ ಬರೀ 29 ರೂ.

ಲಭ್ಯವಾಗಲಿದೆ. ಚಿಲ್ಲರೆ ಮಾರುಕಟ್ಟೆಯಲ್ಲಿ ಮೊದಲ ಹಂತದಲ್ಲಿ ಐದು ಲಕ್ಷ ಟನ್ ಅಕ್ಕಿ ಮಾರಾಟ ಮಾಡಲು ಕೇಂದ್ರ ನಿರ್ಧರಿಸಿದೆ. ಕೇಂದ್ರವು ಈಗಾಗಲೇ ಭಾರತ್ ಗೋಧಿ ಹಿಟ್ಟನ್ನು ಕೆಜಿಗೆ 27.50 ರೂಗೆ ಮತ್ತು ಭಾರತ್ ದಾಲ್ (ಕಡಲೆಕಾಯಿ) ಕೆಜಿಗೆ 60 ರೂ.ಗೆ ಮಾರಾಟ ಮಾಡುತ್ತಿದೆ ಎಂದು ಚೋಪ್ರಾ ಹೇಳಿದ್ದಾರೆ.

ಅಕ್ಕಿ ರಫ್ತಿನ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕಲಾಗುವುದು ಎಂಬ ಸುದ್ದಿಗೆ ಚೋಪ್ರಾ ಪ್ರತಿಕ್ರಿಯಿಸಿದ್ದಾರೆ. ದರ ನಿಯಂತ್ರಣಕ್ಕೆ ಬರುವವರೆಗೂ ನಿಷೇಧಾಜ್ಞೆ ಮುಂದುವರಿಯಲಿದೆ. ಅಲ್ಲದೆ, ಪ್ರತಿ ಶುಕ್ರವಾರ ಸಚಿವಾಲಯದ ವೆಬ್‌ಸೈಟ್‌ನಲ್ಲಿ ದಾಸ್ತಾನು ವಿವರಗಳನ್ನು ಸೇರಿಸಲು ಚಿಲ್ಲರೆ ವ್ಯಾಪಾರಿಗಳು, ಸಗಟು ವ್ಯಾಪಾರಿಗಳು ಮತ್ತು ಪ್ರೊಸೆಸರ್‌ಗಳಿಗೆ ಸೂಚನೆ ನೀಡಲಾಗಿದೆ ಎಂದು ಅವರು ಹೇಳಿದರು.

ಅಕ್ಕಿ ಮಾರಾಟದ ಮೇಲೆ ಮಿತಿ ಇದೆಯೇ ಎಂದು ಸುದ್ದಿಗಾರರು ಪ್ರಶ್ನಿಸಿದಾಗ, ಅಗತ್ಯ ಬಿದ್ದರೆ ಯಾವುದೇ ನಿರ್ಧಾರ ಕೈಗೊಳ್ಳುವ ಸಾಧ್ಯತೆ. ದೇಶದಲ್ಲಿ ಅಕ್ಕಿ ಹೊರತುಪಡಿಸಿ ಎಲ್ಲ ಅಗತ್ಯ ವಸ್ತುಗಳ ಬೆಲೆ ನಿಯಂತ್ರಣದಲ್ಲಿದೆ ಎಂದರು.

ಮುಡಾದಿಂದ ಡಿಪಿಆರ್ ಸಲ್ಲಿಕೆ

ವಸತಿ ಸಮುಚ್ಚಯ ನಿರ್ಮಿಸುವ ಬಗ್ಗೆ ಪ್ರಾಧಿಕಾರವು ನಕ್ಷೆ ತಯಾರಿಸಿದೆ. ಈ ಯೋಜನೆಗೆ ಸರ್ಕಾರ ಅನುಮೋದನೆ ನೀಡಿದಲ್ಲಿ 2 ವರ್ಷದೊಳಗಾಗಿ ಅನುಷ್ಠಾನಗೊಳಿಸಿ ದುರ್ಬಲ ವರ್ಗದವರಿಗೆ ಸ್ಪರ್ಧಾತ್ಮಕ ದರದಲ್ಲಿ ನೀಡಲು ಉದ್ದೇಶಿಸಲಾಗಿದೆ. ಮುಡಾ ನಿರ್ಮಿಸಲುದ್ದೇಶಿಸಿರುವ ಪ್ರದೇಶದ ಸುತ್ತ ಮುತ್ತ ಖಾಸಗಿ ಬಿಲ್ಡರ್‌ಗಳು ನಿರ್ಮಿಸುವ ಅಪಾರ್ಟ್‌ಮೆಂಟ್‌ನಲ್ಲಿ 1 ಬಿಹೆಚ್‌ಕೆ ಮನೆಯು 25ರಿಂದ 30 ಲಕ್ಷ ಹಾಗೂ 2 ಬಿಹೆಚ್‌ಕೆ ಮನೆಯು 50ರಿಂದ 55 ಲಕ್ಷ ರೂ.ಗಳಿಗೆ ಮಾರಾಟವಾಗುತ್ತಿವೆ. ಆದರೆ ಮುಡಾದಿಂದ ನಿರ್ಮಿಸುವ ಮನೆಗಳನ್ನು ಕೈಗೆಟುಕುವ ದರದಲ್ಲಿ ನೀಡಲಾಗುವುದು ಎಂದು ಡಿಪಿಆರ್‌ನಲ್ಲಿ ತಿಳಿಸಲಾಗಿದೆ.

ಈ ಯೋಜನೆಗೆ ಅಗತ್ಯವಿರುವ 181.33 ಕೋಟಿ ರೂ. ಪ್ರೈಕಿ ಪ್ರಾಧಿಕಾರದಲ್ಲಿ ಕಂತುಗಳ ರೂಪದಲ್ಲಿ ಹಂತ ಹಂತವಾಗಿ ಸಂಪನ್ಮೂಲ ಕ್ರೋಢೀಕರಿಸಲಾಗಿದೆ. ಮೊದಲ ಹಂತದಲ್ಲಿ 1 ಟವರ್ ಆರಂಭಿಸಿ ಯಶಸ್ವಿಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡುವಂತೆ ಪ್ರಸ್ತಾವನೆಯಲ್ಲಿ ಕೋರಲಾಗಿದೆ. ಭೂಸ್ವಾಧೀನ ಕಾಯ್ದೆ 2013 ಜಾರಿಗೆ ಬಂದ ನಂತರ ಮುಡಾದಿಂದ ಬಡಾವಣೆ ರಚನೆಗೆ ಭೂಮಿ ಪಡೆಯಲು ಕಷ್ಟವಾಗಿದೆ. ಏಕೆಂದರೆ ಕಾಯ್ದೆ ಪ್ರಕಾರ ಭೂ ಮಾಲೀಕರಿಗೆ ಪರಿಹಾರ ಮತ್ತು ಬಡಾವಣೆ ನಿರ್ಮಾಣಕ್ಕೆ ತಗಲುವ ವೆಚ್ಚ ಸೇರಿದಂತೆ ಕೈಗೆಟುಕುವ ದರದಲ್ಲಿ ನಿವೇಶನ ಹಂಚಿಕೆ ಮಾಡಲು ಸಾಧ್ಯವಾಗುವುದಿಲ್ಲವಾದ್ದರಿಂದ ಗುಂಪು ವಸತಿ ಯೋಜನೆಯಿಂದ ಮನೆ ನಿರ್ಮಿಸಿಕೊಡಬಹುದಾಗಿದೆ ಎಂದು ತಿಳಿಸಲಾಗಿದೆ. ಕಳೆದ ಹಲವು ವರ್ಷಗಳಿಂದ ನಿವೇಶನಕ್ಕಾಗಿ 80,000ಕ್ಕೂ ಹೆಚ್ಚು ಮಂದಿ ಮನೆಗಾಗಿ ಬೇಡಿಕೆ ಸಮೀಕ್ಷೆ ನಡೆಸಿದಾಗ 26,000 ಅರ್ಜಿ ಬಂದಿವೆ. ಅದ್ದರಿಂದ ಮುಡಾ ಈ ಹಿಂದೆ ಮೈಸೂರಿನ 4 ಕಡೆ ಗುಂಪು ವಸತಿಗಳನ್ನು ನಿರ್ಮಿಸಲುದ್ದೇಶಿ ಸಲಾಗಿತ್ತಾದರೂ, 2023ರ ನವೆಂಬರ್ 6ರಂದು ನಗರಾಭಿವೃದ್ಧಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಸಭೆ ನಡೆಸಿ ವಿಜಯನಗರ 4ನೇ ಹಂತದಲ್ಲಿ 1 ಯೋಜನೆಯನ್ನು ಅನುಷ್ಠಾನಗೊಳಿಸಲು ಸೂಚಿಸಿದ ಕಾರಣ ಡಿಪಿಆರ್ ಸಲ್ಲಿಸಲಾಗಿದೆ ಎಂದು ಪ್ರಸ್ತಾವನೆಯಲ್ಲಿ ತಿಳಿಸಲಾಗಿದೆ.

ದೇಶ ಕಟ್ಟುತ್ತಾರೆಯೇ...!?

ತೆಗೆದುಕೊಂಡಿದ್ದಾರೆ. ಕೇಂದ್ರ ಸರ್ಕಾರ ಕರ್ನಾಟಕಕ್ಕೆ ಆರ್ಥಿಕ ತಾರತಮ್ಯ, ಅನ್ಯಾಯ ಮಾಡುತ್ತಿದೆ ಎಂಬ ಕಾರಣ ಕೊಟ್ಟಿದ್ದಾರೆ. ಇದು ಅಪ್ಪಟ್ಟ ಹೇಳಿಕೆ. ಕರ್ನಾಟಕದಲ್ಲಿ ಬಿರಿಯಾನಿ ಊಟ ಮಾಡಿ ಭಾರತ್ ಜೋಡೋ ಯಾತ್ರೆ ಮಾಡಿದರು. ಈಗ ವಿಭಜನೆಯ ಮಾತನ್ನು ಆಡುತ್ತಿದ್ದಾರೆ. ಒಂದು ವೇಳೆ ವಿಭಜನೆ ಆಯ್ತು ಅಂತ ತಿಳಿದುಕೊಳ್ಳಿ. ತಮಿಳುನಾಡಿನಿಂದ ಕಾವೇರಿ ವಿಚಾರದಲ್ಲಿ ನ್ಯಾಯ ಪಡೆಯಲು ಸಾಧ್ಯವೇ, ಇವರು ನ್ಯಾಯ ದೊರಕಿಸಿಕೊಡುತ್ತಾರೆಯೇ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

ದೇಶದ ಮೊದಲನೇ ಬಜೆಟ್ ಗಾತ್ರ 174 ಕೋಟಿ ರೂ. ಆಗ ದೇಶದಲ್ಲಿ ಆಹಾರದ ಕೊರತೆ ಇತ್ತು. ಆಗಿನಿಂದಲೂ ಸರ್ಕಾರಗಳು ಬಜೆಟ್ ಮಂಡಿಸಿಕೊಂಡು ಬಂದಿವೆ. ಕಾಲಕ್ರಮೇಣ ನಾವು ಹಣಕಾಸು ಆಯೋಗಗಳನ್ನು ರಚನೆ ಮಾಡಿಕೊಂಡಿದ್ದೇವೆ. ಅವರು ಎಲ್ಲಾ ರಾಜ್ಯಕ್ಕೂ ಭೇಟಿ ಕೊಟ್ಟು ಪರಿಶೀಲನೆ ಮಾಡುತ್ತಾರೆ.

ಯಾವ ರಾಜ್ಯಕ್ಕೆ ಎಷ್ಟು ಹಣಬೇಕು ಎಂದು ವರದಿ ಕೊಡುತ್ತಾರೆ. ಯಾವ ರಾಜ್ಯ ಅಭಿವೃದ್ಧಿ ಆಗಿಲ್ಲ, ಯಾವ ರಾಜ್ಯ ಅಭಿವೃದ್ಧಿ ಆಗಿದೆ ಎಂಬ ಮಾನದಂಡದ ಆಡಿಯಲ್ಲಿ ಹಣ ಹಂಚಿಕೆ ಆಗುತ್ತದೆ. ಈ ಪದ್ಧತಿಯನ್ನು ಕಾಂಗ್ರೆಸ್ ಸರ್ಕಾರದ ಕಾಲದಲ್ಲಿಯೇ ಆರಂಭ ಮಾಡಲಾಯಿತು. ಪ್ರಧಾನಿ ನರೇಂದ್ರ ಮೋದಿ ಅಧಿಕಾರಕ್ಕೆ ಬಂದ ಮೇಲೆ ಪ್ರಾರಂಭ ಮಾಡಿದ್ದಲ್ಲ ಎಂದು ಕುಮಾರಸ್ವಾಮಿ ಹೇಳಿದರು. ಕಾಂತರಾಜು ವರದಿ ಬಗ್ಗೆ ಬೀದಿ ಬೀದಿಯಲ್ಲಿ ಮಾತನಾಡುತ್ತಿದ್ದಾರೆ. ನಿಮ್ಮನ್ನು ವರದಿ ಸ್ವೀಕರಿಸಬೇಡಿ ಅಂತ ಹಿಡಿದುಕೊಂಡಿರುವವರು ಯಾರು? ನಾನು ಸಿಎಂ ಆಗಿದ್ದಾಗ ವರದಿ ತೆಗೆದುಕೊಳ್ಳಲಿಲ್ಲ ಅಂದಿದ್ದಾರೆ. ಆ ವರದಿಯಲ್ಲಿ ಮೆಂಬರ್ ಸೆಕ್ರೆಟರಿ ಸಹಿ ಇತ್ತಾ, ಇವತ್ತಿನವರೆಗೂ ಆ ವರದಿಗೆ ಸಹಿ ಹಾಕಿಲ್ಲ. ಸಹಿ ಹಾಕದ ವರದಿಯನ್ನು ನಾನು ಹೇಗೆ ಸ್ವೀಕರಿಸಲಿ, ಸುಮ್ಮನೆ ನನ್ನ ಮೇಲೆ ಆರೋಪ ಮಾಡುತ್ತಿದ್ದಾರೆ ಎಂದು ಅವರು ಕಿಡಿಕಾರಿದರು.

ಅನ್ಯಾಯ ಪ್ರಶ್ನಿಸಿದರೆ ನಾನು ಮೆಂಟಲ್!: ಕಾಂಗ್ರೆಸ್ ಸರ್ಕಾರದಲ್ಲಿ ಕಮಿಷನ್ ದಂಧೆ ನಡೆಯುತ್ತಿದೆ ಎಂಬ ಕಾಂಗ್ರೆಸ್ ಮಾಜಿ ಸಚಿವ ಗಂಡಸಿ ಶಿವರಾಂ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್‌ನಲ್ಲಿ 50 ಪರ್ಸೆಂಟ್ ಇದೆ ಅಂತ ಅವರು ಹೇಳಿದ್ದಾರೆ. ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ನಮ್ಮ ಮಾರ್ಗದರ್ಶಕರು ಅಂತಿದ್ದಾರೆ. ಅವರೇ ಬಾಣಲಿಯಿಂದ ಬೆಂಕಿಗೆ ಬಿದ್ದ ಹಾಗಾಗಿದೆ ಅಂತ ಹೇಳಿಕೆ ಕೊಟ್ಟಿದ್ದಾರೆ. ಇದನ್ನೆಲ್ಲಾ ಕುಮಾರಸ್ವಾಮಿ ಪ್ರಶ್ನೆ ಮಾಡಿದರೆ ಅವರಿಗೆ ಅಸಹನೆ, ಮೆಂಟಲ್ ಬ್ಯಾಲೆನ್ಸ್ ತಪ್ಪಿದೆ ಅಂತಾರೆ. ಪ್ರತಿನಿತ್ಯ ವರ್ಗಾವಣೆ ಮಾಡುವ ಕೆಲಸವೇ ಆಗಿದೆ. ಮೋದಿ ಬಗ್ಗೆ ಸಿದ್ದರಾಮಯ್ಯ ಕಮೆಂಟ್ ಮಾಡಿದ್ದಾರೆ. ಮೊದಲು ನಿಮ್ಮ ಸ್ಥಿತಿ ನೋಡಿಕೊಳ್ಳಿ ಎಂದು ಅವರು ತಿರುಗೇಟು ನೀಡಿದರು.

ಸಿದ್ದರಾಮಯ್ಯ ನೇತೃತ್ವದಲ್ಲಿ ಧರಣಿ

ರಾಷ್ಟ್ರದ ಗಮನಕ್ಕೆ ತರಲು ಮುಖ್ಯಮಂತ್ರಿ ಅವರು ಸಜ್ಜಾಗಿದ್ದಾರೆ. ಕಾಂಗ್ರೆಸ್‌ನ ದೆಹಲಿ ನಾಯಕರು ಇಂದು ಬೆಳಗ್ಗೆ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಅವರನ್ನು ಸಂಪರ್ಕಿಸಿ ಚರ್ಚಿಸಿದ ನಂತರ, ರಾಜ್ಯ ಪ್ರವಾಸದಲ್ಲಿದ್ದ ಸಿದ್ದರಾಮಯ್ಯ ಅವರು, ಧರಣಿ ಮಾಡುವ ನಿರ್ಧಾರ ಕೈಗೊಂಡಿದ್ದಲ್ಲದೆ, ವಿಷಯವನ್ನು ಎಲ್ಲ ಶಾಸಕರಿಗೂ ಮುಟ್ಟಿಸುವಂತೆ ಸೂಚಿಸಿದರು. ಕರ್ನಾಟಕದ ಬಹುತೇಕ ಭಾಗ ಬರಗಾಲಕ್ಕೆ ತುತ್ತಾಗಿದ್ದರೂ ಕೇಂದ್ರ ಸರ್ಕಾರ ಇದುವರೆಗೂ ಒಂದು ನಯಾಪೈಸೆಯನ್ನೂ ನೀಡಿಲ್ಲ, ಕೋಟ್ಯಾಂತರ ರೂ. ಬೆಳೆ ನಷ್ಟವಾಗಿದ್ದು, ರೈತರಿಗೂ ಪರಿಹಾರ ಕಲ್ಪಿಸುವಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರ ವಿಫಲವಾಗಿದೆ.

ಕುಡಿಯುವ ನೀರು ಹಾಗೂ ಸಂಕಷ್ಟ ಸಂದರ್ಭದಲ್ಲಿ ತಮಿಳುನಾಡಿಗೆ ನೀರು ಹರಿಸಲು ಅನುಕೂಲವಾಗುವಂತೆ ಕೆಆರ್‌ಎಸ್ ಜಲಾಶಯಕ್ಕೆ ಸಮಾನಾಂತರವಾಗಿ ಮೇಕೆದಾಟು ಸಮೀಪ ಅಣೆಕಟ್ಟೆ ನಿರ್ಮಿಸಲು ಇದುವರೆಗೂ ಮಂಜೂರಾತಿ ನೀಡಿಲ್ಲ. ಹದಿನೈದನೇ ಹಣಕಾಸು ಆಯೋಗ ರಾಜ್ಯಕ್ಕೆ ನಿಗದಿ ಮಾಡಿರುವ ಅನುದಾನದಲ್ಲಿ 5,495 ಕೋಟಿ ರೂ.ಗಳನ್ನು ಇದುವರೆಗೂ ಬಿಡುಗಡೆ ಮಾಡಿಲ್ಲ, ಬೆಂಗಳೂರಿನ ವರ್ತುಲ ರಸ್ತೆಗೆ ನೀಡಬೇಕಿದ್ದ ಆರು ಸಾವಿರ ಕೋಟಿ ರೂ.ಗಳನ್ನು ಸಹ ನೀಡಿಲ್ಲ.

ಜನರ ಮುಂದೆ ಭರವಸೆಯ ಮಹಾಪೂರವನ್ನೇ ಹರಿಸಿರುವ ಕೇಂದ್ರ, ನಂತರ ಯಾವುದೇ ಯೋಜನೆಗಳಿಗೆ ಮಂಜೂರಾತಿ ಮತ್ತು ಆರ್ಥಿಕ ನೆರವು ನೀಡಿಲ್ಲ. ಭದ್ರಾ ಮೇಲ್ದಂಡೆ ಯೋಜನೆಗೆ ನೀಡಬೇಕಾಗಿದ್ದ 5,300 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿಲ್ಲ, ರಾಜ್ಯದಿಂದ ಸಂಗ್ರಹವಾಗುತ್ತಿರುವ ಜಿ.ಎಸ್.ಟಿ ಪಾಲಿನ ವಿಷಯದಲ್ಲೂ ಅನ್ಯಾಯವಾಗುತ್ತಿದ್ದು, ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ರಾಜ್ಯಕ್ಕೆ ಹೆಚ್ಚುವರಿಯಾಗಿ ನೀಡಿದ್ದ ಒಂದು ಸಾವಿರ ಕೋಟಿ ರೂ.ಗಳನ್ನು, ಈಗ ಹಿಡಿದುಕೊಂಡಿದೆ.

ರೈತರ ಕೃಷಿ ಉತ್ಪನ್ನಗಳನ್ನು ಖರೀದಿಸಲು ನೀಡುವ ಬೆಂಬಲ ಬೆಲೆ ಯೋಜನೆಯಡಿ 1,800 ಕೋಟಿ ರೂ.ಗಳನ್ನು ಇದುವರೆಗೆ ನೀಡಿಲ್ಲ, ಇದೇ ರೀತಿ ರಾಜ್ಯದಲ್ಲಿ ಜಾರಿಯಾಗುವ ಕೇಂದ್ರದ ಯೋಜನೆಗಳಿಗೆ ನೀಡುವ ಪಾಲನ್ನು ಕಡಿಮೆ ಮಾಡಲಾಗಿದ್ದು ಶೇಕಡಾ 10 ಮತ್ತು 25ಕ್ಕೆ ಇಳಿಸಲಾಗಿದೆ. ಕೇಂದ್ರದ ಪ್ರಾಯೋಜಿತ ಯೋಜನೆಗಳಿಗೆ ಈ ಮೊದಲು ಶೇ.75ರಷ್ಟು ಹಣವನ್ನು ನೀಡಲಾಗುತ್ತಿತ್ತು, ಉಳಿದ ಶೇ.25ನ್ನು ರಾಜ್ಯ ಸರ್ಕಾರಗಳು ಭರಿಸುತ್ತಿದ್ದವು. ನಂತರದ ದಿನಗಳಲ್ಲಿ ಶೇ.50ಕ್ಕೆ ನಿಂತಿತು, ಇದೀಗ ಕೇವಲ ಶೇ.10ರಷ್ಟು ಮಾತ್ರ ಭರಿಸುತ್ತಿದೆ, ಉಳಿದದ್ದನ್ನು ರಾಜ್ಯ ಭರಿಸಬೇಕಿದೆ.

ಕೆಲವು ವಿಶೇಷ ಯೋಜನೆಗಳಿಗೆ ಮಾತ್ರ ಕೇಂದ್ರ ಶೇ.25ರಷ್ಟು ಅನುದಾನವನ್ನು ನೀಡುತ್ತದೆ, ಉಳಿದಂತೆ ಎಲ್ಲಾ ಯೋಜನೆಗಳಿಗೆ ರಾಜ್ಯವೇ ಹಣ ಹೊಂದಿಸಬೇಕಿದೆ.

ಕೊರತೆ ಬಜೆಟ್ ಸರಿದೂಗಿಸಲು ಕೇರಳಕ್ಕೆ 15 ಸಾವಿರ ಕೋಟಿ ರೂ. ನೀಡಿರುವ ಕೇಂದ್ರ, ಕರ್ನಾಟಕದಲ್ಲಿ ಕೊರತೆ ಬಜೆಟ್ ಮಂಡನೆಯಾಗಿದ್ದರೂ ನೆರವು ನೀಡುವುದಿಲ್ಲ ಎಂಬುದು ಸೇರಿದಂತೆ ಹಲವು ವಿಷಯಗಳನ್ನು ರಾಷ್ಟ್ರದ ಗಮನಕ್ಕೆ ತರುವ ಮೂಲಕ ಕೇಂದ್ರದ ವಿರುದ್ಧ ಸಿದ್ದರಾಮಯ್ಯ ತಂಡ ಪ್ರತಿಭಟನೆ ನಡೆಸಲು ನಿರ್ಧರಿಸಿದೆ.

ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆಯಾದ ನಂತರ ಅದರ ಅಲೆಯಲ್ಲಿ ತೇಲುತ್ತಿರುವ ಬಿಜೆಪಿಗೆ ಈ ಪ್ರತಿಭಟನೆಯ ಮೂಲಕ ಶಾಕ್ ನೀಡುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಲೆಕ್ಕಾಚಾರ. ಭಾವನಾತ್ಮಕ ವಿಷಯಗಳನ್ನು ಹಿಡಿದುಕೊಂಡು ರಾಜಕೀಯ ಮಾಡುತ್ತಿರುವ ಕೇಂದ್ರದ ಬಿಜೆಪಿ ಸರ್ಕಾರ, ರಾಜ್ಯಕ್ಕೆ ಮಾಡಿರುವ ಅನ್ಯಾಯವನ್ನು ಎಳೆ ಎಳೆಯಾಗಿ ದೇಶಕ್ಕೆ ವಿವರಿಸುವುದು ಸಿದ್ದರಾಮಯ್ಯ ಅವರ ಯೋಚನೆ. ನವದೆಹಲಿಯಲ್ಲಿ ಫೆಬ್ರವರಿ 7ರಂದು ನಡೆಸಲಿರುವ ಪ್ರತಿಭಟನೆಯಲ್ಲಿ ತಾವು ಮತ್ತು ತಮ್ಮ ಸಂಪುಟದ ಸದಸ್ಯರಲ್ಲದೆ ರಾಜ್ಯ ಕಾಂಗ್ರೆಸ್ ಪಕ್ಷದ ಶಾಸಕರೂ ಭಾಗವಹಿಸುವಂತೆ ಅವರು ಸೂಚನೆ ನೀಡಿದ್ದಾರೆ. ಕೇಂದ್ರದ ಅನ್ಯಾಯದ ವಿರುದ್ಧ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ದೆಹಲಿಯ ಮುಖ್ಯಮಂತ್ರಿ ಅರವಿಂದ ಕೇಜ್ರೀವಾಲ್ ಅವರ ರೀತಿಯಲ್ಲೇ ಬೀದಿಗಿಳಿದು ಹೋರಾಟಕ್ಕಿಳಿಯುವ ಮೂಲಕ ದೇಶದ ಗಮನ ಸೆಳೆಯಬಹುದು, ಆ ಮೂಲಕ ಬಿಜೆಪಿಗೆ ತಿರುಗೇಟು ನೀಡಬಹುದು ಎಂಬುದು ಸಿದ್ದರಾಮಯ್ಯ ಅವರ ಆಲೋಚನೆಯಾಗಿದೆ.

ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಜೀವನವನ್ನೇ ಮುಡಿಪಾಗಿಟ್ಟವರು ಅರಸು

ವಿಧಾನ ಪರಿಷತ್ ಸದಸ್ಯ ಡಾ. ಡಿ.ತಿಮ್ಮಯ್ಯ ಅಭಿಮತ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಅನ್ವೇಷಣಾ ಸೇವಾ ಟ್ರಸ್ಟ್, ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಆರು ಮಂದಿ ಹಿರಿಯ ಪತ್ರಕರ್ತರಿಗೆ 'ಧ್ವನಿ ಕೊಟ್ಟ ಧಣಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರು, ಫೆ.2(ಎಂಟಿವೈ)– ಮಾಜಿ ಮುಖ್ಯಮಂತ್ರಿ ದಿವಂಗತ ಡಿ. ದೇವರಾಜ ಅರಸು ಕೇವಲ ಒಂದು ವರ್ಗಕ್ಕೆ ಮಾತ್ರ ಸೀಮಿತವಾಗಿರದೆ ಎಲ್ಲರಿಗೂ ಉಪಯೋಗವಾಗುವ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದರು ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ತಿಳಿಸಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಅನ್ವೇಷಣಾ ಸೇವಾ ಟ್ರಸ್ಟ್, ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಅರಸು ಪತ್ರಿಕೆಯ ಹನ್ನೊಂದನೇ ವಾರ್ಷಿಕೋತ್ಸವ, ಸಾಧಕರಿಗೆ 'ಧ್ವನಿ ಕೊಟ್ಟ ದಣಿ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಜೀತ ಪದ್ಧತಿ ನಿರ್ಮೂಲನೆ, ಮಲ ಹೊರುವ ಪದ್ಧತಿ ನಿಷೇಧ, ಉಳುವವನೇ ಭೂಮಿಯ ಒಡೆಯ ಸೇರಿದಂತೆ ಹಲವು ಪ್ರಮುಖ ನಿರ್ಣಯಗಳನ್ನು ದೇವರಾಜ ಅರಸ್ ಅವರು ಕೈಗೊಂಡು ಅಪಾರ ಕುಟುಂಬಗಳಿಗೆ ನೆರವಾಗಿದ್ದಾರೆ. ದೀನ ದಲಿತರು ಮತ್ತು ಹಿಂದುಳಿದ ವರ್ಗಗಳ ಪರವಾಗಿ ತಮ್ಮ ಇಡೀ ಜೀವನವನ್ನು ಮುಡಿಪಾಗಿಟ್ಟಿದ್ದರು. ಸಮಾಜದಲ್ಲಿ ತುಳಿತಕ್ಕೊಳಗಾದ ವರ್ಗಗಳಿಗೆ ಧ್ವನಿ ನೀಡಿದ ಅರಸ್ ಅವರನ್ನು 'ಧ್ವನಿ ಕೊಟ್ಟ ದಣಿ' ಎಂದು ಹೆಮ್ಮೆಯಿಂದ ಹೇಳುತ್ತೇವೆ. ದಶಕಗಳಿಂದಲೂ ಹಕ್ಕುಗಳಿಂದ ವಂಚಿತರಾದ ಸೂಕ್ಷ್ಮ ಸಮುದಾಯಗಳಿಗೂ ಅರ್ಹ ಮೀಸಲಾತಿಯನ್ನು ಒದಗಿಸಿದ್ದಾರೆ ಎಂದು ಅವರು ಹೇಳಿದರು.

ನಾನು ಅರಸು ಅವರ ಹುಟ್ಟೂರಿನಿಂದ ಬಂದು, ಎಂಬಿಬಿಎಸ್ ಮುಗಿದ ನಂತರ ನೇರವಾಗಿ ಸರ್ಕಾರಿ ಹುದ್ದೆ ಪಡೆದ ಫಲಾನುಭವಿಯಾಗಿದ್ದೇನೆ ಎಂದ ಅವರು, ಬಡವರಿಗೆ, ದೀನ ದಲಿತರಿಗೆ, ಅಸಂಘಟಿತರಿಗೆ ಧ್ವನಿ ಇಲ್ಲದವರಿಗೆ ಧ್ವನಿ ನೀಡುವುದರ ಜೊತೆಗೆ ಜೀತ ಪದ್ಧತಿಯನ್ನು ನಿರ್ಮೂಲನೆ ಮಾಡಿದ್ದಂತಹ ಏಕೈಕ ವ್ಯಕ್ತಿ. ಅರಸು ಅವರು ಮಾಡಿದಂತಹ ಸಮಾಜ ಸೇವೆ ಕೆಲಸಗಳು ಇಂದಿಗೂ ಅಜರಾಮರ. ದೇವರಾಜ ಅರಸು ನಂತರ ಬಡವರ ದೀನದಲಿತರ ಪರ ಕೆಲಸ ಮಾಡುತ್ತಿರುವುದು ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಎಂದರು.

ಅರಗು ಬಣ್ಣ ಮತ್ತು ಕಾರ್ಖಾನೆ ಮಾಜಿ ಅಧ್ಯಕ್ಷ ಹೆಚ್.ಎ.ವೆಂಕಟೇಶ್ ಮಾತನಾಡಿ, ಸಾಧಕರನ್ನು ಗುರುತಿಸಿ ಸನ್ಮಾನಿಸಿದರೆ ಅವರ ಪ್ರತಿಬಿಂಬ ಸಮಾಜದ ಮೇಲೆ ಬೀರುತ್ತದೆ. ಅರಸು ಅವರು ಭೂ ಸುಧಾರಣೆ ತರುವಲ್ಲಿ ಕ್ರಾಂತಿಕಾರಿ ಬದಲಾವಣೆ ಮಾಡಿದವರು. ಮುಖ್ಯಮಂತ್ರಿ ಆಗಿದ್ದಾಗ ಎಲ್ಲಾ ಹಿಂದುಳಿದ ವರ್ಗದವರಿಗೆ ಶಿಕ್ಷಣ, ಉನ್ನತ ಸ್ಥಾನ ಸಿಗುವಂತೆ ಮಾಡಿದರು. ಆದರೆ, ಅರಸು ಜನಾಂಗವನ್ನು ಹಿಂದುಳಿದವರ ಪಟ್ಟಿಗೆ ಸೇರಿಸಲಿಲ್ಲ. ಹಾಲಿ ಇರುವ ಮೀಸಲಾತಿ 1994ರಲ್ಲಿ ರೂಪಿಸಿದ್ದು, ಇದು ಅವೈಜ್ಞಾನಿಕವಾಗಿದೆ. ಅರಸು ನಂತರ ಯಾವುದೇ ಸರ್ಕಾರ ಹಿಂದುಳಿದ ವರ್ಗಗಳ ಆಯೋಗದ ವರದಿ ಸ್ವೀಕರಿಸುವ ಧೈರ್ಯ ಮಾಡಿಲ್ಲ. ಈಗಿನ ಸರ್ಕಾರ ಹಿಂದುಳಿದ ವರ್ಗಗಳ ಆಯೋಗದ ವರದಿಯನ್ನು ಸ್ವೀಕರಿಸಿ, ವೈಜ್ಞಾನಿಕವಾದ ಮೀಸಲಾತಿಯನ್ನು ಜಾರಿ ಮಾಡಬೇಕು ಎಂದು ಆಗ್ರಹಿಸಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಶ್ರೀ ಕ್ಷೇತ್ರ ಹೊರನಾಡು ಧರ್ಮಕರ್ತರಾದ ಶ್ರೀ ಜಿ.ಭೀಮೇಶ್ವರ ಜೋಶಿ ಮಾತನಾಡಿ, ಪ್ರಜಾಪ್ರಭುತ್ವದಲ್ಲಿ ಶಾಸಕಾಂಗ ಕಾರ್ಯಾಂಗ, ನ್ಯಾಯಾಂಗದ ಜೊತೆಗೆ ಪತ್ರಿಕಾರಂಗವೂ ಮುಖ್ಯ. ಪತ್ರಿಕಾ ರಂಗ ಸರಿಯಾಗಿ ಕೆಲಸ ಮಾಡಿದರೆ ಸಮಾಜದ ಪರಿವರ್ತನೆಗೆ ಕಾರಣವಾಗಬಹುದು. ಸಮಾಜಕ್ಕೆ ಸ್ಫೂರ್ತಿ ತುಂಬುವ ಸಕಾರಾತ್ಮಕ ಸುದ್ದಿಗಳನ್ನು ಒಳಪುಟಗಳಲ್ಲಿ ಯಾವುದೇ ಮೂಲೆಯಲ್ಲಿ ಹಾಕಿ, ನಕಾರಾತ್ಮಕ ಪರಿಣಾಮ ಬೀರುವ ಸುದ್ದಿಗಳನ್ನು ಮುಖಪುಟದಲ್ಲಿ ಹಾಕುವುದನ್ನು ಬಿಡಬೇಕು. ಸಮಾಜದಲ್ಲಿ ಶಾಂತಿ, ಸಾಮರಸ್ಯ, ಸೌಹಾರ್ದತೆ, ಸಮೃದ್ಧಿ ಒಡಮೂಡಲು ಮಾಧ್ಯಮಗಳು ದುಡಿಯಬೇಕು ಎಂದು ಸಲಹೆ ನೀಡಿದರು.

ಧ್ವನಿಕೊಟ್ಟ ದಣಿ ಪ್ರಶಸ್ತಿ : ಇದೇ ವೇಳೆ 'ಮೈಸೂರು ಮಿತ್ರ' ಪತ್ರಿಕೆಯ ಮುಖ್ಯ ವರದಿಗಾರ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಹಿರಿಯ ಪತ್ರಕರ್ತರಾದ ಟಿ.ವಿ. ರಾಜೇಶ್ವರ್, ಅಂಶಿ ಪ್ರಸನ್ನಕುಮಾರ್, ಕೆ. ನರಸಿಂಹಮೂರ್ತಿ, ಆರ್. ಕೃಷ್ಣ, ಛಾಯಾಗ್ರಾಹಕ ಎಂ.ಎ. ಶ್ರೀರಾಂ ಅವರಿಗೆ 'ಧ್ವನಿ ಕೊಟ್ಟ ಧಣಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ತವರು ಅರಸು ಸಂಸ್ಥೆ ಅಧ್ಯಕ್ಷರೂ, ಬೆಂಗಳೂರಿನ ಶ್ರೀ ಕಂಠೀರವ ಸ್ಟುಡಿಯೋ ಮಾಜಿ ಅಧ್ಯಕ್ಷೆ ವಿಜಯಲಕ್ಷ್ಮೀ ಅರಸ್, ಅನ್ವೇಷಣಾ ಸೇವಾ ಟ್ರಸ್ಟ್ ಸ್ಥಾಪಕ ಅಧ್ಯಕ್ಷ ಅಮರನಾಥ್ ರಾಜೇ ಅರಸ್, ಶತಮಾನೋತ್ಸವ ಸಂಭ್ರಮದ ಅರಸು ಮಂಡಳಿ ಅಧ್ಯಕ್ಷ ಹೆಚ್.ಎಂ.ಟಿ. ಲಿಂಗರಾಜೇ ಅರಸ್, ಚುಟುಕು ಸಾಹಿತಿ ಡಾ.ಎಂ.ಜಿ.ಆರ್. ಅರಸ್ ಹಾಗೂ ಇನ್ನಿತರು ಉಪಸ್ಥಿತರಿದ್ದರು.

ಮರಗಳ ಮೇಲೆ ಜಾಹಿರಾತು ಫಲಕ, ಸೀರಿಯಲ್ ಸೆಟ್ ಅಳವಡಿಸಿದರೆ ಅರಣ್ಯ ಇಲಾಖೆಯಿಂದ ಕ್ರಮ

- ಈಗಾಗಲೇ ಅಳವಡಿಸದಿದ್ದರೆ ತೆರವಿಗೆ ಫೆ.15ರವರೆಗೆ ಗಡುವು
- ಮೈಸೂರಲ್ಲಿ ಕಟ್ಟುನಿಟ್ಟಿನ ನಿಯಮ ಜಾರಿಗೊಳಿಸಲು ನಿರ್ಧಾರ

ಮೈಸೂರು,ಫೆ.2(ಎಂಟಿವೈ)– ಮೈಸೂರು ಸೇರಿದಂತೆ ಜಿಲ್ಲೆಯ ವಿವಿಧೆಡೆ ಮರಗಳ ಮೇಲೆ ಜಾಹಿರಾತು ಫಲಕ, ಸೀರಿಯಲ್ ಸೆಟ್ ಅಳವಡಿಕೆ ಹಾಗೂ ಕೇಬಲ್ ವೈರ್ ಕಟ್ಟುವುದನ್ನು ನಿಷೇಧಿಸಲಾಗಿದ್ದು, ಈಗಾಗಲೇ ಮರಗಳ ಮೇಲಿ ಹಾಕಿರುವ ಲೈಟ್, ಫಲಕ, ಕೇಬಲ್ ವೈರ್ ತೆರವಿಗೆ ಫೆ.15ರವರೆಗೆ ಗಡುವು ನೀಡಲಾಗಿದೆ.

ಮರಗಳ ಮೇಲೆ ಅಕ್ರಮವಾಗಿ ಅಳವಡಿಸಿರುವ ಸೀರಿಯಲ್ ಸೆಟ್, ಕೇಬಲ್ ವೈರ್ ಹಾಗೂ ಜಾಹಿರಾತು ಫಲಕದಿಂದಾಗಿ ಸಸ್ತನಿಗಳು, ಪಕ್ಷಿ ಸಂಕುಲಕ್ಕೆ ಹಾನಿಯಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ದಿಟ್ಟ ಕ್ರಮ ಕೈಗೊಂಡಿದೆ.



ವಾಣಿಜ್ಯ ಕಟ್ಟಡಗಳು, ಹೋಟೆಲ್, ರೆಸ್ಟೋರೆಂಟ್‌ಗಳ ಮುಂದೆ ಗ್ರಾಹಕರನ್ನು ಆಕರ್ಷಿಸಲು ಬಣ್ಣ ಬಣ್ಣದ ಲೈಟ್‌ಗಳನ್ನು ಅಳವಡಿಸಲಾಗಿದೆ. ಅಲ್ಲದೆ, ಮರಗಳಿಗೆ ಮೊಳೆ, ಸ್ಟ್ಯಾಪರ್ ಪಿನ್, ತಂತಿ ಸುತ್ತುವುದು, ರಾಡ್ ಹೊಡೆದು ಫಲಕ ಅಳವಡಿಸಲಾಗುತ್ತಿದೆ. ಇದರೊಂದಿಗೆ ಫ್ಲಾಶ್ ಕಾರ್ಡ್, ಕೇಬಲ್ ವೈರ್ ಅಳವಡಿಸಲಾಗಿದೆ. ಮರದ ಬುಡಗಳಿಗೆ ಕಾಂಕ್ರೀಟ್ ಇಂಟರ್‌ಲಾಕ್ ಅಳವಡಿಸಿ, ಬುಡ ಸಡಿಲಗೊಳಿಸಲಾಗುತ್ತಿದೆ. ಇದರಿಂದ ಮರ ಹಾಗೂ ಮರದ ಮೇಲೆ ಆಶ್ರಯ ಪಡೆದಿರುವ ಪಕ್ಷಿ ಸಂಕುಲ, ಕೀಟ ಸಂಕುಲ, ಸಸ್ತನಿಗಳ ಜೀವಕ್ಕೆ ಅಪಾಯವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದ್ದು, ಫೆ.15ರೊಳಗೆ ಮರಗಳ ಮೇಲೆ ಅಳವಡಿಸಿರುವ ಎಲ್ಲಾ ಫಲಕಗಳು, ಸೀರಿಯಲ್ ಸೆಟ್, ಕೇಬಲ್ ವೈರ್‌ಗಳನ್ನು ತೆರವುಗೊಳಿಸಬೇಕು. ಇಲ್ಲದಿದ್ದರೆ, ಕರ್ನಾಟಕ ಅರಣ್ಯ ಕಾಯ್ದೆ-1969, ವನ್ಯಜೀವಿ ಸಂರಕ್ಷಣಾ ಕಾಯ್ದೆ–1972 ಹಾಗೂ ತಿದ್ದುಪಡಿ ಕಾಯ್ದೆ–2022ರ ಸೆಕ್ಷನ್ ಅಡಿ ಕ್ರಮ ಕೈಗೊಳ್ಳುವುದಾಗಿ ಡಿಸಿಎಫ್ ಡಾ.ಬಸವರಾಜು ಎಚ್ಚರಿಕೆ ನೀಡಿದ್ದಾರೆ.

ಆರ್ಥಿಕತೆಯಲ್ಲಿ ದತ್ತಾಂಶಗಳ ಬಳಕೆ; ವಿಶ್ಲೇಷಣೆಯ ಅರಿವು ಅತ್ಯಗತ್ಯ

ಪ್ರೊ. ರೇಣುಕಾರ್ಯ ಅಭಿಪ್ರಾಯ

ಮೈಸೂರು, ಫೆ.2(ಬಿಎಲ್‌ಯು)– ಆರ್ಥಿಕತೆಯ ವಿವಿಧ ಸನ್ನಿವೇಶಗಳಲ್ಲಿ ದತ್ತಾಂಶಗಳ ಬಳಕೆ ಹಾಗೂ ವಿಶ್ಲೇಷಣೆಯ ಅರಿವು ಅತ್ಯಗತ್ಯ ಎಂದು ಪೂಜಾ ಭಾಗವತ್ ಮೆಮೊರಿಯಲ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಸಿ.ಕೆ. ರೇಣುಕಾರ್ಯ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸ ಗಂಗೋತ್ರಿಯ ಹೆಚ್‌ಆರ್ ಡಿಸಿ ಸಭಾಂಗಣದಲ್ಲಿ ನಡೆದ ಅನುಭವದ ಮೇಲೆ ಸಮಯ ಸರಣಿ ವಿಶ್ಲೇಷಣೆ ಕುರಿತ ಎರಡು ದಿನಗಳ ರಾಷ್ಟ್ರಮಟ್ಟದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಆರ್ಥಿಕತೆಯ ಬಗ್ಗೆ ಸ್ಪಷ್ಟವಾದ ಮಾಹಿತಿ ಕಲೆ ಹಾಕಲು ದತ್ತಾಂಶಗಳ ವಿಶ್ಲೇಷಣೆ ಅತ್ಯವಶ್ಯ ಎಂದು ಹೇಳಿದರು.

ದತ್ತಾಂಶಗಳ ವಿಶ್ಲೇಷಣೆ ಮಾಡಲು ಆಧುನಿಕ ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು. ಇದರಿಂದ ಕಠಿಣವಾದ ದತ್ತಾಂಶಗಳನ್ನು ಸರಳವಾಗಿ ವಿಶ್ಲೇಷಣೆ ಮಾಡಬಹುದು ಎಂದು ಸಲಹೆ ನೀಡಿದರು.

ಸರ್ಕಾರದ ಯಾವುದೇ ರೀತಿಯ ನೀತಿ ನಿಯಮಗಳನ್ನು ರೂಪಿಸುವಲ್ಲಿ ದತ್ತಾಂಶಗಳ ಸಂಗ್ರಹ ಹಾಗೂ ವಿಶ್ಲೇಷಣೆ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಪ್ರೊ.ರೇಣುಕಾರ್ಯ ತಿಳಿಸಿದರು.

ಈ ವೇಳೆ ಮಾತನಾಡಿದ ಮೈಸೂರು ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಕಳೆದ ಕೆಲವು ವರ್ಷಗಳ ಹಿಂದೆ ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಕೃಷಿ ಇಲಾಖೆಗೆ ಮೀಸಲಿದ್ದ 100 ಕೋಟಿ ಬಜೆಟ್‌ನಲ್ಲಿ ರೈತರಿಗೆ ಎಷ್ಟು ಬೆಳೆಸಾಲ ನೀಡಲಾಗುತ್ತಿತ್ತೊ, ಈಗ ಮೀಸಲಿರುವ ಸಾವಿರ ಕೋಟಿಗೂ ಮೀರಿದ ಬಜೆಟ್‌ನಲ್ಲೂ ಹಿಂದೆ ಇದ್ದಷ್ಟೇ ಬೆಳೆ ಸಾಲ ನೀಡಲಾಗುತ್ತಿದೆ ಎಂದು ಹೇಳಿದರು.

ನಾನು ಮೂಲತಃ ಗ್ರಾಮೀಣ ಪ್ರದೇಶದಿಂದ ಬಂದಿದ್ದೇನೆ. ಹಳ್ಳಿಗಾಡಿನ ಪರಿಸ್ಥಿತಿ ಏನೆಂದು ನನಗೆ ಸೂಕ್ಷ್ಮವಾಗಿ ತಿಳಿದಿದೆ. ಗ್ರಾಮೀಣ ಭಾಗದ ಜನರು ಬಹಳಷ್ಟು ಸಂಕಷ್ಟ ಎದುರಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಆಯವ್ಯಯದಲ್ಲಿ ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ದೊರೆಯಬೇಕು ಎಂದು ಪ್ರೊ.ಲೋಕನಾಥ್ ಹೇಳಿದರು.


ಮೈಸೂರು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ.ಎಂ.ಮಹೇಶ್, ಪ್ರೊ.ದಿನೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ವೀರ ಮಡಿವಾಳ ಮಾಚಿದೇವರ ಸಂಘದ ವತಿಯಿಂದ, ಕುಕ್ಕರಹಳ್ಳಿ ಸಮೀಪದ ಮಾಚಿದೇವರ ದೇವಸ್ಥಾನದಲ್ಲಿ, ಮಡಿವಾಳ ಮಾಚಿದೇವರ ಜಯಂತಿ ಆಚರಿಸಲಾಯಿತು. ಈ ವೇಳೆ ಚಾಮರಾಜ ಕ್ಷೇತ್ರ ಶಾಸಕ ಹರೀಶ್ ಗೌಡ ಅವರನ್ನು ಸನ್ಮಾನಿಸಲಾಯಿತು.

ಮೈಸೂರಿನಲ್ಲಿ ಪ್ರವೀಣ್ ಕ್ಯಾಪಿಟಲ್ ಪ್ರೈ. ಲಿಮಿಟೆಡ್‌ನ ಹೊಸ ಪ್ರಾದೇಶಿಕ ಕಚೇರಿಯ ಉದ್ಘಾಟನೆ

ಮೈಸೂರು, ಫೆ.2–ಪ್ರವೀಣ್ ಕ್ಯಾಪಿಟಲ್ ಪ್ರೈವೇಟ್ ಲಿಮಿಟೆಡ್‌ನ ಹೊಸ ಪ್ರಾದೇಶಿಕ ಕಚೇರಿಯ ಉದ್ಘಾಟನೆ ಮತ್ತು ಮೈಸೂರು ಶಾಖೆಯ ಸ್ಥಳಾಂತರ ಸಮಾರಂಭವನ್ನು ಮೈಸೂರಿನ ಪ್ರಶಾಂತ್ ಪ್ಲಾಜಾ, 4ನೇ ಮುಖ್ಯ, 5ನೇ ಕ್ರಾಸ್, ಸರಸ್ವತಿಪುರಂನಲ್ಲಿ ಗುರುವಾರದಂದು ಸಂಜೆ ಭೀಮಾ ಅಂಡ್ ಬ್ರದರ್ ಜ್ಯುವೆಲರ್ಸ್‌ನ ಎನ್.ಗೋಪಾಲ ಕೃಷ್ಣನ್ ಅವರು ಉದ್ಘಾಟಿಸಿದರು.



ಸಮಾರಂಭದಲ್ಲಿ ಪ್ರವೀಣ್ ಕ್ಯಾಪಿಟಲ್‌ನ ವ್ಯವಸ್ಥಾಪಕ ನಿರ್ದೇಶಕ ಕೆ.ಸತ್ಯಶಂಕರ್, ಕಾರ್ಯನಿರ್ವಾಹಕ ನಿರ್ದೇಶಕಿ ಶ್ರೀಮತಿ ರಂಜಿತಾ ಶಂಕರ್ ಮತ್ತು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಅಮೋಘ್ ಜೆ.ರೈ ಅವರು ಉಪಸ್ಥಿತರಿದ್ದರು.

ಸಂಸ್ಥೆಯು ಮುಂದಿನ 5 ವರ್ಷಗಳಲ್ಲಿ 1000 ಕೋಟಿ ವ್ಯವಹಾರವನ್ನು ನಡೆಸುವ ಗುರಿಯನ್ನು ಹೊಂದಿದೆ ಹಾಗೂ ಮುಂದಿನ ವರ್ಷದಲ್ಲಿ ಚಿನ್ನಾಭರಣ ಸಾಲ ಮತ್ತು ವ್ಯವಹಾರ ಸಾಲವನ್ನು ಪ್ರಾರಂಭಿಸಲಿದೆ ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ತಿಳಿಸಿದರು. 2025ರ ಸಾಲಿಗೆ ಕರ್ನಾಟಕದ ಪ್ರತಿ ಜಿಲ್ಲೆಯಲ್ಲಿ ಶಾಖೆಗಳನ್ನು ಪ್ರಾರಂಭಿಸಿ ಗ್ರಾಹಕರಿಗೆ ಹೆಚ್ಚಿನ ಸೌಲಭ್ಯಗಳನ್ನು ಸಂಸ್ಥೆಯು ನೀಡಲಿದೆ. ಹೆಚ್ಚಿನ ವಿವರಗಳಿಗೆ ಮೈಸೂರು ಶಾಖೆ ಸಂಖ್ಯೆ 9019925922ನ್ನು ಸಂಪರ್ಕಿಸಬಹುದು.

ಎಸ್. ಮೋಹನಕುಮಾರಿ ಪಿಎಚ್.ಡಿ ಪದವಿ



ಮೈಸೂರು, ಫೆ. 2– ಡಾ. ಎಂ. ಸುರೇಶ ಅವರ ಮಾರ್ಗದರ್ಶನದಲ್ಲಿ ಶ್ರೀಮತಿ ಎಸ್. ಮೋಹನಕುಮಾರಿ ಅವರು ಅರ್ಥಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಜಾಗತೀಕರಣ, ಖಾಸಗೀಕರಣದ ಪೈಪೋಟಿಯಲ್ಲಿ ರಂಗಭೂಮಿ ಕ್ಷೀಣ

ಸಂಗೀತ ವಿವಿ ಕುಲಪತಿ ನಾಗೇಶ್ ವಿ.ಬೆಟ್ಟಕೋಟೆ ಅಸಮಾಧಾನ

ಮೈಸೂರು, ಫೆ.2(ಬಿಎಲ್‌ಯು)– ಜಾಗತೀಕರಣ, ಖಾಸಗೀಕರಣದ ಪೈಪೋಟಿಯಲ್ಲಿ ರಂಗಭೂಮಿ ಚಟುವಟಿಕೆ ಕ್ಷೀಣಿಸುತ್ತಿದೆ ಎಂದು ಮೈಸೂರಿನ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾನಿಲಯದ ಕುಲಪತಿ ನಾಗೇಶ್ ವಿ.ಬೆಟ್ಟಕೋಟೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಮಾನಸ ಗಂಗೋತ್ರಿಯ ಲಲಿತ ಕಲಾ ರಂಗ ಮಂದಿರದಲ್ಲಿ ಇಂದಿನಿಂದ ಆರಂಭವಾದ ರಂಗಭೂಮಿ ಹಾಗೂ ರಂಗಭೂಮಿಯ ಪೂರಕ ಕಲೆಗಳ ಉಪನ್ಯಾಸ ಮಾಲಿಕೆ ಉದ್ಘಾಟಿಸಿ ಮಾತನಾಡಿದ ಅವರು, ನಾಟಕಗಳನ್ನು ವೀಕ್ಷಿಸಲು ಜನರು ಆಸಕ್ತಿ ತೋರುತ್ತಿದ್ದರೂ ರಂಗಭೂಮಿ ಚಟುವಟಿಕೆಗಳು ಮಾತ್ರ ಬಹಳ ಕಡಿಮೆಯಾಗುತ್ತಿವೆ ಎಂದು ಹೇಳಿದರು.


ಮೈಸೂರಿನ ಮಾನಸ ಗಂಗೋತ್ರಿಯ ಲಲಿತ ಕಲಾ ರಂಗ ಮಂದಿರದಲ್ಲಿ ಇಂದಿನಿಂದ ಆರಂಭವಾದ ರಂಗಭೂಮಿ ಹಾಗೂ ರಂಗಭೂಮಿಯ ಪೂರಕ ಕಲೆಗಳ ಉಪನ್ಯಾಸ ಮಾಲಿಕೆಯನ್ನು ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾನಿಲಯದ ಕುಲಪತಿ ನಾಗೇಶ್ ವಿ.ಬೆಟ್ಟಕೋಟೆ ಉದ್ಘಾಟಿಸಿದರು.

ತಂತ್ರಜ್ಞಾನ ಚಟುವಟಿಕೆಗಳಲ್ಲಿ ತಲ್ಲೀನರಾಗಿರುವ ಸಾಫ್ಟ್ ವೇರ್ ಇಂಜಿನಿಯರ್‌ಗಳು ಸೇರಿದಂತೆ ಶೇಕಡ 80 ರಷ್ಟು ಜನರು ನಾಟಕಗಳನ್ನು ವೀಕ್ಷಿಸಲು ಉತ್ಸುಕತೆ ತೋರುತ್ತಿದ್ದಾರೆ. ಈ ಮೊದಲು ಸಿನಿಮಾಗಳನ್ನು ವೀಕ್ಷಿಸಲು ಜನರು ಟಿಕೆಟ್‌ಗಾಗಿ ಮುಗಿಬೀಳುತ್ತಿದ್ದರು. ಆದರೆ ಈಗ ನಾಟಕಗಳನ್ನು ವೀಕ್ಷಿಸಲು ಟಿಕೆಟ್‌ಗಾಗಿ ಮುಗಿಬೀಳುವ ರಂಗಭೂಮಿ ಬೆಳವಣಿಗೆಯ ಒಳ್ಳೆಯ ವಾತಾವರಣ ನಿರ್ಮಾಣವಾಗಿದೆ. ರಂಗ ಪ್ರದರ್ಶನಗೊಳ್ಳುವ ಸಭಾಂಗಣವಂತೂ ಈಗ ಪೂರ್ಣವಾಗಿ ತುಂಬಿರುತ್ತದೆ. ಅಷ್ಟರ ಮಟ್ಟಿಗೆ ಜನರು ನಾಟಕಗಳನ್ನು ವೀಕ್ಷಿಸಲು ಆಸಕ್ತಿ ತೋರುತ್ತಿದ್ದಾರೆ ಎಂದು ಹೇಳಿದರು.

ಆದರೆ ರಂಗಭೂಮಿ ಚಟುವಟಿಕೆಗಳು ಹೆಚ್ಚಾಗದೆ ಕೊರತೆ ಎದ್ದು ಕಾಣುತ್ತಿದೆ. ಈ ಹಿನ್ನೆಲೆಯಲ್ಲಿ ರಂಗಭೂಮಿ ಚಟುವಟಿಕೆಗಳು ಹೆಚ್ಚಾಗಬೇಕು. ಈ ಮೂಲಕ ಅನಾದಿ ಕಾಲದ ರಂಗಭೂಮಿ ಉಳಿಯಬೇಕು, ಬೆಳೆಯಬೇಕು ಎಂದು ನಾಗೇಶ್ ಬೆಟ್ಟಕೋಟೆ ಸಲಹೆ ನೀಡಿದರು.

ವಿಶ್ವದ ಹಲವು ದೇಶಗಳಲ್ಲಿ ಭಾರತದ ರಂಗ ಕಲೆಯನ್ನು ಅನುಕರಿಸಲಾಗುತ್ತದೆ. ಆದರೆ ಭಾರತದಲ್ಲೆ ರಂಗ ಕಲೆಯ ಚಟುವಟಿಕೆಗಳು ಕಡಿಮೆಯಾಗುತ್ತಿದೆ. ಈ ಹಿನ್ನೆಲೆ ರಂಗಭೂಮಿ ಬಗ್ಗೆ ಒಲವಿರುವರು ಇದನ್ನು ಉತ್ತೇಜಿಸಬೇಕು ಎಂದು ಸಲಹೆ ನೀಡಿದರು.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸೇರಿದಂತೆ ಯಾವುದೇ ಚಳವಳಿಯಾಗಲಿ ಅದು ರಂಗಭೂಮಿಯಿಂದಲೇ ಜನ್ಮ ತಳೆದಿದೆ. ರಂಗಭೂಮಿ ಶಕ್ತಿ ಏನೆಂದು ಇದರಿಂದ ತಿಳಿಯುತ್ತದೆ. ಆದರೆ ಇದರ ಮಹತ್ವ ತಿಳಿಯದೆ ರಂಗಭೂಮಿ ಚಟುವಟಿಕೆ ಉತ್ತೇಜಿಸುತ್ತಿಲ್ಲ. ಇದಕ್ಕೆ ಇಚ್ಛಾಸಕ್ತಿ ಕೊರತೆ ಇದೆ ಎಂದು ನಾಗೇಶ್ ಬೆಟ್ಟಕೋಟೆ ಅಭಿಪ್ರಾಯಪಟ್ಟರು.

ರಂಗಭೂಮಿ ಕಲೆಯ ಅಸ್ಮಿತೆ ಉಳಿಸಿ, ಬೆಳೆಸಬೇಕು. ಇದಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ಸಂಪೂರ್ಣ ಸಹಕಾರ ನೀಡಲಿದೆ ಎಂದು ವಿಶ್ವವಿದ್ಯಾನಿಲಯದ ಕುಲಸಚಿವೆ ವಿ.ಆರ್.ಶೈಲಜಾ ಭರವಸೆ ನೀಡಿದರು.

ಆದರೆ ರಂಗಭೂಮಿ ಮಾತ್ರವಲ್ಲದೆ ಇತರೆ ಕಲೆಗಳ ಬಗ್ಗೆ ಆಸಕ್ತಿ ಕಡಿಮೆ ಯಾಗುತ್ತಿದೆ. ಲಲಿತ ಕಲಾ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕೂಡ ಕಡಿಮೆ ಯಾಗುತ್ತಿದೆ. ಈ ಹಿನ್ನೆಲೆ ಕಲೆಯ ಮಹತ್ವ ತಿಳಿದು ಇದನ್ನು ಉತ್ತೇಜಿಸಬೇಕು ಎಂದು ಸಲಹೆ ನೀಡಿದರು.

ಶ್ರೀ ಗುಬ್ಬಿ ವೀರಣ್ಣ ಪೀಠ, ಭಾರತೀಯ ರಂಗ ಶಿಕ್ಷಣ ಕೇಂದ್ರ, ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ ಸಂಯುಕ್ತವಾಗಿ ಆಯೋಜಿಸಿದ್ದ ರಂಗಭೂಮಿ ಹಾಗೂ ರಂಗಭೂಮಿಯ ಪೂರಕ ಕಲೆಗಳ ಉಪನ್ಯಾಸ ಮಾಲಿಕೆಯು ಮೈಸೂರಿನ ರಂಗಾಯಣದಲ್ಲಿ ಇಂದಿನಿಂದ ಆರಂಭವಾಗಿ ಫೆಬ್ರವರಿ 9 ರವರೆಗೆ ನಡೆಯಲಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ರಂಗಾಯಣದ ಉಪ ನಿರ್ದೇಶಕಿ ನಿರ್ಮಲಾ ಮಠಪತಿ, ಲಲಿತ ಕಲಾ ಕಾಲೇಜಿನ ಪ್ರಾಂಶುಪಾಲೆ ಪ್ರೊ.ಅನಿಟ ವಿಮ್ಲ ಬ್ರ್ಯಾಗ್ಸ್, ರಂಗ ತಜ್ಞ ಅರಸೀಕೆರೆ ಯೋಗಾನಂದ ಹಾಗೂ ರಾಮನಾಥ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ದೇಶ ವಿಭಜನೆ ಮನಸ್ಥಿತಿಗಳ ವಿರುದ್ಧ ಲೋಕ ಸಮರ

● ಪರಿಷತ್ ವಿಪಕ್ಷ ನಾಯಕ ಕೋಟ ಶ್ರೀನಿವಾಸ ಪೂಜಾರಿ ಹೇಳಿಕೆ ● ಬಿಜೆಪಿ ಜಿಲ್ಲಾ ಕಾರ್ಯಕಾರಿಣಿ ಸಭೆ



ಮಡಿಕೇರಿಯ ಕಾವೇರಿ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಅವರಿಗೆ ನಿರ್ಗಮಿತ ಅಧ್ಯಕ್ಷ ಪಳೆಯಂಡ ರಾಬಿನ್ ದೇವಯ್ಯ ಅಧಿಕಾರ ಹಸ್ತಾಂತರಿಸಿದರು. ಕೋಟ ಶ್ರೀನಿವಾಸ ಪೂಜಾರಿ, ಅಪ್ಪಚ್ಚು ರಂಜನ್, ಸುಜಾ ಕುಶಾಲಪ್ಪ ಇದ್ದಾರೆ.

ಮಡಿಕೇರಿ, ಫೆ.2–ರಾಷ್ಟ್ರದ ಅಖಂಡತೆಗಾಗಿ ಶ್ರಮಿಸುವ ಚಿಂತನೆ ಮತ್ತು ವಿಭಜನೆಯ ಮನಸ್ಥಿತಿಗಳ ನಡುವೆ ಈ ಬಾರಿ ಲೋಕಸಭಾ ಚುನಾವಣೆ ನಡೆಯಲಿದೆ ಎಂದು ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ನಗರದ ಕಾವೇರಿ ಹಾಲ್‌ನಲ್ಲಿ ಶುಕ್ರವಾರ ನಡೆದ ಬಿಜೆಪಿ ಜಿಲ್ಲಾ ಕಾರ್ಯಕಾರಿಣಿ ಸಭೆ ಮತ್ತು ಜಿಲ್ಲಾಧ್ಯಕ್ಷರ ಪದಗ್ರಹಣ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜನರನ್ನು ತಪ್ಪುದಾರಿಗೆ ಎಳೆಯುವ ಪ್ರಯತ್ನವಾಗಿ ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ದೇಶ ವಿಭಜನೆ ಕುರಿತು ಮಾತನಾಡಿದ್ದಾರೆ. ಅದು ಕೇವಲ ಅವರೊಬ್ಬರ ಮಾತಲ್ಲ, ಬದಲಾಗಿ ಕಾಂಗ್ರೆಸ್‌ನ ಎಲ್ಲರ ಮನಸ್ಥಿತಿ ಇದೇ. ಇಡೀ ರಾಷ್ಟ್ರವನ್ನು ಒಂದಾಗಿ ಬೆಸೆಯುವ ಬಿಜೆಪಿಯ ಉದಾತ್ತ ಚಿಂತನೆ ಮತ್ತು ವಿಭಜನೆಯ ಕಾಂಗ್ರೆಸ್ ಚಿಂತನೆಗಳು ಈ ಬಾರಿಯ ಲೋಕಸಭೆ ಚುನಾವಣೆಯಲ್ಲಿ ಮುಖಾಮುಖಿಯಾಗಲಿದೆ ಎಂದು ಹೇಳಿದರು.

> ಮಾಗಡಿ ಶಾಸಕರು ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅನ್ನು ಗೆಲ್ಲಿಸದಿದ್ದರೆ ಗ್ಯಾರಂಟಿ ರದ್ದು ಮಾಡಿವುದಾಗಿ ಕಾಂಗ್ರೆಸ್‌ನ ಅಂತರ್ಯದ ಮಾತುಗಳನ್ನಾಡಿದ್ದಾರೆ. ಇದು ನಿಜವೂ ಹೌದು. ಈ ಬಾರಿಯೂ ಲೋಕಸಭೆಯಲ್ಲಿ ಬಿಜೆಪಿ ಗೆಲ್ಲುವುದು ಕಾಂಗ್ರೆಸ್‌ಗೂ ಖಚಿತವಾಗಿದೆ. ಸ್ವಾಭಿಮಾನದ ಭಾರತ ನಿರ್ಮಾಣಕ್ಕೆ ಬಿಜೆಪಿಯ ಗೆಲುವಿಗೆ ಶ್ರಮಿಸಬೇಕು.
>
> – ಕೋಟ ಶ್ರೀನಿವಾಸ ಪೂಜಾರಿ, ವಿರೋಧ ಪಕ್ಷದ ನಾಯಕ

> ಮುಖ್ಯಮಂತ್ರಿ ಸಿದ್ದರಾಮಯ್ಯ ಕೊಡಗಿನಲ್ಲಿ ವಿವಿಧ ಅಭಿವೃದ್ಧಿ ಶಂಕುಸ್ಥಾಪನೆ, ಉದ್ಘಾಟನೆ ನೆರವೇರಿಸಿದ ಕಾಮಗಾರಿಗಳು ನಮ್ಮ ಸಕಾರದ ಕಾಮಗಾರಿಗಳಾಗಿವೆ. ಮಡಿಕಲ್ ಕಾಲೇಜು, ಸೈನಿಕ ಶಾಲೆ, ವಿಶ್ವವಿದ್ಯಾನಿಲಯ ಸ್ಥಾಪನೆಯನ್ನು ಮಾಡಿದ್ದು ಯಾರು? ನಾವು ಮಾಡಿದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸಿದ್ದರಾಮಯ್ಯ ಅವರೊಂದಿಗೆ ಚರ್ಚೆಗೆ ಸಿದ್ಧ.
>
> –ಅಪ್ಪಚ್ಚು ರಂಜನ್, ಮಾಜಿ ಶಾಸಕ

ಇದು ಬದಲಾದ ಭಾರತ: ಜಮ್ಮು–ಕಾಶ್ಮೀರದ 370ನೇ ವಿಧಿಯನ್ನು ರದ್ದುಗೊಳಿಸಬೇಕೆನ್ನುವ ಬೇಡಿಕೆ ಅಂದಿನ ಜನಸಂಘದ ನಾಯಕರದ್ದಾಗಿದ್ದರು, ಅದು ಈಡೇರಬಹುದೆನ್ನುವ ಭಾವನೆಗಳಿರಲಿಲ್ಲ. ಅದೇ ರೀತಿ ತೊಂಭತ್ತರ ದಶಕದಲ್ಲಿ ಲಾಲ್‌ಕೃಷ್ಣ ಅಡ್ವಾಣಿ ಅವರು ರಾಮನ ರಥಯಾತ್ರೆಯನ್ನು ಮಾಡುವ ಹಂತದಲ್ಲಿ ಮುಂದೊಮ್ಮೆ ಅಯೋಧ್ಯೆಯಲ್ಲಿ ಶ್ರೀರಾಮನ ದೇಗುಲ ತಲೆ ಎತ್ತಬಹುದೆಂದು ಊಹಿಸಿರಲಿಲ್ಲ. ಅಂತಹ ಪರಿಸ್ಥಿತಿಗಳಿಂದ ಹೊರ ಬಂದು ಭಾರತೀಯ ಜನತಾ ಪಾರ್ಟಿ ಅಗಾದವಾಗಿ ಬೆಳೆದು ನಿಂತಿದ್ದು, ಶ್ರೀಸಾಮಾನ್ಯರನ್ನು ತಲುಪಿದ ಪಕ್ಷವಾಗಿದೆ. ನರೇಂದ್ರ ಮೋದಿ ಪ್ರಧಾನಿಯಾದ ಬಳಿಕ ಸಾಧಿಸಿದ ಅಭಿವೃದ್ಧಿಗಳು ಇಂದು ಇಡೀ ಜಗತ್ತೆ ದಿಗ್ಭ್ರಮೆಗೊಳ್ಳುವಂತೆ ಮಾಡಿದೆ. 'ಇದು ಬದಲಾದ ಭಾರತ' ಎಂದು ಸಂತಸ ವ್ಯಕ್ತಪಡಿಸಿದರು.

ಕನಸುಗಳು ನನಸಾಗಿದೆ: ರಾಮ ಮಂದಿರಕ್ಕೆ ದಶಕಗಳ ಹಿಂದೆ ಸಂಗ್ರಹಿಸಿದ ಇಟ್ಟಿಗೆ, ಕಬ್ಬಿಣದಿಂದ ಮಾಡಿದ್ದೇನು ಎನ್ನುವ ಪ್ರಶ್ನೆಗಳು ಕೇಳಿ ಬರುತಿತ್ತು. ಪ್ರಸ್ತುತ ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ನಮ್ಮ ಬದುಕಿನಲ್ಲೇ ನಡೆದಿರುವ ಹೆಮ್ಮೆ ಮತ್ತು ಸಂತಸ ತಮ್ಮದಾಗಿದ್ದು, ಹಿಂದೆ ಕಂಡಿದ್ದ ಕನಸು ಇಂದು ನನಸಾಗಿದೆ ಎಂದರು.

ನೀವೆಷ್ಟು ಪರಿಹಾರ ನೀಡಿದ್ದೀರಾ?: ರಾಜ್ಯ ಬರದ ಸಂಕಷ್ಟದಲ್ಲಿ ಸಿಲುಕಿರುವ ಹಂತದಲ್ಲಿ ಕೇಂದ್ರದತ್ತ ಬೊಟ್ಟು ಮಾಡಿ ಪರಿಹಾರ ನೀಡಿಲ್ಲವೆಂದು ಆರೋಪಿಸುವ ಮುಖ್ಯಮಂತ್ರಿ ಸಿದ್ದರಾಮಯ್ಯ ಎಷ್ಟು ಪರಿಹಾರ ಒದಗಿಸಿದ್ದಾರೆ? ಎಂದು ಪ್ರಶ್ನಿಸಿದರು. ಇದೀಗ ಬಿಡುಗಡೆ ಮಾಡಿರುವ 350 ಕೋಟಿ ರೂ. ಪರಿಹಾರದಲ್ಲಿ ಶೇ.75 ರಷ್ಟು ಕೇಂದ್ರದ್ದೇ. ಬರದ ಪರಿಸ್ಥಿತಿಗಳ ನಡುವೆ ರಾಜ್ಯ ಸರ್ಕಾರ ಕನಿಷ್ಠ ಗೋ ಶಾಲೆಗಳನ್ನು ಸಮರ್ಪಕವಾಗಿ ಸಿದ್ಧಪಡಿಸಿಲ್ಲ. ಕಾಂಗ್ರೆಸ್‌ನ ಕಳೆದ 8 ತಿಂಗಳ ಅಧಿಕಾರ ಅವಧಿಯಲ್ಲಿ 8 ಮೀಟರ್ ರಸ್ತೆ ಕೂಡ ನಿರ್ಮಿಸಿಲ್ಲವೆಂದು ಟೀಕಿಸಿದರು.

ಬಿಜೆಪಿ ರಾಜ್ಯ ಕಾರ್ಯದರ್ಶಿ ಕ್ಯಾಪ್ಟನ್ ಬ್ರಿಜೇಶ್ ಚೌಟ ಮಾತನಾಡಿ, ಮುಂದಿನ 25 ವರ್ಷ ಭಾರತಕ್ಕೆ ಅಮೃತ ಕಾಲವೆಂದು ಪ್ರಧಾನಿ ಮೋದಿ ತಿಳಿಸಿದ್ದಾರೆ. ಅದಕ್ಕೆ ಪೂರಕವಾಗಿ 2047ರ ಹೊತ್ತಿಗೆ ವಿಕಸಿತ ಭಾರತದ ಪರಿಕಲ್ಪನೆಯ ಸಾಕಾರಕ್ಕೆ ಮುನ್ನುಡಿ ಬರೆಯುವ ಆಯವ್ಯಯವನ್ನು ಕೇಂದ್ರ ಸರ್ಕಾರ ಮಂಡಿಸಿದೆ ಎಂದು ತಿಳಿಸಿದರು.

ಎಂಎಲ್‌ಸಿ ಸುಜಾ ಕುಶಾಲಪ್ಪ ಮಾತನಾಡಿದರು. ಇದೇ ಸಂದರ್ಭ ಕೊಡಗು ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಅವರಿಗೆ ನಿರ್ಗಮಿತ ಅಧ್ಯಕ್ಷ ಪಳೆಯಂಡ ರಾಬಿನ್ ದೇವಯ್ಯ ಅಧಿಕಾರ ಹಸ್ತಾಂತರಿಸಿದರು. ವೇದಿಕೆಯಲ್ಲಿ ಮಂಗಳೂರು ಪ್ರಭಾರ ಉದಯ ಕುಮಾರ್ ಶೆಟ್ಟಿ, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಬಿ.ಬಿ.ಭಾರತೀಶ್, ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ರೀನಾ ಪ್ರಕಾಶ್, ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ, ಮಡಿಕೇರಿ ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಕೆಡಿಸಿಸಿ ಬ್ಯಾಂಕ್ ಅಧ್ಯಕ್ಷ ಬಾಂಡ್ ಗಣಪತಿ ಉಪಸ್ಥಿತರಿದ್ದರು.

ಕುಂಡ್ಯೋಳಂಡ ಕೊಡವ ಕೌಟುಂಬಿಕ ಹಾಕಿ ಉತ್ಸವದ

ಮೈದಾನ ಪೂರ್ವ ತಯಾರಿಗೆ ಭೂಮಿಪೂಜೆ



ನಾಪೋಕ್ಲುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಕುಂಡ್ಯೋಳಂಡ ಕೊಡವ ಕೌಟುಂಬಿಕ ಹಾಕಿ ಉತ್ಸವದ ಮೈದಾನದ ಪೂರ್ವ ತಯಾರಿಗೆ ಕುಂಡ್ಯೋಳಂಡ ಕುಟುಂಬದ ಪಟ್ಟೆದಾರ ಎಸ್.ಸುಬ್ಬಯ್ಯ ಭೂಮಿಪೂಜೆ ನೆರವೇರಿಸಿದರು.

ನಾಪೋಕ್ಲು, ಫೆ.2–ಕುಂಡ್ಯೋಳಂಡ ಕೊಡವ ಕೌಟುಂಬಿಕ ಹಾಕಿ ಉತ್ಸವ–2024ರ ಯಶಸ್ವಿಯಾಗಿ ಸಂಘಟಿಸಲು ಕುಂಡ್ಯೋಳಂಡ ಕುಟುಂಬಸ್ಥರಿಂದ ಸಕಲ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಹಾಕಿ ಉತ್ಸವ ಸಮಿತಿ ಅಧ್ಯಕ್ಷ ರಮೇಶ್ ಮುದ್ದಯ್ಯ ಹೇಳಿದರು.

ಇಲ್ಲಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಶುಕ್ರವಾರ ಮೈದಾನದ ಪೂರ್ವ ತಯಾರಿ ಭೂಮಿಪೂಜೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೊಡವ ಹಾಕಿ ಅಕಾಡೆಮಿಯ ಅನುಮತಿ ಮೇರೆಗೆ ಕೊಡವ ಕೌಟುಂಬಿಕ ಹಾಕಿ ಉತ್ಸವ ಏಪ್ರಿಲ್‌ನಲ್ಲಿ ನಡೆಯಲಿದೆ. ಗ್ಯಾಲರಿ ನಿರ್ಮಾಣ, ಮೈದಾನ ಸಿದ್ಧತೆ ಸೇರಿದಂತೆ ವಿವಿಧ ಕಾರ್ಯಗಳನ್ನು ಕೈಗೆತ್ತಿಕೊಡಲಾಗುವುದು. ಇದಕ್ಕೂ ಮುನ್ನ ಮೈದಾನದ ಸಿದ್ಧತೆಗೆ ಭೂಮಿಪೂಜೆ ನೆರವೇರಿಸಿ, ಯಾವುದೇ ವಿಘ್ನಗಳು ಆಗದಂತೆ ಗುರು ಹಾಗೂ ದೈವಗಳನ್ನು ಪ್ರಾರ್ಥಿಸಿಕೊಳ್ಳಲಾಗಿದೆ ಎಂದರು.

ಕುಟುಂಬದ ಪಟ್ಟೆದಾರ ಎಸ್.ಸುಬ್ಬಯ್ಯ, ವಿಶೇಷ ಪ್ರಾರ್ಥನೆ ಮಾಡಿ ಭೂಮಿಪೂಜೆ ನೆರವೇರಿಸಿದರು. ಈ ಸಂದರ್ಭ ಹಾಕಿ ಉತ್ಸವದ ಸಂಚಾಲಕ ದಿನೇಶ್ ಕಾರ್ಯಪ್ಪ, ಖಜಾಂಚಿ ವಿಷು ಪೂವಯ್ಯ, ಕಾರ್ಯದರ್ಶಿ ಬಿ.ಪಿನ್.ಬೆಳ್ಳಿಯಪ್ಪ, ಪಂದ್ಯಾವಳಿಯ ನಿರ್ದೇಶಕ ಅಂಜಪರವಂಡ ಕುಶಾಲಪ್ಪ, ಕೆಪಿಎಸ್ ಶಾಲಾ ಪ್ರಾಂಶುಪಾಲೆ ವಿಶಾಲ ಕುಶಾಲಪ್ಪ, ಉಪಪ್ರಾಂಶುಪಾಲ ಎಂ.ಎಸ್. ಶಿವಣ್ಣ, ಶಿಕ್ಷಕಿ ಉಷಾರಾಣಿ ಹಾಗೂ ಕುಂಡ್ಯೋಳಂಡ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು.

ಇದಕ್ಕೂ ಮೊದಲು ಕೊಳಕೇರಿಯಲ್ಲಿರುವ ಕುಟುಂಬದ ಕೈಮಾಡ ಹಾಗೂ ಗ್ರಾಮ ದೇವತೆ ಶ್ರೀ ಭಗವತಿ ದೇವಸ್ಥಾನದಲ್ಲಿ ವಿಶೇಷ ಪ್ರಾರ್ಥನೆ ಹಾಗೂ ಪೂಜೆ ಸಲ್ಲಿಸಲಾಯಿತು. ಪೂಜಾ ವಿಧಿವಿಧಾನಗಳನ್ನು ದೇವಾಲಯದ ಅರ್ಚಕ ಸೀತಾರಾಮ್ ಭಟ್ ನೆರವೇರಿಸಿದರು.

ಮಕ್ಕಳ ರಚಿತ ಮಕರಂದ ಕೃತಿ ಬಿಡುಗಡೆ



ಕುಶಾಲನಗರ ಸಮೀಪದ ರಂಗಸಮುದ್ರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಕ್ಕಳ ರಚಿತ ಮಕರಂದ ಕೃತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಭಾಗಮ್ಮ ಅನಾವರಣಗೊಳಿಸಿದರು.

ಕುಶಾಲನಗರ, ಫೆ.2–ಸಮೀಪದ ರಂಗಸಮುದ್ರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಸ್ತುಪ್ರದರ್ಶನ, ಮಕ್ಕಳ ಸ್ವರಚಿತ ಕವನ ಹಾಗೂ ಓದುವ ಪುಸ್ತಕಗಳ ಕಾರ್ಯಕ್ರಮದಲ್ಲಿ ಮಕರಂದ ಎಂಬ ಶೀರ್ಷಿಕೆಯಡಿ ರಚಿತವಾದ ಮಕ್ಕಳ ಕೃತಿಯನ್ನು ಅನಾವರಣಗೊಳಿಸಲಾಯಿತು.

ಕೃತಿ ಬಿಡುಗಡೆಗೊಳಿಸಿ ಮಾತನಾಡಿದ ಸೋಮವಾರಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿ ಭಾಗಮ್ಮ, ಶಿಕ್ಷಕರು ಅರ್ಪಣಾ ಮನಸ್ಸಿನಿಂದ ತೊಡಗಿಸಿಕೊಂಡರೆ ಸರ್ಕಾರಿ ಶಾಲೆಯ ಅಭಿವೃದ್ಧಿ ಸಾಧ್ಯ. ಮಕ್ಕಳ ಬೆಳವಣಿಗೆಗೆ ಈ ರೀತಿಯ ವಿವಿಧ ಪಠ್ಯೇತರ ಚಟುವಟಿಕೆಗಳು ಅಗತ್ಯ. ಸ್ವತಃ ಮಕ್ಕಳೇ ಕವಿತೆ ರಚಿಸಿರುವುದು ಶ್ಲಾಘನೀಯ. ಎಲ್ಲಾ ಶಾಲೆಗಳು ಈ ರೀತಿಯ ಕಾರ್ಯಕ್ರಮ ಹಮ್ಮಿಕೊಳ್ಳುವಂತೆ ಆಗಬೇಕು ಎಂದರು.

ಕೊಡಗು ಜಿಲ್ಲಾ ಪ್ರಾಥಮಿಕ ಶಾಲೆಯ ಸಹಶಿಕ್ಷಕರ ಸಂಘದ ಅಧ್ಯಕ್ಷ ಎಚ್.ಎನ್. ಮಂಜುನಾಥ್ ಕಾರ್ಯಕ್ರಮ ಉದ್ಘಾಟಿಸಿದರು. ಶಿಕ್ಷಕಿ ರಮ್ಯಾ ಮೂರ್ನಾಡು ಕೃತಿಯ ಕುರಿತು ಅನಿಸಿಕೆ ವ್ಯಕ್ತಪಡಿಸಿದರು. ಸಾಹಿತಿ ಕೃಪಾದೇವರಾಜ್ ಮಾತನಾಡಿದರು. ಸೋಮವಾರಪೇಟೆ ತಾಲೂಕು ಶಿಕ್ಷಕ ಸಂಘದ ಅಧ್ಯಕ್ಷ ಬಸವರಾಜು, ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ಕೇಶವ, ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳಾದ ಸುಷ್ಮಾ, ವೈಶಾಲಿ, ಮುಖ್ಯಶಿಕ್ಷಕಿ ಲೀಲಾವತಿ, ಸಹ ಶಿಕ್ಷಕರಾದ ಸುನೀತಾ, ವೀಣಾ, ರಜನಿ, ಪವಿತ್ರಾ ಹಾಗೂ ಪೋಷಕರು ಪಾಲ್ಗೊಂಡಿದ್ದರು.

ಗುಂಡಿಗೆರೆ–ಕೆದಮುಳ್ಳೂರು ಕಾಂಕ್ರೀಟ್ ರಸ್ತೆ ಉದ್ಘಾಟನೆ



ಬೋಟೋಳಿ ಗ್ರಾಪಂ ವ್ಯಾಪ್ತಿಯ ಗುಂಡಿಗೆರೆ–ಕೆದಮುಳ್ಳೂರು ಕಾಂಕ್ರೀಟ್ ರಸ್ತೆಯನ್ನು ಗ್ರಾಪಂ ಅಧ್ಯಕ್ಷ ಎ.ಎಂ.ಬೋಪಣ್ಣ ಉದ್ಘಾಟಿಸಿದರು.

ವಿರಾಜಪೇಟೆ,ಫೆ.2–ಪರಿಶಿಷ್ಟ ಜಾತಿ ಮತ್ತು ಪಂಗಡದ ಅನುದಾನದಲ್ಲಿ ನಿರ್ಮಿಸಿರುವ ಸಮೀಪದ ಬೋಟೋಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗುಂಡಿಗೆರೆ–ಕೆದಮುಳ್ಳೂರು ಕಾಂಕ್ರೀಟ್ ರಸ್ತೆಯನ್ನು ಗ್ರಾಪಂ ಅಧ್ಯಕ್ಷ ಎ.ಎಂ.ಬೋಪಣ್ಣ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಮೊದಲು ಗ್ರಾಮೀಣ ಭಾಗದ ರಸ್ತೆಗಳ ಅಭಿವೃದ್ಧಿ ಆಗಬೇಕು. ಮುಂದಿನ ಅನುದಾನದಲ್ಲಿ ಉಳಿದಿರುವ ರಸ್ತೆಗಳನ್ನು ಹಂತ ಹಂತವಾಗಿ ಅಭಿವೃದ್ಧಿ ನಡೆಸಲಾಗುವುದು. ಗ್ರಾಮದ ಜನರಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲಾಗುವುದು ಎಂದರು. ಪಿಡಿಓ ಬಿ.ಮಣಿ, ಸದಸ್ಯರಾದ ಎಂ.ಎಂ. ರಜಾಕ್, ವಸಂತಕಟ್ಟಿ ಲತಾ, ಗ್ರಾಮಸ್ಥರು ಉಪಸ್ಥಿತರಿದ್ದರು.



ಮಡಿಕೇರಿ ನಗರದ ಮುಖ್ಯ ರಸ್ತೆಗೆ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ರೋಹನ್ ಬೋಪಣ್ಣ ಅವರ ಹೆಸರನ್ನು ನಾಮಕರಣ ಮಾಡುವಂತೆ ಒತ್ತಾಯಿಸಿ ಅಖಿಲ ಕೊಡವ ಸಮಾಜದ ವತಿಯಿಂದ ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ ಅವರಿಗೆ ಮನವಿ ಸಲ್ಲಿಸಲಾಯಿತು. ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ ಕಾವೇರಪ್ಪ, ಕಾರ್ಯದರ್ಶಿ ಕೀತಿಯಂಡ ವಿಜಯಕುಮಾರ್, ಜಂಟಿ ಕಾರ್ಯದರ್ಶಿ ಮೂವೇರ ರೇಖಾ ಪ್ರಕಾಶ್, ನಂದೇಟಿರ ರಾಜ ಮಾದಪ್ಪ ಇದ್ದರು.

ಹಿರೇಬೇಗೂರಿನಲ್ಲಿ ಮಡಿವಾಳ ಮಾಚಿದೇವರ ಜಯಂತಿ



ಹಿರೇಬೇಗೂರು ಗ್ರಾಮದಲ್ಲಿ ವೀರ ಮಡಿವಾಳ ಮಾಚಿದೇವರ ಜಯಂತಿ ಆಚರಿಸಲಾಯಿತು. ಶ್ರೀ ಚನ್ನಬಸವಸ್ವಾಮೀಜಿ, ಹರವೆ ಮಹದೇವಸ್ವಾಮಿ, ಹೆಚ್.ಪಿ.ಸೋಮಶೇಖರ್, ಗುರುಸ್ವಾಮಿ ಇದ್ದರು.

ಚಾಮರಾಜನಗರ, ಫೆ.2–12ನೇ ಶತಮಾನದ ಬಸವಣ್ಣನವರ ಸಮಕಾಲೀನ ಶರಣರಲ್ಲಿ ಮಡಿವಾಳ ಮಾಚಿದೇವರು ಒಬ್ಬರಾಗಿದ್ದರು ಎಂದು ಚಾಮರಾಜನಗರದ ಸಿದ್ದಮಲ್ಲೇಶ್ವರ ವಿರಕ್ತ ಮಠದ ಶ್ರೀ ಚನ್ನಬಸವಸ್ವಾಮೀಜಿ ಹೇಳಿದರು.

ತಾಲೂಕಿನ ಹಿರೇಬೇಗೂರು ಗ್ರಾಮದ ಮಡಿವಾಳರ ಬೀದಿಯಲ್ಲಿ ನಡದ ವೀರ ಮಡಿವಾಳ ಮಾಚಿದೇವರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕಾಯಕ ನಿಷ್ಠೆ, ದಾಸೋಹದಂತಹ ಮೌಲ್ಯಯುತವಾದ ಕಾಣಿಕೆ ನೀಡಿದ್ದು, 12ನೇ ಶತಮಾನದಲ್ಲಿ ಇಂತಹ ಶರಣರು ಹಾಗೂ ಮಹಾಪುರುಷರ ಮಾರ್ಗದರ್ಶನ ಹಾಗೂ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಸರ್ವರಿಗೂ ಸಮಪಾಲು, ಸಮಬಾಳು ಒದಗಿಸಲು ಬಸವ–ಮಾಚಿದೇವಾದಿ ಶರಣರು ಸಾಮಾಜಿಕ ಕ್ರಾಂತಿಯನ್ನೇ ಕೈಗೊಂಡರು. ಶರಣರ ಅಗ್ರಗಣ್ಯ ಬಳಗದಲ್ಲಿ ಮಡಿವಾಳ ಮಾಚಿದೇವರು ಅತ್ಯಂತ ಪ್ರಕಾಶಮಾನವರು. ಬದುಕಿನ ಸಾತ್ವಿಕತೆ ನೀಡಿ ಸತ್ಯ, ಶುದ್ಧ ಕಾಯಕ ಕೊಟ್ಟವರಾಗಿದ್ದಾರೆ. ಸಮಾಜದಲ್ಲಿ ಜಾತಿ ಮುಖ್ಯವಲ್ಲ, ಜೀವನ ಮುಖ್ಯ ಎಂದು ತೋರಿಸಿ ಕೊಟ್ಟಿದ್ದಾರೆ. ಮಾಚಿದೇವರು 354 ವಚನಗಳನ್ನು ಬರೆದಿದ್ದಾರೆ ಎಂದು ಸ್ಮರಿಸಿದರು.

ಸಾಹಿತಿ ಹರವೆ ಮಹದೇವಸ್ವಾಮಿ ಪ್ರವಚನ ನೀಡಿದರು. ಕಾರ್ಯಕ್ರಮದಲ್ಲಿ ತಾಪಂ ಮಾಜಿ ಸದಸ್ಯ ಹೆಚ್.ಪಿ.ಸೋಮಶೇಖರ್, ಗ್ರಾಪಂ ಮಾಜಿ ಅಧ್ಯಕ್ಷ ಗುರುಸ್ವಾಮಿ, ಗೌಡಿಕೆ ಪ್ರಸಾದ್, ಜನಾಂಗದ ಯಜಮಾನ ಪುಟ್ಟಣ್ಣ, ಗ್ರಾಮದ ಮುಖಂಡರು ಹಾಜರಿದ್ದರು.

ಜಿಲ್ಲಾಧಿಕಾರಿ ಕಚೇರಿ ಎದುರು ರೈತರ ಪ್ರತಿಭಟನೆ

ಈರುಳ್ಳಿ ರಪ್ತು ನಿಷೇಧ ಆದೇಶ ರದ್ದುಪಡಿಸುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯ



ಈರುಳ್ಳಿ ರಪ್ತು ನಿಷೇಧ ಆದೇಶ ರದ್ದುಪಡಿಸುವಂತೆ ಒತ್ತಾಯಿಸಿ ರಾಜ್ಯ ಅರಿಶಿಣ ಬೆಳೆಗಾರರ ಒಕ್ಕೂಟ ಹಾಗೂ ರೈತ ಸಂಘದ ವತಿಯಿಂದ ಚಾಮರಾಜನಗರ ಡಿಸಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ, ಫೆ.2–ಕೇಂದ್ರ ಸರ್ಕಾರ ಈರುಳ್ಳಿ ರಫ್ತು ನಿಷೇಧ ಆದೇಶವನ್ನು ರದ್ದುಪಡಿಸುವಂತೆ ಒತ್ತಾಯಿಸಿ ರಾಜ್ಯ ಅರಿಶಿಣ ಬೆಳೆಗಾರರ ಒಕ್ಕೂಟ ಹಾಗೂ ರೈತ ಸಂಘದ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಗುಂಡ್ಲುಪೇಟೆಯಿಂದ ಆಗಮಿಸಿದ ರೈತರು, ನಗರದ ಚಾಮರಾಜೇಶ್ವರ ದೇವಾಲಯದಿಂದ ಮೆರವಣಿಗೆ ಹೊರಟು, ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿದರು. ಜಿಲ್ಲಾಡಳಿತ ಭವನದ ಎದುರು ಧರಣಿ ನಡೆಸಲು ಪೊಲೀಸರು ಅವಕಾಶ ನೀಡದಿದ್ದಾಗ, ರಸ್ತೆಯಲ್ಲೇ ಧರಣಿ ಕುಳಿತಿದ್ದರು. ಬಳಿಕ ಭವನದ ಮುಂದೆ ಹೋಗಲು ಅವಕಾಶ ನೀಡಲಾಯಿತು. ಧರಣಿ ನಡೆಸಿದ ರೈತರು, ಕೇಂದ್ರ ಸರ್ಕಾರ ಹಾಗೂ ರಾಜ್ಯದ 28 ಸಂಸದರ ವಿರುದ್ಧ ಘೋಷಣೆ ಕೂಗಿದರು.

ಅರಿಶಿಣ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ನಾಗಾರ್ಜುನ ಕುಮಾರ್ ಮಾತನಾಡಿ, ಕೇಂದ್ರ ಸರ್ಕಾರ ಡಿ.7ರಿಂದ ಮಾ.31ರವರೆಗೆ ಈರುಳ್ಳಿ ರಫ್ತು ನಿಷೇಧಿಸಿದೆ. ಇದನ್ನು ಜೂನ್ ವರೆಗೂ ವಿಸ್ತರಿಸಲು ನಿರ್ಧರಿಸಿದೆ. ಇದರಿಂದ ಈರುಳ್ಳಿ ಬೆಲೆ ಪಾತಾಳಕ್ಕೆ ಕುಸಿದಿದ್ದು, ರೈತರು ನಷ್ಟ ಅನುಭವಿಸುತ್ತಿದ್ದಾರೆ. ಆದ್ದರಿಂದ ಕೇಂದ್ರ ಸರ್ಕಾರ ನಿಷೇಧವನ್ನು ಕೂಡಲೆ ಹಿಂಪಡೆಯಬೇಕೆಂದು ಆಗ್ರಹಿಸಿದರು.

ದೇಶಾದ್ಯಂತ 70 ಸಾವಿರ ಕೋಟಿ ರೂ. ಬೆಲೆಯ ಈರುಳ್ಳಿ ಬೆಳೆಯಲಾಗುತ್ತದೆ. ಇದರಲ್ಲಿ ಶೇ.40ರಷ್ಟು ರಫ್ತಾಗುತ್ತದೆ. ಕೇಂದ್ರ ಸರ್ಕಾರ ರಫ್ತು ನಿಷೇಧ ಮಾಡಿದ್ದರಿಂದ ಈರುಳ್ಳಿ ಬೆಳೆಗಾರರು ಬೆಲೆ ಕುಸಿತದಿಂದ ಕಂಗಾಲಾಗಿದ್ದಾರೆ. ಇದು ರೈತರಿಗೆ ಮರಣ ಶಾಸನವಾಗಿದೆ. ನಿಷೇಧಕ್ಕೂ ಮೊದಲು ಕೆಜಿ ಈರುಳ್ಳಿಗೆ 60 ರೂ. ಇತ್ತು. ಈಗ 6 ರೂ.ಗೆ ಇಳಿದಿದೆ ಎಂದು ದೂರಿದರು.

ಒಂದು ಕೆಜಿ ಈರುಳ್ಳಿ ಬೆಳೆಯಲು 20 ರೂ. ಖರ್ಚಾಗುತ್ತದೆ. ಬೆಲೆ ಮಾತ್ರ 6 ರೂ. ಇದೆ. ರೈತರು ಏನು ಮಾಡಬೇಕು? ರಫ್ತು ನಿಷೇಧ ಜೂನ್ ತನಕ ವಿಸ್ತರಣೆ ಆಗಲಿದೆ. ಇದಲ್ಲದೆ ಮುಂಗಾರು ಮಳೆಗಾಲದಲ್ಲಿ ಇನ್ನೊಂದು ಬೆಳೆ ಈರುಳ್ಳಿಯನ್ನು ಬೆಳೆಯಲಾಗುತ್ತಿದೆ. ಈಗ ಬೆಳೆದಿರುವ ಈರುಳ್ಳಿಯೇ ಉಳಿದಿರುವುದರಿಂದ ಹೊಸದಾಗಿ ಬರುವ ಈರುಳ್ಳಿ ದರ ಮತ್ತಷ್ಟು ಪಾತಾಳ ತಲುಪಲಿದೆ.

> ಈಗ ಈರುಳ್ಳಿ ಮಾರಲು ತಮಿಳುನಾಡಿನ ಮೆಟ್ಟುಪಾಳ್ಯಂಗೆ ಹೋಗಬೇಕಾಗಿದೆ. ಅಲ್ಲಿ ಭಾಷೆ ಮತ್ತು ದಲ್ಲಾಳಿಗಳ ಸಮಸ್ಯೆಯಿಂದ ಸರಿಯಾದ ಬೆಲೆ ದೊರಕುತ್ತಿಲ್ಲ. ಹಾಗಾಗಿ ಜಿಲ್ಲೆಯಲ್ಲೇ ಈರುಳ್ಳಿ ಮಾರುಕಟ್ಟೆ ಸ್ಥಾಪಿಸಬೇಕು. ಈರುಳ್ಳಿ ದಾಸ್ತಾನು ಮಾಡಲು ಗೋದಾಮು ಸ್ಥಾಪಿಸಬೇಕು.
>
> – ನಾಗಾರ್ಜುನ ಕುಮಾರ್, ಅರಿಶಿಣ ಬೆಳೆಗಾರರ ಒಕ್ಕೂಟದ ಅಧ್ಯಕ್ಷ

ದೇಶದಲ್ಲೇ ಕರ್ನಾಟಕ ಈರುಳ್ಳಿ ಬೆಳೆಯುವ 3ನೇ ರಾಜ್ಯವಾಗಿದೆ. ಜಿಲ್ಲೆಯಲ್ಲಿ 10 ಸಾವಿರ ಎಕರೆಯಲ್ಲಿ ಈರುಳ್ಳಿ ನಾಟಿ ಮಾಡಲಾಗುತ್ತದೆ. 20 ದಿನಗಳ ಹಿಂದೆ ಕ್ವಿಂಟಾಲ್ ಈರುಳ್ಳಿ ದರ 3–4 ಸಾವಿರ ರೂ. ಇತ್ತು. ಈಗ 600 ರಿಂದ 700 ರೂ.ಗೆ ಕುಸಿದಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬಳಿಕ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ರೈತ ಸಂಘದ ಮುಖಂಡರಾದ ಕುಂದಕೆರೆ ಸಂಪತ್ತು, ಕೆ.ಎನ್. ಶಿವಪ್ರಸಾದ್, ಮಾದಪ್ಪ, ಚಂದ್ರಶೇಖರಮೂರ್ತಿ, ಎನ್.ಎಂ.ಗಂಗಾಧರಪ್ಪ, ಎಚ್.ಎಸ್.ನಂಜುಂಡಸ್ವಾಮಿ, ಎಚ್.ಪಿ.ಮಹೇಂದ್ರ, ಎಚ್.ಸಿ.ಸತೀಶ್, ಕೆ.ಬಿ. ರೇಚಪ್ಪ, ಸಿ.ಎಸ್.ವೃಷಬೇಂದ್ರ ಭಾಗವಹಿಸಿದ್ದರು.

ಮೊದಲ ಪೂಜೆಗೆ ಅವಕಾಶ ನೀಡದಿದ್ದರೆ ಬೀಗ ಒಡೆಯುವ ಎಚ್ಚರಿಕೆ



ಚಾಮರಾಜನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಉಮ್ಮತ್ತೂರು ಉರುಕಾತೇಶ್ವರಿ ಅಮ್ಮನವರ ದೇವಸ್ಥಾನ ಮಂಡಳಿಯ ಅಧ್ಯಕ್ಷ ಎಸ್.ಗುರುಮಲ್ಲಪ್ಪ ಮಾತನಾಡಿದರು.

ಚಾಮರಾಜನಗರ: ಉಮ್ಮತ್ತೂರು ಶ್ರೀ ಉರುಕಾತೇಶ್ವರಿ ದೇವಸ್ಥಾನದ ಕೀಲಿಕೈ ಹಾಗೂ ಬ್ಯಾಂಕ್ ಖಾತೆ ನಿರ್ವಹಣೆಯನ್ನು ತಾಲೂಕು ಆಡಳಿತ ನೀಡದಿದ್ದರೆ ನ್ಯಾಯಾಲಯದ ಆದೇಶದಂತೆ ದೇವಸ್ಥಾನ ಬೀಗ ಒಡೆದು ಪೂಜೆ ಸಲ್ಲಿಸುವುದಾಗಿ ಶ್ರೀ ಉರುಕಾತೇಶ್ವರಿ ಅಮ್ಮನವರ ದೇವಸ್ಥಾನ ಮಂಡಳಿ ಅಧ್ಯಕ್ಷ ಎಸ್.ಗುರುಮಲ್ಲಪ್ಪ ಎಚ್ಚರಿಸಿದರು.

ಆಡಳಿತ ಮಂಡಳಿ ವಶದಲ್ಲಿದ್ದ ದೇವಸ್ಥಾನವನ್ನು ಜಿಲ್ಲಾಡಳಿತ ವಶಪಡಿಸಿಕೊಂಡು ಮುಜರಾಯಿಗೆ ವಹಿಸಿತ್ತು. ಉರುಕಾತೇಶ್ವರಿ ಅಮ್ಮನವರ ಭಕ್ತರ ಆಶಯದಂತೆ ಟ್ರಸ್ಟ್ ರಚನೆ ಮಾಡಿ ಯಾವುದೇ ಲೋಪ, ಭ್ರಷ್ಟಾಚಾರ ಹಾಗೂ ಹಣ ದುರುಪಯೋಗ ಮಾಡದೆ ನಿರ್ವಹಣೆ ಮಾಡಿಕೊಂಡು ಬರಲಾಗಿತ್ತು. ಆದರೆ, ಜಿಲ್ಲಾಡಳಿತ ಕೆಲವರ ಮಾತು ಕೇಳಿ ಟ್ರಸ್ಟ್ ವಶದಲ್ಲಿದ್ದ ದೇವಸ್ಥಾನವನ್ನು ಮುಜರಾಯಿ ಇಲಾಖೆಗೆ ಸೇರ್ಪಡೆ ಮಾಡಿಕೊಂಡಿತ್ತು. ಇದನ್ನು ಪ್ರಶ್ನಿಸಿ ಟ್ರಸ್ಟ್ ಹೈಕೋರ್ಟ್ ಮೊರೆ ಹೋಗಿದ್ದು, ನ್ಯಾಯಾಲಯ ಜ.18ರಂದು ಮುಜರಾಯಿ ಇಲಾಖೆಯ ಆದೇಶ ರದ್ದುಪಡಿಸಿದೆ. ಆದ್ದರಿಂದ ದೇವಸ್ಥಾನ ಮಂಡಳಿಗೆ ಹಸ್ತಾಂತರಿಸಬೇಕು ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ನ್ಯಾಯಾಲಯ ದೇವಸ್ಥಾನದ ಕೀಲಿಕೈ, ಕಾಣಿಕೆ, ಹುಂಡಿ ಹಣ, ದೇವಸ್ಥಾನಕ್ಕೆ ಸಂಬಂಧಪಟ್ಟ ಇನ್ನಿತರ ವಸ್ತು ಹಾಗೂ ದೇವಸ್ಥಾನದ ಎಲ್ಲಾ ಚಟುವಟಿಕೆಗಳನ್ನು ಟ್ರಸ್ಟ್‌ನವರಿಗೆ ನೀಡಬೇಕೆಂದು ಆದೇಶಿಸಿದೆ. ಈಗಾಗಲೇ ಟ್ರಸ್ಟ್‌ನ ಪದಾಧಿಕಾರಿಗಳು ನ್ಯಾಯಾಲಯದ ಆದೇಶದ ಪ್ರತಿಯೊಂದಿಗೆ ಜಿಲ್ಲಾಧಿಕಾರಿ ಹಾಗೂ ತಹಸೀಲ್ದಾರ್‌ಗೆ ನೀಡಲಾಗಿದೆ. ಅಪರ ಜಿಲ್ಲಾಧಿಕಾರಿ ಜ.29ರಂದು ತಹಸೀಲ್ದಾರ್‌ಗೆ ಪತ್ರ ಬರೆದು ಉಮ್ಮತ್ತೂರು ದೇವಸ್ಥಾನದ ಕೀಲಿಕೈ, ದೇವಸ್ಥಾನ ಬ್ಯಾಂಕ್ ಖಾತೆ ನಿರ್ವಹಿಸಲು ಟ್ರಸ್ಟ್‌ಗೆ ನೀಡುವಂತೆ ಸೂಚಿಸಿದ್ದಾರೆ ಎಂದರು.

ಹೀಗಾಗಿ ತಹಸೀಲ್ದಾರ್ ತಕ್ಷಣ ಬೀಗ ನೀಡಿ, ದೇವಸ್ಥಾನದ ಸಂಪೂರ್ಣ ಹೊಣೆಗಾರಿಕೆಯನ್ನು ಟ್ರಸ್ಟ್‌ಗೆ ಹಸ್ತಾಂತರಿಸಬೇಕು. ಇಲ್ಲದಿದ್ದರೆ, ಮಂಗಳವಾರ ದೇವಸ್ಥಾನದ ಬೀಗ ಒಡೆಯಬೇಕಾಗುತ್ತದೆ. ಗ್ರಾಮದಲ್ಲಿ ಯಾವುದೇ ಅಹಿತಕರ ಘಟನೆ ನಡೆದರೆ ತಹಶೀಲ್ದಾರ್ ನೇರ ಹೊಣೆಯಾಗುತ್ತಾರೆ ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್‌ನ ಕಾರ್ಯದರ್ಶಿ ಸಿದ್ದರಾಜಪ್ಪ, ಖಜಾಂಚಿ ಎಂ. ರಾಜೇಶ್, ಟ್ರಸ್ಟಿಗಳಾದ ಮಹದೇವಸ್ವಾಮಿ, ಕೆ.ರಾಮಣ್ಣ, ಎಸ್.ಉಮೇಶ್, ಲೋಕೇಶ್, ಸಿದ್ದಪ್ಪ, ಗ್ರಾಮದ ಮುಖಂಡರು ಇದ್ದರು.



ಚಾಮರಾಜನಗರದ ಸತ್ತಿ ರಸ್ತೆಯ ಲಾರಿ ನಿಲ್ದಾಣದ ಹತ್ತಿರ ಹೈಟೆಕ್ ಶೌಚಾಲಯ ನಿರ್ಮಾಣಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು. ನಗರಸಭಾ ಸದಸ್ಯರಾದ ಮಹೇಶ್, ಖಲೀಲ್ ಉಲ್ಲಾ, ಪೌರಾಯುಕ್ತ ಎಸ್.ವಿ.ರಾಮದಾಸ್, ಹಿರಿಯ ಆರೋಗ್ಯ ನಿರೀಕ್ಷಕ ಮಂಜುನಾಥ್, ಜೂನಿಯರ್ ಇಂಜಿನಿಯರ್ ರಾಜು ಮತ್ತು ಮಂಜುನಾಥ್ ಇತರರು ಇದ್ದರು.

ದ.ರಾ.ಬೇಂದ್ರೆ ಕನ್ನಡ ನಾಡಿನ ಅದ್ಭುತ ಪ್ರತಿಭೆ



ಚಾಮರಾಜನಗರದ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರ ಜನ್ಮದಿನ ಆಚರಿಸಲಾಯಿತು. ಸುರೇಶ್ ಎನ್.ಋಗ್ವೇದಿ, ಕಿಶೋರ್ ಕುಮಾರ್, ರವಿಚಂದ್ರ ಪ್ರಸಾದ್ ಇದ್ದರು.

ಚಾಮರಾಜನಗರ, ಫೆ.2– ದ.ರಾ. ಬೇಂದ್ರೆ ಅವರು ಕನ್ನಡ ನಾಡಿನ ಅದ್ಭುತ ಪ್ರತಿಭೆ. ಅವರ ಸಾಹಿತ್ಯ ಚಿಂತನೆಗಳು ಕನ್ನಡವನ್ನು ಶ್ರೀಮಂತಗೊಳಿಸಿ ವಿಶ್ವಖ್ಯಾತಿ ತಂದುಕೊಟ್ಟಿದೆ ಎಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸುರೇಶ್ ಎನ್.ಋಗ್ವೇದಿ ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ನಡೆದ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರ ಜನ್ಮದಿನಾಚರಣೆಯಲ್ಲಿ ಮಾತನಾಡಿದ ಅವರು, ವರಕವಿ, ವಿಶ್ವಕವಿ, ಶಬ್ದ ಗಾರುಡಿಗ, ಕನ್ನಡ ಸಾಹಿತ್ಯದ ಮೇರು ವ್ಯಕ್ತಿತ್ವ, ಸರಳ ಸಜ್ಜನಿಕೆ, ದೇಶ ಪ್ರೇಮದ ಸಾಹಿತಿ ಬೇಂದ್ರೆ ಅವರನ್ನು ನೆನೆಯುವುದೇ ಒಂದು ಪುಣ್ಯ. ಕನ್ನಡದ ಜನರನ್ನು ತಮ್ಮ ಕವನಗಳ ಮೂಲಕ ಮನಸೂರೆಗೊಳಿಸಿದ್ದಾರೆ. ಅವರ ಕವನಗಳನ್ನು ಗಾಯಕರು ಮತ್ತಷ್ಟು ವಿಶ್ವ ಪ್ರಸಿದ್ಧಿ ಮಾಡಿದ್ದಾರೆ ಎಂದರು.

ಬೇಂದ್ರೆಯವರ ಸಾಹಿತ್ಯ, ಕವನ, ನಾಟಕ, ವಿಮರ್ಶೆ ಜನಸಾಮಾನ್ಯರನ್ನು ತಲುಪಿ ವಿಶ್ವಪ್ರಸಿದ್ಧವಾಗಿವೆ. ಸ್ವಾತಂತ್ರ್ಯ ಚಳವಳಿಯ ಅವರ ನರಬಲಿ ಕವನ ಬ್ರಿಟಿಷ್ ಸರ್ಕಾರದ ಕೋಪಕ್ಕೆ ಕಾರಣವಾಗಿತ್ತು. ಸೆರೆಮನೆ ವಾಸ ಅನುಭವಿಸಿದ ಬೇಂದ್ರೆಯವರು ಅತ್ಯುತ್ತಮ ವಾಗ್ಮಿಯಾಗಿದ್ದರು. ಅವರ ಚಿಂತನೆಗಳು ಅಧ್ಯಾತ್ಮಿಕತೆ, ಶಾಸ್ತ್ರೀಯ, ಗ್ರಾಮೀಣ, ಜನಪದ ಹಾಗೂ ಸಾಮಾನ್ಯರ ಆಡು ಭಾಷೆಯ ನುಡಿಗಟ್ಟುಗಳ ಮೂಲಕ ಇಂದಿಗೂ ಜನಪ್ರಿಯವಾಗಿರುವುದನ್ನು ಕಾಣಬಹುದು. ಕನ್ನಡದ ಟಾಗೋರ್ ಎಂದೇ ಪ್ರಸಿದ್ಧಿಯಾಗಿದ್ದ ಬೇಂದ್ರೆ ಅವರ ನಾಡಿನ ಪ್ರೇಮ, ಸಾಹಿತ್ಯ, ರಚನೆ ಯುವಕರಿಗೆ ಆದರ್ಶವಾಗಿವೆ ಎಂದು ತಿಳಿಸಿದರು. ಕನ್ನಡ ಸಾಹಿತ್ಯ ಪರಿಷತ್‌ನ ಕಿಶೋರ್ ಕುಮಾರ್, ರವಿಚಂದ್ರ ಪ್ರಸಾದ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಬಿ.ಕೆ.ಆರಾಧ್ಯ, ವೆಂಕಟೇಶ್ ಬಾಬು, ಸುರೇಶ್‌ಗೌಡ, ಬೊಮ್ಮಾಯಿ ತಾಂಡವಮೂರ್ತಿ, ಮುಂತಾದವರು ಉಪಸ್ಥಿತರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

WANTED CAR DRIVER
ಕಾರ್ ಡ್ರೈವರ್ 8 ಗಂಟೆ ಕೆಲಸಕ್ಕೆ ವಿದ್ಯಾರಣ್ಯಪುರಂ ಹತ್ತಿರದ ಮನೆಗೆ ಬೇಕಾಗಿದ್ದಾರೆ.
9880102700

Join as Insurance Advisors
* House Wife
* Rentired Perons
* Self Employed
(No Exams)
9110861343
Get upto 20% Discount on life Insurance Plans

ಗೀರ್ ಹಸುವಿನ ಸಗಣಿ & ಪಂಚಗವ್ಯ



ದಿಂದ ತಯಾರಿಸಿದ Organice ಪೂಜಾ ಸಾಮಾಗ್ರಿಗಳು ಮಾರಾಟಕ್ಕಿವೆ.
ಸಾಮಥುವ ಬಳಿಸಿ ಆರೋಗ್ಯವಾರಿ
ನಮ್ಮಲ್ಲಿ ದೊರೆಯುವ ಪದಾರ್ಥಗಳು
- 3 in1 ಅಗರಬತ್ತಿ
- ಸಾಂಬ್ರಾಣಿ ಕಪ್ (Cup)
- ಪಂಚಗವ್ಯ ದೀಪಗಳು
63666 31233

WANTED
OFFICE BOY
Qualification IInd PUC
2 Wheelar DL Compulsory
7259016512
7259016509

MUDAALLOTMENT SITE FOR SALE
40X60 South facing Site For Sale at J P Nagar Nachanahalli Koppalur (40ft Road) Opp. Sumithra Steel Contact : Vishwanath Gowda
9590911111

WANTED
Native spring Wanted sales Girls & Delivery boys Contact number
9035207195

ವೃದ್ಧಾಶ್ರಮ
ಮಹಿಳೆಯರು ಮತ್ತು ಪುರಷರಿಗಾಗಿ ವೃದ್ಧರನ್ನು ಎಲ್ಲಾ ರೀತಿಯ ಸೌಲಭ್ಯದೊಂದಿಗೆ ಮತ್ತು ಉತ್ತಮ ರೀತಿಯಲ್ಲಿ ಆರೈಕೆ ಮಾಡಲಾಗುವುದು
9980183405/6364693043

HOUSE FOR SALE
40x63, New house Jnanaganga L/o Muda Approved Near Harividyalaya School Bogadi, Mysuru
9482883566

SITE FOR SALE
N/F 40x60, Near Ring Road IIIrd Stage, Police Layout
7019769205

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

DTCP SITES FOR SALE
DTCP Sites
Rs. 699 per sq.ft., Near Jayapura, H.D. Kote Road, Mysore.
9590491194,9606783264

ವಿಠಲ್ ರೆಕಾರ್ಡ್ಸ್ ಪ್ರೈವೇಟ್ ಲಿಮಿಟೆಡ್
ಖಾಲಿ ಹುದ್ದೆ: 150+
DATA ENTRY OPERATOR
ಸಂಬಳ 10,000 + 5000 Incentive
ಸಂದರ್ಶನದ ಸಮಯ: 9.30 ರಿಂದ 5.30.
ವಿಳಾಸ: #42, JCK ಇಂಡಸ್ಟ್ರಿಯಲ್ ಪಾರ್ಕ್, ಮೇಟಗಳ್ಳಿ ಪೋಸ್ಟ್, ಪ್ರೀತಿ ಗ್ರಾನೈಟ್ ಹತ್ತಿರ, ಕೆ.ಆರ್.ಎಸ್. ರಸ್ತೆ, ಮೈಸೂರು–570 016. ಕರೆ ಮಾಡಿ:
Mob: 8867064586

CATERING
SWAADHA SAMPADA
Catering Services
VEG
6363436728

Change of Name
I, Seetharam Sunitha, residing at #27/1, 2nd Cross, Vinayaka Nagar, Mysore-570 012 have changed my name from Seetharam Sunitha to Sunitha Ramesh vide affidavit sworn before Notary A.M. Sumithra, Mysuru, dated 19-01-2024

ಬೇಕಾಗಿದ್ದಾರೆ
ಫರ್ನಿಶಿಂಗ್ ಅಂಗಡಿಯಲ್ಲಿ Telecaller ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
Salary - 12K to 15K
Address : Akbar Road, Near Ashoka Road
9916514950

WANTED
Telecallers Wanted for a reputed Software Company Arohaka Technologies Pvt Ltd at Hebbal, Mysuru. Fluency in Kannada, English, Hindi, Tamil and Telugu Languages with 2+Years experience.
9019029036

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

Pay Just 3 Lakhs
& Own Your Dream Sites
- Balance through Bank Loan
- Behind Airport
- 600 to 1200 Sqft Area
- Starts from 9 Lakhs

Nidhi Estates 78991 28100 99026 69880

MUDA & RERA APPROVED 30X40 SITE FOR SALE
West facing @ 2300/Sqft
North Facing @ 2500 Sqft
Near Kit Eng. Collage, Next to Lalbahadur Shastri Nagar, off. T-Narasipura Main Road, Immediate Registration & Bank Loan Available
7337786007

30x65 Vidyaranyapuram Commercial Site
Old Demolish House, North-East Corner for sale.
Price: 2.28 Cr.
Sewage Farm Road, 60 Feet Road.
Mob: 8660105902

SITES FOR SALE J.P. NAGAR RING ROAD
20x30 - 17 Lakhs
30x40 - 33 Lakhs
NEAR GURUR BUS STOP, RAMABAINAGAR, MYSORE.
DTCP Approved (Corporation Limits)
1.5 Kms from JP Nagar Ring Road.
8660105902

SITE FOR SALE
20x30, 30x40, 30x50 Just 2 Km. Bogadi, Main Road, K.M.Halli
9141506267

ಮನೆ ಬಾಡಿಗೆಗೆ ಇದೆ
20x30, 2BHK, Ist Floor with Solar, # 2354, 2nd 'B' Main D.Block, Kanakadasanagar, Dattagalli
9448433936

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8861401315

Change of Name
I, Mohammed Uquail Abu, residing at No. 323, 1st Floor, 2nd Stage, Bannimantap, Mysuru-570 015, have changed my name as Mohammed Uqail, on my own free will, in front of Notary C.R. Seetharam on 1-2-2024. I hereby declare that I shall at all times hereafter in all records and in all actions and upon all occasions whatsoever use and sign the assumed name Mohammed Uqail.
Sd/- Mohammed Uqail

MUDA Approved Sites
BOGADI ROAD
28x30, 30x40
Corner & West (2) Sites
Price: Rs. 47 Lakhs
Near Trends Apartment
Mob: 8660105902

HOUSE SALE
Near Vijayanagar 4th Stage 3 BHK Duplex 3 years old house, E/F Door
Price: 1.15 Cr.
Near SVEI School, Panchacharya Layout.
Mob: 8660105902

ಬೇಕಾಗಿದ್ದಾರೆ
ಗೂಡ್ಸ್ ವೆಹಿಕಲ್‌ಗೆ ಡ್ರೈವರ್ CUM ಹೆಲ್ಪರ್ ಬೇಕಾಗಿದ್ದಾರೆ.
ಸಂಬಳ: 12000 ರಿಂದ 15000 ವಸತಿ ಉಚಿತ.
9342118153

WANTED
Male / Female BE/Civil, Experienced in Billing, Estimation & Office Work
Location: Gayathripuram Mysore
9448044290
9945362868

ಅನುಬಂಧ ಮ್ಯಾರೇಜಸ್
ವಧುವರರನ್ನು ಹುಡುಕಲು ಸಹಾಯ ಬೇಕೆ? ನಮಗೆ ಕರೆ ಮಾಡಿ
6361740552
Computer Lady Receptionist ಬೇಕಾಗಿದ್ದಾರೆ.

ಕೊಳ್ಳೇಗಾಲದ ಜ್ಯೋತಿಷ್ಯರು
ಜ್ಯೋತಿಷ್ಯ ರತ್ನ ಮೋಡಿ ಮಾಂತ್ರಿಕ ಪಂ॥ ಎಸ್.ಕೆ. ಪ್ರಶಾಂತ್ ಆಚಾರ್ಯ
ಮೊ: 9740947045
ಸ್ತ್ರೀ ಪುರುಷ ಪ್ರೇಮ, ಸಂತಾನ, ವಿವಾಹ, ದಾಂಪತ್ಯ ಸಮಸ್ಯೆ, ನಾಗದೋಷ, ಕುಜದೋಷ, ದುಷ್ಟಶಕ್ತಿ, ಪ್ರೇತಬಾಧೆ, ಸಾಲಬಾಧೆ, ವ್ಯಾಪಾರದಲ್ಲಿ ತೊಂದರೆ ತನ್ನವರೆ ತನಗೆ ಶತ್ರು ನಿಮ್ಮ ಯಾವುದೇ ಗುಪ್ತ ಹಾಗೂ ಕಠಿಣವಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಮಾಡುತ್ತಾರೆ. ಸ್ಥಳ: ಹೋಟೆಲ್ ಗೋವರ್ಧನ, ಡಾ॥ ರಾಜ್‌ಕುಮಾರ್ ಪಾರ್ಕ್ ಹತ್ತಿರ, ಶ್ರೀ ಹರ್ಷ ರಸ್ತೆ (ಹೊಸ ಸುಮಂಗಲಿ ಸಿಲ್ಕ್ಸ್ ಹತ್ತಿರ), ಮೈಸೂರು.

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

Sudarshan Saur
SOLAR WATER HEATER



ATTRACTIVE OFFER
ಸೇಲ್ಸ್ & ಸರ್ವೀಸ್
10 years Guarantee
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

100% TEAK WOOD FACTORY FINISH DOORS @ DEPOT RATES



10 YEARS WARRANTY
www.ssbuildmart.com
9901291267
9845426862

ಸರ್ವೀಸ್ ಅಪಾರ್ಟ್ಮೆಂಟ್ ನಡೆಸಲು ನಿವೇಶನ ಬೇಕಾಗಿದೆ
ಪ್ಯಾಲೆಸ್‌ನಿಂದ 4 ಕಿಲೋಮೀಟರ್ ದೂರದಲ್ಲಿ ಇರಬೇಕು.
1 ಅಥವಾ 2 ಬೆಡ್‌ರೂಂ ಇರುವ ಇಂಡಿಪೆಂಡೆಂಟ್ ಮನೆ ಅಥವಾ ರೂಂ ಬೇಕಾಗಿದೆ.
9164427143
7411223692

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಆಟೋಮೊಬೈಲ್ ಕಂಪನಿಗೆ ಬೇಕಾಗಿದ್ದಾರೆ.
ಮಾರ್ಕೆಟಿಂಗ್ ಸೇಲ್ಸ್ ಎಕ್ಸಿಕ್ಯೂಟೀವ್
ಕೂಡಲೇ ಸಂಪರ್ಕಿಸಿ:
9743647484
starmysoreresume@gmail.com

ಬೇಕಾಗಿದ್ದಾರೆ
ಸ್ಟಿಕ್ಕರ್ ಪೇಸ್ಟ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
ಸಂಬಳ 12000/-
Ph.7406 369 369

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ದಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

WANTED FOR Bhaskar Heart Centre

Post	Qualification
Receptionist	Degree / PUC
Marketing / PRO (M)	Degree / PUC
Staff Nurses (F)	GNM / ANM
Pharma Aid	PUC / Degree
Office Boy	SSLC

0821-2499188 / 9880186386

ಸೈಟು ಮಾರಾಟಕ್ಕಿದೆ
30x40 W/F
ಬಿಇಎಂಎಲ್ ಲೇಔಟ್, ರಾಜರಾಜೇಶ್ವರಿ ನಗರ
(Very good location)
9945562267

SITE FOR SALE
30x50 South Face near Rainbow School Bogadi-Gaddige Road, Mysore
8151977115

SNS ENTERPRISE
ಉಚಿತ ಕಂಪ್ಯೂಟರ್ ಕೋರ್ಸ್
Basic and C, C+
JAWA ಉಚಿತವಾಗಿ ಹೇಳಿಕೊಡಲಾಗುತ್ತದೆ.
ಸ್ಥಳ: ನಾಯ್ಡುನಗರ, ಮೈಸೂರು.
8792233195, 8122693131

WANTED
1) Receptionist - M/F
2) Sample Boy (Must have 2 wheeler)
3) Staff Nurse - Female
4) Lab Teach - Male
9243781906, 9845272844

FOR SALE
1) 30x50, 21 Lakhs Kote Road.
2) 20x30, 30x40 Bogadi Road
3) 2, 3 BHK flats in Ramakrishnanagar.
4) 10, 20 Guntas farm land KRS Back Water attach 19 Lakhs starts.
5) 20x30, 30x40 site Srirampura
6) 40x72 house Vidyaranyapuram.
7) 18x40, 40 Ft. Road Kuvempunagar.
PRAKRUTHI PROPERTIES
9538690359, 9035990359

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು.
Mob.: 9986926101

ಸೈಟುಗಳು ಮಾರಾಟಕ್ಕಿದೆ
30x40, 20x30 ದಟ್ಟಗಳ್ಳಿ
30x50, ಆದಿತ್ಯ ಸರ್ಕಲ್ ಹತ್ತಿರ
40x60 Site 60 Lakh,
30x40 Duplex New House
ಹಳೇ ಮನೆ / ಹೊಸ ಮನೆ ಸೈಟು ಮಾರುವವರು / ಕೊಳ್ಳುವವರು
Mob: 9945042875
ಶ್ರೀ ಬನಶಂಕರಿ ರಿಯಲ್ ಎಸ್ಟೇಟ್

SITE FOR SALE
20x30 W/F Muda Khata Dream City Layout, Near Bogadi, Mysore
7676831659

FOR RENT
1100 ಚದರ ಅಡಿಯುಳ್ಳ ಮಳಿಗೆ (Shop) ಬಾಡಿಗೆಗೆ ಇದೆ. ಶಾರದಾದೇವಿನಗರ ಅರ್ಕಿಡ್ಸ್ ಸ್ಕೂಲ್ ಹತ್ತಿರ, ಮೈಸೂರು
9844775166
9844775166

ಸೈಟು ಬೇಕಾಗಿದೆ
ಲಾಲ್‌ಬಹದ್ದೂರ್ ಶಾಸ್ತ್ರೀನಗರ, ವಸಂತನಗರ, ಶಾಂತವೇರಿ ಗೋಪಾಲಗೌಡ ನಗರ, ಸಪ್ತಮಾತೃಕ ಲೇಔಟ್, ಪೊಲೀಸ್ ಲೇಔಟ್, ಜೆ.ಎಸ್.ಎಸ್. ಲೇಔಟ್
Mob: 9844436672

MUDA ALLOTTED SITE FOR SALE
20 X 30 WEST, PARK FACING
HEBBAL 2ND STAGE,
9886653258

WANTED
airtel OFFICE WORK
MALE AND FEMALE
(FIXED SALERY + INCENTIVES)
PLACE: ELWALA - MYSORE
8861912946
9686888852

ಬೇಕಾಗಿದ್ದಾರೆ
ಮೈಸೂರು–ಕೊಡಗು–ಮಂಗಳೂರು ಮಾರ್ಗಗಳಲ್ಲಿ ದಿನ ನಿತ್ಯ ಸಂಚರಿಸುವ ಲಾರಿಗಳಲ್ಲಿ ಪಾರ್ಸಲ್ ವಿತರಿಸಲು ಯುವಕರು/ಡ್ರೈವರ್ ಬೇಕಾಗಿದ್ದಾರೆ. 1) ಡೆಲಿವರಿ ಬಾಯ್ ಆರಂಭಿಕ ವೇತನ 12,000. 2) ಹೆವಿ ಡ್ರೈವರ್ 18,000
9740408488

ವಿತರಕರು ಬೇಕಾಗಿದ್ದಾರೆ
ಸಾವಯವ ಕೃಷಿ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಲು, ಸಾವಯವ ಕೃಷಿ ಬಗ್ಗೆ ಮಾಹಿತಿ ನೀಡಿ ಡಾ.ಸಾಯಿಲ್ ಉತ್ಪನ್ನಗಳನ್ನು ರೈತರಿಗೆ ತಲುಪಿಸಲು ವಿತರಕರು (Distributor) ಬೇಕಾಗಿದ್ದಾರೆ. ಮೈಸೂರು, ಚಾಮರಾಜನಗರ ಜಿಲ್ಲೆಯ ಆಸಕ್ತ ಅಭ್ಯರ್ಥಿಗಳು ಸಂಪರ್ಕಿಸಿ
ಮೈಕ್ರೋಬಿ ಆಗ್ರೋಟೆಕ್ ಪ್ರೈವೆಟ್ ಲಿಮಿಟೆಡ್
2766, ಕನಕದಾಸ ನಗರ, ದಟ್ಟಗಳ್ಳಿ, ಮೈಸೂರು–570023
9606989780

ಮುಡಾ ಖಾತಾ ಸೈಟ್ ಸೇಲ್
ಈಸ್ಟ್ ಫೇಸಿಂಗ್, ಕಾರ್ನರ್ ಸೈಟ್ 1124 ಚದುರಡಿ, ಜ್ಞಾನಭಾರತಿ ಲೇಔಟ್ ಏರ್‌ಪೋರ್ಟ್ ಹಿಂಭಾಗದ ರಸ್ತೆ,
ಬೆಲೆ: 34 ಲಕ್ಷ
ಡೈರೆಕ್ಟ್ ಓನರ್
9342123373

ಮನೆ ಮಾರಾಟಕ್ಕಿದೆ
60x40 3BHK ಡ್ಯೂಪ್ಲೆಕ್ಸ್ ಮನೆ ಅಟ್ಯಾಚ್ ಬಾತ್‌ರೂಮ್ಸ್ & ವಾರ್ಡ್‌ರೂಬ್ಸ್ ಇಟಾಲಿಯನ್ ಕಿಚನ್ ವಿತ್ ಕಾರ್ ಗ್ಯಾರೇಜ್ 3 ಕಾರ್ ಪಾರ್ಕಿಂಗ್ ರಾಮಕೃಷ್ಣನಗರ ಆಂದೋಲನ ಸರ್ಕಲ್ ಪಕ್ಕದಲ್ಲಿ
9341624462

ಮನೆ ಕೆಲಸಕ್ಕೆ ಬೇಕಾಗಿದ್ದಾರೆ
ಇಲ್ಲಿಯೇ ಇರುವಂತವರು ಊಟ, ವಸತಿ, ಉಚಿತ ಆಕರ್ಷಕ ಸಂಬಳ, ಶೆಟ್ಟಿನಾಯಕನಹಳ್ಳಿ ಗದ್ದಿಗೆರೋಡ್ ಮೈಸೂರು
ಬಸ್ ನಂ:– 245–250–251–252
9686156396
9880546818

HOUSE FOR SALE
@ Muda Layout
2+1 BHK 20x30
South Facing Site East Facing Door Shanthaveri Gopalgowda Nagar, Mysore
9738884777
9740019514

HOUSE FOR SALE
33X40, Corporation Khata Near Sangama Circle 2nd Stage, Vijayanagar Well Built House 2+1 Bed Room, Bank loan Available
7000/- Sqft
9919917519

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.
97318 91409

SITE FOR SALE
1 KM - Near to Hunsur Mysore Road, Near Hunsur Bus Depo Backside 1/2 km Hunsuru
Rs. 23 Lakh (Nego)
9449679779

ಅಲ್ಟ್ರೇಷನ್ ಕೆಲಸ ಮಾಡಿಕೊಡಲಾಗುತ್ತದೆ
ಹಳೇಮನೆ ಕೆಲಸ ಮತ್ತು ಬಣ್ಣದ ಕೆಲಸ, ಗಾರೆ ರಿಪೇರಿ ಮತ್ತು ತಾರಸಿ ಸೋರುವಿಕೆ ಸರಿಪಡಿಸಿಕೊಡಲಾಗುತ್ತದೆ.
9880813586
6360884930

WANTED URGENTLY
Required Market Research Company Needs Graduates / under Graduates for Data Collection work in Mysuru H.Q Work Salary Rs. 18000+ Allowances
8147088818
9902926902

ಸೈಟು ಮಾರಾಟಕ್ಕಿದೆ
ಅಳತೆ: 16.28x19.56 ಪೂರ್ವ ಪಶ್ಚಿಮ
755+1786 ಉತ್ತರ ದಕ್ಷಿಣ
ಆರ್.ಆರ್.ನಗರ
9980996113
9008929023

HOUSE FOR RENT
1st Floor, 2BHK Vijayanagara 4th Stage, IInd Phase Door No. 8943
9731275880

ಮಾರಾಟ ಕಾರ್ಯನಿರ್ವಾಹಕರು
ಸಾವಯವ ಕೃಷಿ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಲು, ಸಾವಯವ ಕೃಷಿ ಬಗ್ಗೆ ಮಾಹಿತಿ ನೀಡಿ ಡಾ.ಸಾಯಿಲ್ ಉತ್ಪನ್ನಗಳನ್ನು ರೈತರಿಗೆ ತಲುಪಿಸಲು ಮಾರಾಟ ಕಾರ್ಯನಿರ್ವಾಹಕರು (Sales Executive) ಬೇಕಾಗಿದ್ದಾರೆ.
Qualification PUC / Any Degree
ಸಂಬಳ: 18000 ರಿಂದ 35000
ಮೈಸೂರು, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಯ ಆಸಕ್ತ ಅಭ್ಯರ್ಥಿಗಳು ಸಂಪರ್ಕಿಸಿ:
ಮೈಕ್ರೋಬಿ ಆಗ್ರೋಟೆಕ್ ಪ್ರೈವೆಟ್ ಲಿಮಿಟೆಡ್
2766, ಕನಕದಾಸ ನಗರ, ದಟ್ಟಗಳ್ಳಿ, ಮೈಸೂರು–570023
9606989720

ಮನೆ ಬಾಡಿಗೆಗೆ ಇದೆ
2ರೂಂವುಳ್ಳ 30x40 2ನೇ ಮಹಡಿ, ವಿಜಯನಗರ 4ನೇ ಹಂತ, ಮರಿಮಲ್ಲಪ್ಪ ಸ್ಕೂಲ್ ಹತ್ತಿರ
9206380489
8762577289

ಬೇಕಾಗಿದೆ
60x40, 30x50, 30x40 ಮನೆ ಅಥವಾ ಸೈಟು ಕುವೆಂಪುನಗರ, ಟಿಕೆ ಲೇಔಟ್ ಅಥವಾ ಸರಸ್ವತಿಪುರಂ
Brokers Excuse
7795264993

30x50 Site For Sale
KBL Gardenia Next Vijayanagar 4th Stage, Opp to Rashtrothana Public School, Mysore
9945181492

ತಕ್ಷಣ ಬೇಕಾಗಿದ್ದಾರೆ
ನೆಕ್ಸಸ್ ಮಾಲ್(Nexus Mall) ಮೈಸೂರಿನಲ್ಲಿರುವ ಜಾಕಿ (Jockey) ಶೋರೂಂನಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ.
ವಿದ್ಯಾರ್ಹತೆ: PUC & ಮೇಲ್ಪಟ್ಟು ಉತ್ತಮ ವೇತನ ಸೌಲಭ್ಯವಿರುತ್ತದೆ.
ವಯೋಮಿತಿ 18–30 ವರ್ಷ
8431588337

LIO SECURITY SERVICES
Security Required For School "8 hrs" Near Rammenahalli, Hanchya Sathagalli, Bannimantap
8951212305
9972910382

HOUSE FOR SALE
1) 20X30 Duplex 3BHK Vinayaka Enclave
2) 20x30 Duplex 3BHK Vijayanagara 4th Stage
Owner
9980745194

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು


ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಕೇರಳದ ಮಾನಂದವಾಡಿಯಲ್ಲಿ ಕೋಲಾಹಲ ಸೃಷ್ಟಿಸಿದ ಹಾಸನದ 'ತಣ್ಣೀರು'

●ವಸತಿ ಪ್ರದೇಶಕ್ಕೆ ನುಗ್ಗಿ ದಾಂಧಲೆ; ಜನ ತತ್ತರ ●ಜ.16ರಂದು ಹಾಸನದ ಬೇಲೂರು ಬಳಿ ಸೆರೆಯಾಗಿದ್ದ ●ಆನೆ ಹಿಡಿದು ರೇಡಿಯೋ ಕಾಲರ್ ಅಳವಡಿಸಿ, ಬಂಡೀಪುರದಲ್ಲಿ ಬಿಡುಗಡೆ ●ತಣ್ಣೀರಿಗೆ ಅರವಳಿಕೆ ಮದ್ದು ನೀಡಿ, ಸೆರೆ ಹಿಡಿದ ಕೇರಳ ಅರಣ್ಯ ಇಲಾಖೆ



ಕೇರಳದ ಬಾಳೆ ತೋಟವೊಂದರಲ್ಲಿ ಬಿಡು ಬಿಟ್ಟಿದ್ದ ಆನೆ



ಹಾಸನದಲ್ಲಿ ಸೆರೆ ಹಿಡಿದು ಸ್ಥಳಾಂತರಕ್ಕೆ ಸಾಗಿಸುತ್ತಿರುವುದು

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಫೆ.2– ಹಾಸನ ಜಿಲ್ಲೆಯ ಬೇಲೂರು ಬಳಿ ಸೆರೆ ಹಿಡಿದು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಬಿಡುಗಡೆ ಮಾಡಲಾಗಿದ್ದ 'ತಣ್ಣೀರು' ಕಾಡಾನೆ, ಕೇರಳದ ಮಾನಂದವಾಡಿ ಪಟ್ಟಣಕ್ಕೆ ಲಗ್ಗೆ ಇಟ್ಟು ದಿನವಿಡೀ ಆತಂಕ ಸೃಷ್ಟಿಸಿದ್ದು, ಕಾಡಿಗೆ ವಾಪಸ್ಸಾಗಲು ಹಿಂದೇಟು ಹಾಕುತ್ತಿದ್ದ ಹಿನ್ನೆಲೆಯಲ್ಲಿ ಕೇರಳ ಅರಣ್ಯಾಧಿಕಾರಿಗಳು ಈಗ ಸೆರೆ ಹಿಡಿದಿದ್ದು, ಮಧುಮಲೈ ಅರಣ್ಯ ಪ್ರದೇಶದ ಬಾರ್ಡರ್‌ನಲ್ಲಿ ಬಿಡುಗಡೆ ಮಾಡಲು ನಿರ್ಧರಿಸಿದ್ದಾರೆ.

ಹಾಸನದ ಯಸಳೂರು ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಆತಂಕ ಸೃಷ್ಟಿಸುತ್ತಿದ್ದ ಈ ಕಾಡಾನೆಗಳನ್ನು ಸೆರೆ ಹಿಡಿದು ಸ್ಥಳಾಂತರ ಮಾಡುವಂತೆ ನ್ಯಾಯಾಲಯ ನೀಡಿದ ಆದೇಶದ ಮೇರೆಗೆ ಅರಣ್ಯ ಇಲಾಖೆ, ಮಾರ್ಟಿನ್, ತಣ್ಣೀರು, ಕರಡಿ, ಕುಳ್ಳ, ಭೀಮ, ವಿಕ್ರಾಂತ್, ಸೀಗೆ ಸೇರಿದಂತೆ ಕೆಲ ಆನೆಗಳನ್ನು ಸೆರೆ ಹಿಡಿದು ಸ್ಥಳಾಂತರಿಸಲು ನಿರ್ಧರಿಸಿತ್ತು. ಈ ಹಿನ್ನೆಲೆಯಲ್ಲಿ ವಿಕ್ರಾಂತನನ್ನು ಸೆರೆ ಹಿಡಿಯುವ ಕಾರ್ಯಾಚರಣೆ ಆರಂಭಿಸಿದ ದಿನವೇ ಮದವೇರಿದ ಕಾಡಾನೆ ದಾಳಿಗೆ ದಸರಾ ಆನೆ ಅರ್ಜುನ ಬಲಿಯಾಗಿದ್ದ. ತಿಂಗಳ ಬಳಿಕ ದಸರಾ ಆನೆ ಕ್ಯಾಪ್ಟನ್ ಅಭಿಮನ್ಯು ನೇತೃತ್ವದಲ್ಲಿ ಕಾಡಾನೆ ಸೆರೆ ಕಾರ್ಯಾಚರಣೆಯಲ್ಲಿ ಮಾರ್ಟಿನ್, ತಣ್ಣೀರು ಹಾಗೂ ಕುಳ್ಳ ಆನೆಯನ್ನು ಸೆರೆ ಹಿಡಿದು ರೇಡಿಯೋ ಕಾಲರ್ ಅಳವಡಿಸಿ ಬಂಡೀಪುರ ಹಾಗೂ ನಾಗರಹೊಳೆ ಅರಣ್ಯದಲ್ಲಿ ಬಿಡುಗಡೆ ಮಾಡಲಾಗಿತ್ತು.

ಜ.16ರ ಮಧ್ಯರಾತ್ರಿಯೇ ಬಂಡೀಪುರದ ದಟ್ಟ ಅರಣ್ಯದಲ್ಲಿ ಬಿಡುಗಡೆ ಮಾಡಲಾಗಿದ್ದ 30ರಿಂದ 35 ವರ್ಷದ ತಣ್ಣೀರು ಆನೆ ಅರಣ್ಯದಲ್ಲೇ ವಿರಮಿಸುತ್ತಿತ್ತು. ರೇಡಿಯೋ ಕಾಲರ್ ಮಾಹಿತಿಯನ್ನು ಅರಣ್ಯ ಇಲಾಖೆ ಗಮನಿಸುತ್ತಿತ್ತು. ಆದರೆ, ಇಂದು ಬೆಳಗ್ಗೆ ಕರ್ನಾಟಕ ಗಡಿ ದಾಟಿ ಕೇರಳದತ್ತ ಸಾಗಿತ್ತು. ಬೆಳಗ್ಗೆ 8 ಗಂಟೆ ವೇಳೆಗೆ ಮಾನಂದವಾಡಿ ಪಟ್ಟಣ ಪ್ರವೇಶಿಸಿದ ರೇಡಿಯೋ ಕಾಲರ್‌ವುಳ್ಳ ಆನೆಯನ್ನು ಗಮನಿಸಿದ ಸ್ಥಳೀಯರು ಅರಣ್ಯ ಸಿಬ್ಬಂದಿಗೆ ಮಾಹಿತಿ ನೀಡಿದ್ದರು. ಜನ ವಸತಿ ಪ್ರದೇಶದ ಸುತ್ತಲೂ ತಿರುಗಾಡುತ್ತಿದ್ದ ಆನೆ ಗಮನಿಸಿದಾಗ ಅದು ಸೆರೆ ಹಿಡಿದು ಬಿಡುಗಡೆ ಮಾಡಿರುವ ಕಾಡಾನೆ ಎಂದು ದೃಢಪಟ್ಟಿತು. ಅಷ್ಟರಲ್ಲಾಗಲೇ ಕರ್ನಾಟಕದ ಅರಣ್ಯ ಸಿಬ್ಬಂದಿ ತಣ್ಣೀರಿನ ರೇಡಿಯೋ ಕಾಲರ್‌ನಿಂದ ದಾಖಲಾದ ಮಾಹಿತಿ ಪರಿಶೀಲಿಸಿದಾಗ ಅದು ಮಾನಂದವಾಡಿ ಕಡೆ ಇರುವುದು ಖಚಿತವಾಗಿತ್ತು.

ಕಾರ್ಯಾಚರಣೆ: ಮನೆಗಳ ಬಳಿಯೇ ಓಡಾಡುತ್ತಿದ್ದ ತಣ್ಣೀರನ್ನು ಕಾಡಿಗೆ ಅಟ್ಟುವ ಕಾರ್ಯಾಚರಣೆ ಆರಂಭಿಸಿದರು. ಆದರೆ, ಅದು ಕಾಡಿನ ಕಡೆ ಮುಖ ಮಾಡದೆ ಮಾನಂದವಾಡಿ ಸುತ್ತಮುತ್ತಲೇ ಓಡಾಡತೊಡಗಿತು. ಬಳಿಕ ಸಮೀಪದ ಬಾಳೆ ತೋಟದಲ್ಲಿ ಅಡಗಿದ್ದ ತಣ್ಣೀರು, ಕೇರಳದ ಮುತ್ತುಂಗ ವಲಯದ ಅರಣ್ಯಾಧಿಕಾರಿಗಳ ಬೆವರಿಳಿಸಿತು. ಅಂತಿಮವಾಗಿ ಕೇರಳದ ಪಿಸಿಸಿಎಫ್ ಆನೆ ಸೆರೆ ಹಿಡಿಯಲು ಆದೇಶಿಸಿದ ಹಿನ್ನೆಲೆಯಲ್ಲಿ ಕೇರಳದ ಸಾಕಾನೆಗಳಾದ ಸೂರ್ಯ, ಸುರೇಂದಿರನ್ ಹಾಗೂ ವಿಕ್ರಮ ಆನೆಗಳ ಮೂಲಕ ಸಂಜೆ 5.30ಕ್ಕೆ ತಣ್ಣೀರಿಗೆ ಅರವಳಿಕೆ ಚುಚ್ಚುಮದ್ದು ನೀಡಲಾಯಿತು.

ತಣ್ಣೀರು ನೋಡಲು ಜನಜಂಗುಳಿ: ಕೇರಳದ ವೈಯನಾಡು ಜಿಲ್ಲೆಯ ಮಾನಂದವಾಡಿ ಪಟ್ಟಣದಲ್ಲಿ ಕರ್ನಾಟಕದ ಆನೆ ಬಂದಿದೆ ಎಂಬ ಮಾಹಿತಿ ಕಾಡ್ಗಿಚ್ಚಿನಂತೆ ಹಬ್ಬಿದ ಹಿನ್ನೆಲೆಯಲ್ಲಿ ಆನೆ ನೋಡಲು ಮಾನಂದವಾಡಿ ಹಾಗೂ ಸುತ್ತಮುತ್ತಲಿನ ಜನ ಭಾರೀ ಸಂಖ್ಯೆಯಲ್ಲಿ ಸೇರಿದ್ದರು. ಆದರೆ, ತಣ್ಣೀರು ಅಲ್ಲಿ ವಿಚಲಿತನಾಗದೆ ಶಾಂತ ರೀತಿಯಲ್ಲೇ ಮುಂದೆ ಸಾಗುತ್ತಲೇ ಇತ್ತು.

ಬಂಡೀಪುರ–ಮದುಮಲೈ ಬಾರ್ಡರ್‌ನಲ್ಲಿ ಬಿಡುಗಡೆ: ಮಾನಂದವಾಡಿಯಲ್ಲಿ ಸಂಜೆ ಸೆರೆ ಹಿಡಿದ ತಣ್ಣೀರು ಆನೆಯನ್ನು ಕರ್ನಾಟಕದ ಬಂಡೀಪುರ ಹಾಗೂ ತಮಿಳುನಾಡಿನ ಮದುಮಲೈ ಅರಣ್ಯ ಗಡಿ ಭಾಗದಲ್ಲಿ ಬಿಡುಗಡೆ ಮಾಡಲು ಕೇರಳಾ ಅರಣ್ಯ ಇಲಾಖೆ ಅಧಿಕಾರಿಗಳು ನಿರ್ಧರಿಸಿದ್ದು, ಬಿಡುಗಡೆ ಮಾಡಲು ಉದ್ದೇಶಿಸಿರುವ ಸ್ಥಳ ವಸತಿ ಪ್ರದೇಶದಿಂದ ಸಾಕಷ್ಟು ಅಂತರ ದಲ್ಲಿರುವುದರಿಂದ ಅದು ಸುಲಭವಾಗಿ ಮತ್ತೆ ಗ್ರಾಮದತ್ತ ಬರದೇ ಕಾಡಿನ ಪರಿಸರಕ್ಕೆ ಹೊಂದಿಕೊಳ್ಳುತ್ತದೆ ಎಂದು ಭಾವಿಸಿ, ಸ್ಥಳ ಆಯ್ಕೆ ಮಾಡಲಾಗಿದೆ.

ಜನರೊಂದಿಗೆ ಬೆರೆತ ಜೀವ...

ಹಾಸನದ ಬೇಲೂರಿನ ಬಿಕ್ಕೋಡು ಎಂಬ ಸ್ಥಳದಲ್ಲಿ ಸೆರೆ ಹಿಡಿದ ತಣ್ಣೀರು ಆನೆಗೆ ಯಾವುದೇ ಪ್ರಾಣ ಹಾನಿ ಮಾಡಿರುವ ಕೆಟ್ಟ ಇತಿಹಾಸ(ಬ್ಯಾಡ್ ಹಿಸ್ಟರಿ) ಇರಲಿಲ್ಲ. ಅದು ಜನರೊಂದಿಗೆ ಬೆರೆತ ಜೀವ. ಹಾಸನದಲ್ಲೂ ಗ್ರಾಮಗಳಲ್ಲೇ ಓಡಾಡುತ್ತಿದ್ದ ಆನೆಯನ್ನು ತಣ್ಣೀರು ಎಂದು ಸ್ಥಳೀಯರು ಕರೆಯುತ್ತಿದ್ದರು. ಹಾಸನದಲ್ಲಿ ಅನೇಕ ಸಂದರ್ಭದಲ್ಲಿ ಈ ಆನೆ ರಸ್ತೆಯಲ್ಲೇ ಮಲಗಿರುತ್ತಿದ್ದನ್ನು ಸ್ಥಳೀಯರು ಗಮನಿಸಿದ್ದರು. ಸುಮಾರು 10–15 ವರ್ಷದಿಂದ ಜನರೊಂದಿಗಿನ ಒಡನಾಟ ಹೊಂದಿದ್ದ ತಣ್ಣೀರು ಆನೆಗೆ ಕಾಡೊಳಗೆ ಜೀವಿಸಲು ಕಷ್ಟವಾಗುತ್ತಿರುವ ಅನುಮಾನ ಕಾಡುತ್ತಿದೆ. ಈ ಹಿನ್ನೆಲೆಯಲ್ಲಿ ಕಾಡಿನಲ್ಲಿ ಬಿಟ್ಟರೂ ಮತ್ತೆ ಮಾನಂದವಾಡಿ ಪಟ್ಟಣಕ್ಕೆ ಬಂದು ಜನ ಸಂಚಾರ ಕಂಡು ಓಡಾಡುತ್ತಿದೆ ಎಂದು ವಿಮರ್ಶಿಸಲಾಗಿದೆ.

ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ 40 ಸೀಟು ಪಡೆಯುವುದು ಅನುಮಾನ



ಕೋಲ್ಕತಾ, ಫೆ.2– ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು, ಹಿಂದಿ ಹೃದಯಭಾಗದ ರಾಜ್ಯಗಳಲ್ಲಿ ಭಾರತೀಯ ಜನತಾ ಪಕ್ಷವನ್ನು ಎದುರಿಸುವಂತೆ ಮಿತ್ರ ಪಕ್ಷಕ್ಕೆ ಶುಕ್ರವಾರ ಸವಾಲು ಹಾಕಿದ್ದಾರೆ.

ಮುಂಬರುವ ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷ "40 ಸ್ಥಾನಗಳನ್ನು" ಪಡೆಯುವುದು ಅನುಮಾನ ಎಂದು ಟಿಎಂಸಿ ಮುಖ್ಯಸ್ಥೆ ಹೇಳಿದ್ದಾರೆ.

ಪಶ್ಚಿಮ ಬಂಗಾಳದ ಆರು ಜಿಲ್ಲೆಗಳಲ್ಲಿ ಸಂಚರಿಸಿದ ಕಾಂಗ್ರೆಸ್‌ನ ಭಾರತ್ ಜೋಡೋ ನ್ಯಾಯ್ ಯಾತ್ರೆಯನ್ನು ಟೀಕಿಸಿದ ಬ್ಯಾನರ್ಜಿ, ರಾಜ್ಯಕ್ಕೆ ಬಂದಿರುವ "ವಲಸೆ ಹಕ್ಕಿಗಳಿಗೆ" "ಕೇವಲ ಫೋಟೋಗೆ ಅವಕಾಶ" ನೀಡುತ್ತಿದೆ ಎಂದಿದ್ದಾರೆ. ಕಾಂಗ್ರೆಸ್ ದೇಶಾದ್ಯಂತ 300 ಸ್ಥಾನಗಳಲ್ಲಿ ಸ್ಪರ್ಧಿಸ ಬೇಕೆಂದು ನಾನು ಪ್ರಸ್ತಾಪಿಸಿದ್ದೇನೆ. ಆದರೆ ಅವರು ಆ ಬಗ್ಗೆ ಗಮನಹರಿಸುವ ಬದಲು ಈಗ ರಾಜ್ಯದಲ್ಲಿ ಮುಸ್ಲಿಂ ಮತದಾರರನ್ನು ಪ್ರಚೋದಿಸಲು ಬಂದಿದ್ದಾರೆ. ಅವರು ಅವರು 300 ಮಂದಿ ಸ್ಪರ್ಧಿಸಿದರೂ 40 ಸ್ಥಾನಗಳನ್ನು ಪಡೆಯುತ್ತಾರೆಯೇ ಎಂದು ನನಗೆ ಅನುಮಾನವಿದೆ ಎಂದು ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಕೋಲ್ಕತ್ತಾದಲ್ಲಿ ನಡೆದ ಧರಣಿಯಲ್ಲಿ ಮಾತನಾಡಿದ ಬ್ಯಾನರ್ಜಿ, ಪಶ್ಚಿಮ ಬಂಗಾಳದಲ್ಲಿ ಮುಂಬರುವ ಲೋಕಸಭೆ ಚುನಾವಣೆಗೆ ಕಾಂಗ್ರೆಸ್‌ನೊಂದಿಗೆ ಮೈತ್ರಿ ಮಾಡಿಕೊಳ್ಳಲು ನಮ್ಮ ಪಕ್ಷವು ಸಿದ್ಧವಾಗಿದೆ. ಆದರೆ ನಮ್ಮ ಪ್ರಸ್ತಾಪವನ್ನು ಅತ್ಯಂತ ಹಳೆಯ ಪಕ್ಷ ನಿರಾಕರಿಸಿದ ಎಂದರು.

ಬಜೆಟ್‌ನಲ್ಲಿ ಮೈಸೂರಲ್ಲಿ ಶಾಲಾ ಶಿಕ್ಷಣ ಇಲಾಖೆ ಆಯುಕ್ತಾಲಯ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್ ಘೋಷಣೆಗೆ ಮರಿತಿಬ್ಬೇಗೌಡ ಆಗ್ರಹ



ಮೈಸೂರು, ಫೆ.2(ಎಂಕೆ)– ಎಸ್‌ಸಿ, ಎಸ್‌ಟಿ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಶೈಕ್ಷಣಿಕ ಉನ್ನತಿಗಾಗಿ ಮೈಸೂರಿನಲ್ಲಿ ಶಾಲಾ ಶಿಕ್ಷಣ ಇಲಾಖೆ ಆಯುಕ್ತಾಲಯ, ಮಹಿಳಾ ಪಾಲಿಟೆಕ್ನಿಕ್ ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸೇರಿದಂತೆ ವಿವಿಧ ಶಿಕ್ಷಣ ಸಂಸ್ಥೆಗಳನ್ನು ರಾಜ್ಯ ಬಜೆಟ್‌ನಲ್ಲಿ ಘೋಷಣೆ ಮಾಡುವಂತೆ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2024–25ನೇ ಸಾಲಿನ ಆಯವ್ಯದಲ್ಲಿ ಮೈಸೂರಿನಲ್ಲಿ ಮಹಿಳಾ ಪಾಲಿಟೆಕ್ನಿಕ್ ಕಾಲೇಜು. ಸರ್ಕಾರಿ ಇಂಜಿನಿಯರಿಂಗ್ ಕಾಲೇಜು. ಶಾಲಾ ಶಿಕ್ಷಣ ಇಲಾಖೆ ಆಯುಕ್ತಾಲಯ. ಮಂಡ್ಯ ವಿ.ಸಿ. ಫಾರಂನಲ್ಲಿ ಮೈಸೂರು ವಿಭಾಗಕ್ಕೆ ಸಂಬಂಧಿಸಿದಂತೆ, ಕೃಷಿ, ತೋಟಗಾರಿಕೆ ಹಾಗೂ ಮೀನುಗಾರಿಕೆ ವಿಶ್ವವಿದ್ಯಾನಿಲಯ. 7ನೇ ವೇತನ ಆಯೋಗದ ಶಿಫಾರಸ್ಸನ್ನು ಯಥಾವತ್ತಾಗಿ ಕೂಡಲೇ ಜಾರಿಗೊಳಿಸುವುದು. ಸರ್ಕಾರಿ ಮತ್ತು ಅನುದಾನಿತ ಶಾಲಾ ಸಿಬ್ಬಂದಿಗೆ ಹಳೆ ಪಿಂಚಣಿ ಯೋಜನೆ ಜಾರಿ. 1995ರ ನಂತರ ಪ್ರಾರಂಭವಾಗಿರುವ ಅನುದಾನ ರಹಿತ ಕನ್ನಡ ಮಾಧ್ಯಮ ಶಾಲಾ ಕಾಲೇಜುಗಳ ಸಿಬ್ಬಂದಿಗೆ ವೇತನಾನುದಾನ ನೀಡುವುದು. ಅನುದಾನಿತ ಶಾಲಾ–ಕಾಲೇಜುಗಳಲ್ಲಿ 2016ರಿಂದ ಖಾಲಿ ಇರುವ ಬೋಧಕ ಹಾಗೂ ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡುವುದು ಹಾಗೂ ಅನುದಾನಿತ ಶಾಲಾ ಕಾಲೇಜುಗಳ ಸಿಬ್ಬಂದಿಗೆ ಜ್ಯೋತಿ ಸಂಜೀವಿನಿ ಯೋಜನೆ ಜಾರಿಗೊಳಿಸುವ ಘೋಷಣೆ ಮಾಡುವಂತೆ ಮನವಿ ಮಾಡಿದ್ದಾರೆ.



ಇತ್ತೀಚೆಗೆ ನಡೆದ ಆಸ್ಟ್ರೇಲಿಯಾ ಓಪನ್ ಪುರುಷರ ಡಬಲ್ಸ್‌ನಲ್ಲಿ ಚೊಚ್ಚಲ ಪ್ರಶಸ್ತಿ ಪಡೆದಿದ್ದ ಖ್ಯಾತ ಟೆನ್ನಿಸ್ ಆಟಗಾರ, ಕನ್ನಡಿಗ ರೋಹನ್ ಬೋಪಣ್ಣ ಶುಕ್ರವಾರ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಭೇಟಿಯಾದರು. ಈ ವೇಳೆ ಪ್ರಧಾನಿ ಮೋದಿಯವರು ಬೋಪಣ್ಣ ಅವರನ್ನು ಆತ್ಮೀಯವಾಗಿ ಅಭಿನಂದಿಸಿ, ಸಂತಸ ಹಂಚಿಕೊಂಡರು.

ಬಾಲಗಂಗಾಧರನಾಥ ಸ್ವಾಮೀಜಿ ಪುತ್ಥಳಿಯ ಗಾಜಿನ ಮಂಟಪ ಉದ್ಘಾಟನೆ

ಹಲವು ಸಾಧಕರಿಗೆ ಸನ್ಮಾನ



ಮೈಸೂರಿನ ಹೆಬ್ಬಾಳಿನ ಬಸವನಗುಡಿ ಉದ್ಯಾನವನದಲ್ಲಿ ಸ್ಥಾಪಿಸಿರುವ ಶ್ರೀ ಆದಿಚುಂಚನ ಗಿರಿ ಮಠದ ದಿವಂಗತ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರ ಪುತ್ಥಳಿಯ ಗಾಜಿನ ಮಂಟಪವನ್ನು ಶ್ರೀ ಸೋಮನಾಥ ಸ್ವಾಮೀಜಿ ಉದ್ಘಾಟಿಸಿದರು. ಈ ವೇಳೆ ಶಾಸಕ ಕೆ.ಹರೀಶ್‌ಗೌಡ, ನಗರಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್ ಉಪಸ್ಥಿತರಿದ್ದರು.

ಮೈಸೂರು, ಫೆ.2(ಎಂಕೆ)– ಮೈಸೂರಿನ ಹೆಬ್ಬಾಳಿನ ಬಸವನಗುಡಿ ಉದ್ಯಾನವನದಲ್ಲಿ ಸ್ಥಾಪಿಸಿರುವ ಶ್ರೀ ಆದಿಚುಂಚನಗಿರಿ ಮಠದ ದಿವಂಗತ ಶ್ರೀ ಬಾಲ ಗಂಗಾಧರನಾಥ ಸ್ವಾಮೀಜಿ ಅವರ ಪುತ್ಥಳಿಯ ಗಾಜಿನ ಮಂಟಪವನ್ನು ಶುಕ್ರವಾರ ಉದ್ಘಾಟಿಸಲಾಯಿತು.

ಶುಕ್ರವಾರ ಆಯೋಜಿಸಿದ್ದ ಶ್ರೀ ಬಾಲ ಗಂಗಾಧರನಾಥ ಸ್ವಾಮೀಜಿ ಅವರ 79ನೇ ಜಯಂತಿ ಆಚರಣೆಯಲ್ಲಿ ಶ್ರೀ ಆದಿ ಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಶಾಸಕ ಕೆ.ಹರೀಶ್‌ಗೌಡ ನೂತನವಾಗಿ ನಿರ್ಮಿಸಿರುವ ಗಾಜಿನ ಮಂಟಪವನ್ನು ಉದ್ಘಾಟಿಸಿದರು. ಇದೇ ವೇಳೆ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಚಿಂತಕ ಪುಟ್ಟಸ್ವಾಮಣ್ಣ, ಉದ್ಯಮಿ ನಾರಾಯಣಪ್ಪ, ಯುವ ವಿಜ್ಞಾನಿ ನಿತಿನ್, ಕವಯಿತ್ರಿ ಮಮತಾ, ನಿವೃತ್ತ ಮುಖ್ಯ ಶಿಕ್ಷಕರಾದ ರಾಮಸ್ವಾಮಿ, ನಾಗೇಂದ್ರ, ನಿವೃತ್ತ ಬ್ಯಾಂಕ್ ನೌಕರ ದೊರೆರಾಜು, ಬರಹಗಾರ ನಂಜುಂಡಸ್ವಾಮಿ, ನಿವೃತ್ತ ಸೈನಿಕ ನಿಂಗರಾಜಣ್ಣ, ನಿವೃತ್ತ ಪ್ರಾಧ್ಯಾಪಕ ಪ್ರೊ.ಭೈರೇಗೌಡ, ಜನಪದ ಗಾಯಕರಾದ ಮಂಜೇಶ್, ಸಿ.ಪಿ.ಗೋವಿಂದ ರಾಜು, ಸಮಾಜ ಸೇವಕ ಅಪ್ಪಾಜಿಗೌಡ ಅವರನ್ನು ಸನ್ಮಾನಿಸಲಾಯಿತು.

ಬಳಿಕ ಶ್ರೀ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ಮಾತನಾಡಿ, ಜನಸೇವೆಯೇ ಜನಾರ್ಧನ ಸೇವೆ ಎಂಬುದರಲ್ಲಿ ನಂಬಿಕೆ ಇಟ್ಟಿದ್ದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರು, ತಮ್ಮ ಶ್ರಮದಿಂದ ಶ್ರೀ ಆದಿಚುಂಚನಗಿರಿ ಕ್ಷೇತ್ರ ಹಿರಿಮೆಯನ್ನು ವಿಶ್ವಮಟ್ಟಕ್ಕೆ ಕೊಂಡೊಯ್ದಿದ್ದಾರೆ. ಆದಿಚುಂಚನಗಿರಿಯನ್ನು ಸುವರ್ಣಗಿರಿಯನ್ನಾಗಿ ಮಾಡಿದ್ದಾರೆ. ಪದ್ಮಭೂಷಣ ಪ್ರಶಸ್ತಿಯನ್ನು ತಮ್ಮ ಸೇವೆಯ ಮೂಲಕ ಪಡೆದ ಮಹಾನ್ ತಪಸ್ವಿ ಎಂದು ಸ್ಮರಿಸಿದರು.

ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಭಾಗಶಃ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರು, ಮಾಡದೆ ಇರುವ ಸಾಧನೆ ಇಲ್ಲ. ಎಲ್ಲಾ ಜಾತಿ–ಜನಾಂಗದವರನ್ನು ಒಗ್ಗೂಡಿಸುವ ಮೂಲಕ ಸಮ ಸಮಾಜ ನಿರ್ಮಾಣ ಮಾಡುವಲ್ಲಿ ಮಹತ್ತರ ಕೊಡುಗೆ ನೀಡಿದ್ದಾರೆ. ಅವರನ್ನು ಸ್ಮರಣೆ ಮಾಡುವುದು ನಮ್ಮೆಲ್ಲರ ಕರ್ತವ್ಯ ಎಂದರು. ನಗರಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್, ಮುಖಂಡರಾದ ಕಾಳೇಗೌಡ, ವಿಕ್ರಾಂತ್ ಕೃಷ್ಣಪ್ಪ, ಪುಟ್ಟಸ್ವಾಮೇಗೌಡ, ಬೊರೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಪ್ರಸ್ತುತ ಕನ್ನಡದ ಕಾವ್ಯ ಪರಂಪರೆಗೆ ದಿಕ್ಕು ದೆಸೆ ಇಲ್ಲ

ಹಿರಿಯ ಸಾಹಿತಿ ಡಾ.ಕಬ್ಬಿನಾಲೆ ವಸಂತಭಾರಧ್ವಾಜ್ ವಿಷಾದ

ಮೈಸೂರು, ಫೆ.2(ಎಸ್‌ಪಿಎನ್)– ಇಂದಿನ ಕನ್ನಡ ಕಾವ್ಯ ಪರಂಪರೆ ಗೊತ್ತು ಗುರಿ ಇಲ್ಲದ ಕಡೆ ಸಾಗುತ್ತಿದೆ ಎಂದು ಹಿರಿಯ ಸಾಹಿತಿ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ವಿಷಾದ ವ್ಯಕ್ತಪಡಿಸಿದರು.

ಮೈಸೂರು ಕೃಷ್ಣಮೂರ್ತಿ ಬಡಾವಣೆಯಲ್ಲಿನ ಡಾ.ಕೆ.ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನದ ಆವರಣದಲ್ಲಿ ಡಾ.ಕೆ.ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನ ಹಾಗೂ ಶ್ರೀ ವಾಸುದೇವ ಮಹರಾಜ ಫೌಂಡೇಶನ್ ಸಹಯೋಗದೊಂದಿಗೆ ಜ್ಞಾನಪೀಠ ಪುರಸ್ಕೃತ ದ.ರಾ. ಬೇಂದ್ರೆ ಅವರ 128ನೇ ಜಯಂತಿ ಕಾರ್ಯಕ್ರಮದಲ್ಲಿ ಬೇಂದ್ರೆ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು.

ಇಂದಿನ ಯುವ ಬರಹಗಾರರಲ್ಲಿ ಓದುವ ಸಂಸ್ಕೃತಿ ಮಾಯವಾಗುತ್ತಿದೆ. ಕವಿತೆಗಳನ್ನು ರಚಿಸುವವರಿಗೆ ಪಂಪ, ರನ್ನನಿಂದ ಕುವೆಂಪು, ದ.ರಾ.ಬೇಂದ್ರೆ ಸೇರಿದಂತೆ ಕವಿಗಳ ಬದುಕು–ಬರಹಗಳನ್ನು ತಿಳಿಯುವ ಪ್ರಯತ್ನ ಮಾಡುತ್ತಿಲ್ಲ. ಇದರಿಂದಾಗಿ ಕನ್ನಡ ಕಾವ್ಯಗಳಲ್ಲಿ ಗಟ್ಟಿತನ ಕಾಣುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ದ.ರಾ.ಬೇಂದ್ರೆಯವರು ತಮ್ಮ ಕವಿತೆಯಲ್ಲಿ 'ಸಿಂಹದ ಮುಖಕ್ಕಿದೆ ನವಿಲಿನ ಸೋಗೆ, ಶಕ್ತಿ–ಶಾರದೆಯರ ಮೇಳ ಆಗಿದೆ'. ಅಂದರೆ ಪ್ರಪಂಚದಲ್ಲಿ ಸಿಂಹದ ಮುಖ, ನವಿಲಿನ ಸೋಗೆ' ತರಹ ಯಾವ ಪ್ರಾಣಿಯಲ್ಲೂ ಇಲ್ಲ. ಶಕ್ತಿ ಎಂದರೆ ಪಾರ್ವತಿ, ಪಾರ್ವತಿಯ ವಾಹನ ಸಿಂಹ ಈ ನೋಟದಲ್ಲಿ ನೋಡಿದರೆ, ಮಾತ್ರ ಈ ಸಾಲು ಅರ್ಥವಾಗುತ್ತದೆ. ಇಂತಹ ಅನೇಕ ಒಗಟಿನಂತಹ ಸಾಲುಗಳನ್ನು ಬೇಂದ್ರೆಯವರ ಕಾವ್ಯಗಳಲ್ಲಿ ಕಾಣಬಹುದು ಎಂದು ತಿಳಿಸಿದರು.



ಡಾ.ಕೆ.ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನ ಹಾಗೂ ಶ್ರೀ ವಾಸುದೇವ ಮಹರಾಜ ಫೌಂಡೇಶನ್ ಸಹಯೋಗದೊಂದಿಗೆ ಜ್ಞಾನಪೀಠ ಪುರಸ್ಕೃತ ದ.ರಾ.ಬೇಂದ್ರೆ ಅವರ 128ನೇ ಜಯಂತಿ ಕಾರ್ಯಕ್ರಮದಲ್ಲಿ ಬೇಂದ್ರೆ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು.

ಇಂದಿನ ವಿಮರ್ಶಕರು ಪ್ರಾಸ ಬದ್ಧವಾಗಿ, ಛಂಧೋಬದ್ಧವಾಗಿ ರಚಿತವಾದ ಕವಿತೆಗಳ ಬಗ್ಗೆ ಮೂಗು ಮುರಿಯುತ್ತಾರೆ. ಇದೇ ಸ್ಥಿತಿ ಮುಂದುವರೆದರೆ ಕನ್ನಡ ಕಾವ್ಯಗಳಿಗೆ ಸಾರ್ವಜನಿಕವಾಗಿ ಬೆಲೆಯೇ ಇರುವುದಿಲ್ಲ. ಹಾಗಾಗಿಯೇ ಇಂದಿನ ಕನ್ನಡ ಕಾವ್ಯಗಳನ್ನು ಯಾರೂ ಕೊಂಡಾಡುವ ಸ್ಥಿತಿಯಲ್ಲಿಲ್ಲ ಎಂದು ಕನ್ನಡ ಕಾವ್ಯ ಜಗತ್ತಿನ ಆತಂಕದ ಕ್ಷಣಗಳನ್ನು ಎಳೆ ಎಳೆಯಾಗಿ ವಿವರಿಸಿದರು.

ಕನ್ನಡದ ಹಳೆಯ ಕಾವ್ಯದೊಳಗಿನ ಪದ ಸಂಪತ್ತು ಮತ್ತೆ ಉದಯಿಸಬೇಕಾದರೆ, ಮತ್ತೊಮ್ಮೆ ಪಂಪ, ರನ್ನ, ರಾಘವಾಂಕ, ರತ್ನಾಕರ ವರ್ಣಿ ಹಾಗೂ ಕುವೆಂಪು, ಬೇಂದ್ರೆಯಂತಹ ಮಹಾ ಕವಿಗಳು ಹುಟ್ಟಬೇಕು. ಇಲ್ಲದಿದ್ದರೆ ಅದು ಅಸಾಧ್ಯ. ಅಲ್ಲದೆ, ಕಾವ್ಯಗಳಲ್ಲಿ ಓದುವ ಸುಖಕ್ಕಿಂತ, ಕೇಳುವ ಸುಖ ಇರಬೇಕು. ಆಗ ಮಾತ್ರ ಕನ್ನಡ ಕಾವ್ಯಗಳಲ್ಲಿ ಗಟ್ಟಿತನ ಇರುತ್ತದೆ. ಅತಿಯಾದ ರೂಪಕ, ಅತಿಯಾದ ನವ್ಯ ಅಥವಾ ಅತಿಯಾದ ಇಸಂಗಳಿಂದ ಕೂಡಿರುವ ಕವಿತೆಗಳ ರಚನೆಯಿಂದ ಪ್ರಸ್ತುತ ಕನ್ನಡ ಕಾವ್ಯಕ್ಕೆ ಭವಿಷ್ಯ ಇಲ್ಲದಂತಾಗಿವೆ ಎಂದರು.

ಈ ವೇಳೆ ಹಿರಿಯ ಸಾಹಿತಿ ಡಾ.ಕೆ.ಲೀಲಾ ಪ್ರಕಾಶ್, ಕುಲಕರ್ಣಿ, ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಪ್ರಕಾಶಕ ಕೇಶವ್ ಪ್ರಕಾಶ್, ನಿವೃತ್ತ ಪ್ರಾಧ್ಯಾಪಕಿ ಕೆ.ಆರ್.ಪ್ರೇಮಾಲೀಲಾ, ಕಸಾಪ ಮಾಜಿ ಅಧ್ಯಕ್ಷ ಎ.ಗಿರಿಗೌಡ, ಬ್ರಹ್ಮಭೂತ ವಾಸುದೇವ್ ಮಹಾರಾಜ್ ಪ್ರತಿಷ್ಠಾನದ ಅಧ್ಯಕ್ಷ ಎಂ.ವಿ.ನಾಗೇಂದ್ರ ಬಾಬು. ಸಂಚಾಲಕ ಅನಂತ ಉಪಸ್ಥಿತರಿದದ್ದರು.

ಆಧುನಿಕ ಕನ್ನಡ ಕಾವ್ಯ ಪರಂಪರೆಯಲ್ಲಿ ಕುವೆಂಪು, ಬೇಂದ್ರೆ ಹಾಗೂ ಪುತಿನ ರತ್ನತ್ರಯರೆಂದು ಹೆಸರುವಾಸಿಯಾಗಿದ್ದು, ಕುವೆಂಪು ಭಾವಾವೇಶದ ಕವಿಯಾದರೆ, ಪು.ತಿ.ನ. ಹಾಗೂ ಬೇಂದ್ರೆ ಶಾಂತರಸದ ಕವಿಗಳು. ಜೀವನದಲ್ಲಿ ನೊಂದು ಬೆಂದು ಅದನ್ನೇ ತನ್ನ ಕಾವ್ಯದ ವಸ್ತುವನ್ನಾಗಿ ಸಮಾಜಕ್ಕೆ ನೀಡಿದ ಕೀರ್ತಿ ಬೇಂದ್ರೆಯವರಿಗೆ ಸಲ್ಲುತ್ತದೆ. ಹಾಗಾಗಿ ಅವರ ಬರಹಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ ಸಾಧ್ಯ. ಬೇಂದ್ರೆಯವರನ್ನು ಅರ್ಥ ಮಾಡಿಕೊಳ್ಳಬೇಕಾದರೆ, ಓದುಗರು ಬೇಂದ್ರೆ ಕಾವ್ಯಗಳಲ್ಲಿ ತಲ್ಲೀನರಾದರೆ ಮಾತ್ರ ಅವರನ್ನು ಅರ್ಥ ಮಾಡಿಕೊಳ್ಳಬಹುದು.

– ಡಾ.ಸಿ.ಪಿ.ಕೃಷ್ಣಕುಮಾರ್, ಹಿರಿಯ ಸಾಹಿತಿ

'ಮತ್ತೊಮ್ಮೆ ಮೋದಿ-2024' ಗೋಡೆ ಬರಹ ಅಭಿಯಾನಕ್ಕೆ ಚಾಲನೆ

ಬಿಜೆಪಿ ರಾಜ್ಯಾಧ್ಯಕ್ಷರ ಆದೇಶದ ಮೇರೆಗೆ ಅಭಿಯಾನ: ಎಲ್.ಆರ್.ಮಹದೇವಸ್ವಾಮಿ

ತಿ.ನರಸೀಪುರ, ಫೆ.2– ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಆದೇಶದ ಮೇರೆಗೆ ಪ್ರತಿ ಜಿಲ್ಲೆಯಲ್ಲೂ 'ಮತ್ತೊಮ್ಮೆ ಮೋದಿ–2024' ಎಂಬ ಗೋಡೆ ಬರಹ ಅಭಿಯಾನಕ್ಕೆ ಚಾಲನೆ ನೀಡಲಾಗುತ್ತಿದೆ ಎಂದು ಬಿಜೆಪಿ ಮೈಸೂರು ಗ್ರಾಮಾಂತರ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ತಿಳಿಸಿದರು.

ವರುಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೆಳವರ ಹುಂಡಿ ಗ್ರಾಮದಲ್ಲಿ 'ಮತ್ತೊಮ್ಮೆ ಮೋದಿ–2024' ಎಂಬ ಧ್ಯೇಯ ವಾಕ್ಯದಡಿ ಗೋಡೆ ಬರಹ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಆದೇಶದ ಮೇರೆಗೆ ಪ್ರತಿ ಮಂಡಲ, ಪ್ರತಿ ಬೂತ್‌ನಲ್ಲಿ ಕನಿಷ್ಠ 5 ಕಡೆ ಗೋಡೆ ಬರಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ತಿ.ನರಸೀಪುರ ಹಾಗೂ ವರುಣ ಕ್ಷೇತ್ರದಿಂದ ಗೋಡೆ ಬರಹ ಕಾರ್ಯಕ್ರಮ ಆರಂಭಿಸಿದ್ದೇವೆ. ಈ ಹಿಂದೆ ತಿ.ನರಸೀಪುರ ಕ್ಷೇತ್ರ ಬಿಜೆಪಿ ಗೆದ್ದ ಕ್ಷೇತ್ರವಾಗಿರುವುದರಿಂದ ಪ್ರತಿ ಬೂತ್‌ನಲ್ಲಿ ಬಿಜೆಪಿ ಗೆಲ್ಲುವ ಆಶಯದೊಂದಿಗೆ ಗೋಡೆ ಬರಹ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಗ್ರಾಮ್ ಚಲೋ ಕಾರ್ಯಕ್ರಮ ಸಹ ನಡೆಯಲಿದ್ದು, ಪಕ್ಷದ ಕಾರ್ಯಕರ್ತರು ಒಂದು ಬೂತ್‌ನಿಂದ ಮತ್ತೊಂದು ಬೂತ್‌ಗೆ ತೆರಳಿ ಅಲ್ಲಿನ ಹಿರಿಯರು, ಮತದಾರರರು, ಕಾರ್ಯಕರ್ತರು, ದಿನಪತ್ರಿಕೆ ಹಂಚುವವರು, ಹಾಲು ಹಾಕುವವರನ್ನು ಮಾತನಾಡಿಸಿ ಪ್ರಧಾನಿ ಮೋದಿಯವರ ಜನಪರ ಕಾರ್ಯಕ್ರಮಗಳನ್ನು ಪರಿಚಯಿಸಿ ಜನರಲ್ಲಿ ಜಾಗೃತಿ ಮೂಡಿಸಲಿದ್ದಾರೆ ಎಂದರು.

ರಾಜ್ಯಾಧ್ಯಕ್ಷ ವಿಜಯೇಂದ್ರ ಹೇಳಿರುವಂತೆ ಕಾರ್ಯಕರ್ತರೇ ಸಾರ್ವಭೌಮರಾಗಿದ್ದು, ಜಿಲ್ಲೆಯ ಪ್ರತಿ ಕಾರ್ಯಕರ್ತರ ನೋವು ನಲಿವಿಗೆ ಸ್ಪಂದಿಸುವ ಕೆಲಸ ಮಾಡಲಿದ್ದೇವೆ. ಲೋಕಸಭಾ ಚುನಾವಣೆ ಹತ್ತಿರವಾಗುತ್ತಿರುವ ಹಿನ್ನೆಲೆಯಲ್ಲಿ ಕಾರ್ಯಕರ್ತರು ಹೆಚ್ಚು ಕ್ರಿಯಾಶೀಲರಾಗಿ ಕೆಲಸ ಮಾಡಿ ಪ್ರತಿ ಬೂತ್‌ನಲ್ಲೂ ಬಿಜೆಪಿಗೆ ಗೆಲುವಿನ ವಾತಾವರಣ ಸೃಷ್ಟಿಸಲು ಶ್ರಮ ವಹಿಸಿ ಕೆಲಸ ಮಾಡಬೇಕೆಂದು ಮನವಿ ಮಾಡಿದರು.

ಈ ವೇಳೆ ಪ್ರಧಾನ ಕಾರ್ಯದರ್ಶಿ ಮಡವಾಡಿ ಮಹೇಶ್, ಮಂಡಲ ಅಧ್ಯಕ್ಷ ವಿಜಯಕುಮಾರ್, ಪ್ರಧಾನ ಕಾರ್ಯದರ್ಶಿ ರಂಗೂ ನಾಯಕ್, ಯುವ ಮೋರ್ಚಾ ಅಧ್ಯಕ್ಷ ಮೋಹನ್ ಕುಮಾರ್, ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಎಂ.ಸೋಮಣ್ಣ, ಜಿಲ್ಲಾ ಕಾರ್ಯದರ್ಶಿ ಕರೋಹಟ್ಟಿ ಬಸವರಾಜು, ಜಿಲ್ಲಾ ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಮಂಜು, ಜಿಲ್ಲಾ ಸಂಚಾಲಕ ಸಾರಾ ತಿಲಕ್, ಬೂತ್ ಅಧ್ಯಕ್ಷ ನಾಗೇಂದ್ರ, ಮಲ್ಲೇಶ್, ಪ್ರಭುಸ್ವಾಮಿ, ಕರೋಹಟ್ಟಿ ಬಸವರಾಜು, ಪ್ರದೀಪ್(ಬಿಡ್ಡ) ಮತ್ತಿತರರಿದ್ದರು.


ಮತ್ತೊಮ್ಮೆ ಮೋದಿ–2024 ಗೋಡೆ ಬರಹ ಕಾರ್ಯಕ್ರಮಕ್ಕೆ ಹೆಳವರಹುಂಡಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಚಾಲನೆ ನೀಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಯಥಾಭವ (ಕ)	2 ಪ್ರದರ್ಶನಗಳು
ಅಯಲಾನ್ (ತ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಫೈಟರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಬ್ಯಾಚ್ಯುಲರ್ ಪಾರ್ಟಿ (ಕ)	4 ಪ್ರದರ್ಶನಗಳು
ರಾಜಕಮಲ್	
ವಡಕ್ಕುಪಟ್ಟಿ ರಾಮಸ್ವಾಮಿ (ತ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
ಅಲೆಕ್ಸ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಫೈಟರ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಶಂಕರ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ನೋ ಶೋ
ಸ್ಕ್ರೀನ್ 2	ಕ್ರಷ್ (ಕ): ಬೆ.10.30ಕ್ಕೆ, ಬ್ಯಾಚುಲರ್ ಪಾರ್ಟಿ (ಕ): ಮ.1.05ಕ್ಕೆ, ಕಾಟೇರ (ಕ): ಮ.3.55ಕ್ಕೆ, ನೆಕ್ಸ್ಟ್ ಗೋಲ್ ವಿನ್ಸ್ (ಇಂ): ರಾ.7.20ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ಉಪಾಧ್ಯಕ್ಷ (ಕ): ಬೆ.10.05ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ಹನುಮಾನ್ (ಕ): ಬೆ.9.55ಕ್ಕೆ, ಫೈಟರ್ (ಹಿಂ): ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಫೈಟರ್ (3ಡಿ)(ಹಿಂ): ಬೆ.7.40ಕ್ಕೆ, ಬೆ.11.15ಕ್ಕೆ, ಮ.2.50ಕ್ಕೆ, ಸಂ.6.25ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಬ್ಯಾಚುಲರ್ ಪಾರ್ಟಿ (ಕ): ಬೆ9.20ಕ್ಕೆ, ಸಂ.4ಕ್ಕೆ, 10.20ಕ್ಕೆ, ಫೈಟರ್ (ಹಿಂ): ಮ.12.25ಕ್ಕೆ, ಉಪಾಧ್ಯಕ್ಷ (ಕ): ರಾ.7.05ಕ್ಕೆ.
ಸ್ಕ್ರೀನ್ 3	ಉಪಾಧ್ಯಕ್ಷ (ಕ): ಬೆ.9ಕ್ಕೆ, ಹನುಮಾನ್ (ಕ): ಮ.12.05ಕ್ಕೆ, ಕಾಟೇರ (ಕ): ಮ.3.25ಕ್ಕೆ, ಕೇಸ್ ಆಫ್ ಕೊಂಡಾಣ (ಕ): ರಾ.10.30ಕ್ಕೆ. ಮಲೈಕೊಟ್ಟೈ ವಾಲಿಬನ್ (ಮ): ರಾ.7.05ಕ್ಕೆ.
ಸ್ಕ್ರೀನ್ 4	ಫೈಟರ್ (3ಡಿ)(ಹಿಂ): ಬೆ10.30ಕ್ಕೆ, ಮ.2.05ಕ್ಕೆ, ಸಂ.5.40ಕ್ಕೆ, ರಾ.9.15ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅನಿಮಲ್ (ಹಿಂ): ಬೆ.8.10ಕ್ಕೆ, ಬೆ.9.15ಕ್ಕೆ, ಬೆ.9.45ಕ್ಕೆ, ಬೆ.10.15ಕ್ಕೆ, ಮ.1.20ಕ್ಕೆ, ಮ.2.20ಕ್ಕೆ, ಸಂ.5.25ಕ್ಕೆ, ಸಂ.5.55ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ರಾ.10ಕ್ಕೆ, ರಾ.10.30ಕ್ಕೆ, ಅನಿಮಲ್ (ಕ): ಮ.1.50ಕ್ಕೆ, ಅನ್ನಪೂರ್ಣಿ (ತ): ಸಂ.4.15ಕ್ಕೆ, ಕಾಥಲ್ ದಿ ಕೋರ್ (ಮ): ರಾ.10.15ಕ್ಕೆ, ಪಾರ್ಕಿಂಗ್ (ತ): ಮ.1.25ಕ್ಕೆ, ರಾ.7.20ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಬೆ.9.20ಕ್ಕೆ, ಮ.12.15ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.12.35ಕ್ಕೆ, ರಾ.7.05ಕ್ಕೆ, ಶೋಶಿತೆ (ಕ): ಬೆ11ಕ್ಕೆ, ಟೈಗರ್ 3 (ಹಿಂ): ಮ.3.45ಕ್ಕೆ, ರಾ.10.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಹುಣಸೂರಿನ ವಿವಿಧೆಡೆ ನರೇಗಾ ದಿವಸ್ ಆಚರಣೆ


ಹುಣಸೂರಲ್ಲಿ ನರೇಗಾ ದಿವಸ್ ಅನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಹುಣಸೂರು, ಫೆ.2– ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಖಾತರಿ ಯೋಜನೆ (ನರೇಗಾ) ಜಾರಿಯಾಗಿ 19 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ತಾಲೂಕಿನ ವಿವಿಧೆಡೆ ನರೇಗಾ ದಿವಸ್ ಅನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ನರೇಗಾ ದಿವಸ್ ಅಂಗವಾಗಿ ತಾಲೂಕಿನ ಬಿಳಿಕೆರೆ, ಉಯಿಗೊಂಡನಹಳ್ಳಿ, ಹಳೇಬೀಡು, ಕರಿಮುದ್ದನಹಳ್ಳಿ, ಕರ್ಣಕುಪ್ಪೆ, ಚಲ್ಲಹಳ್ಳಿ, ಉಮ್ಮತ್ತೂರು, ಮೂಕನಹಳ್ಳಿ ಸೇರಿದಂತೆ ಇತರೆ ಗ್ರಾಪಂಗಳಲ್ಲಿ ಸಂಜೀವಿನಿ ಒಕ್ಕೂಟದ ಮಹಿಳೆಯರಿಂದ ರಂಗೋಲಿ ಸ್ಪರ್ಧೆ, ಶಾಲಾ ಮಕ್ಕಳಿಂದ ಜಲ ಸಂರಕ್ಷಣೆ ಕುರಿತು ಚಿತ್ರಕಲಾ ಸ್ಪರ್ಧೆ, ವಿವಿಧ ಆಟೋಟ ಸ್ಪರ್ಧೆ, ನರೇಗಾ ಕಾಮಗಾರಿ ಸ್ಥಳದಲ್ಲಿ ಕೂಲಿ ಕಾರ್ಮಿಕರಿಗೆ ನರೇಗಾ ಕುರಿತು ಅರಿವು ಮೂಡಿಸಲು ಜಾಗೃತಿ ಜಾಥಾ ಸೇರಿದಂತೆ ಇತರೆ ಕಾರ್ಯಕ್ರಮ ನಡೆಸಲಾಯಿತು.

ಬಿಳಿಗೆರೆ ಗ್ರಾಪಂ ಮೊಸಂಬಾಯನಹಳ್ಳಿ ಗ್ರಾಮದ ಸರ್ಕಾರಿ ಶಾಲೆಯಲ್ಲಿ ನರೇಗಾದಿಂದ ನಡೆಯುತ್ತಿರುವ ಕಾಂಪೌಂಡ್ ಕಾಮಗಾರಿ ಸ್ಥಳದಲ್ಲಿ ಕೂಲಿ ಕಾರ್ಮಿಕರಿಗೆ ನರೇಗಾ ಕುರಿತು ಮಾಹಿತಿ ನೀಡುವ ಜೊತೆಗೆ ಶಾಲಾ ಮಕ್ಕಳಲ್ಲಿ ಜಲ ಸಂರಕ್ಷಣೆ ಕುರಿತು ಅರಿವು ಮೂಡಿಸುವ ಸಲುವಾಗಿ ಚಿತ್ರಕಲಾ ಸ್ಪರ್ಧೆ ಹಾಗೂ ಜಲ ಶಕ್ತಿ ಅಭಿಯಾನದಡಿ ಜಾಗೃತಿ ಜಾಥಾ ನಡೆಸಲಾಯಿತು.

ಈ ವೇಳೆ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಕೃಷ್ಣನಾಯಕ, ಗ್ರಾಪಂ ಸದಸ್ಯರಾದ ನಸೀಮಾ ಭಾನು, ಅನಿತಾ, ತಾಲೂಕು ಐಇಸಿ ಸಂಯೋಜಕಿ ಪುಷ್ಪವತಿ ಹಾಗೂ ಶಾಲಾ ಮುಖ್ಯೋಪಾಧ್ಯಾಯರಾದ ಸರ್ವಮಂಗಳ, ಶಿಕ್ಷಕ ವೃಂದ ಸೇರಿದಂತೆ ಗ್ರಾಪಂ ಸಿಬ್ಬಂದಿ ಉಪಸ್ಥಿತರಿದ್ದರು.

ಕಡಕೊಳ ಪಪಂ ಅಭಿವೃದ್ಧಿಗೆ ಜನತೆ ಸಹಕಾರ ಅಗತ್ಯ

ಮುಖ್ಯಾಧಿಕಾರಿ ದೀಪಾ ಮನವಿ

ಕಡಕೊಳ, ಫೆ.2– ಪಟ್ಟಣ ಪಂಚಾಯತ್ ಅಭಿವೃದ್ಧಿಗೆ ಜನತೆ ಸಹಕಾರ ಅಗತ್ಯ ಎಂದು ಮುಖ್ಯಾಧಿಕಾರಿ ದೀಪಾ ತಿಳಿಸಿದರು.

ಇಲ್ಲಿನ ಪಪಂ ಆವರಣದಲ್ಲಿ ಪ್ರಸಕ್ತ ಸಾಲಿನ ಆಯವ್ಯಯ ಕುರಿತ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪಟ್ಟಣ ಪಂಚಾಯತ್ ವ್ಯಾಪ್ತಿಯ ಜನತೆ ತಮ್ಮ ಮೂಲಭೂತ ಹಕ್ಕಿನ ಜೊತೆಗೆ ಕರ್ತವ್ಯಗಳನ್ನು ಅರಿತು ಪಟ್ಟಣ ಪಂಚಾಯಿತಿ ಅಭಿವೃದ್ಧಿಗೆ ಕೈ ಜೋಡಿಸಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಕೈಗೊಂಡಿರುವ ಕಾಮಗಾರಿಗಳು, ಸಾಮಾಜಿಕ ಚಟುವಟಿಕೆಗಳು ಹಾಗೂ ಅಭಿವೃದ್ಧಿಗೆ ಪೂರಕವಾದ ಕೈಪಿಡಿ ಬಿಡುಗಡೆಗೊಳಿಸಲಾಯಿತು. ನಂತರ ಅದರ ಮೇಲಿನ ಚರ್ಚೆಯಲ್ಲಿ ಸಾರ್ವಜನಿಕರು ಪಾಲ್ಗೊಂಡಿದ್ದರು. ಅದರಲ್ಲಿ ಪ್ರಮುಖವಾಗಿ ಕಬಿನಿ ಮೂಲದಿಂದ ಕಡಕೊಳಕ್ಕೆ ನೀರು ಪೂರೈಕೆ, ಪಪಂ ವ್ಯಾಪ್ತಿಯಲ್ಲಿ ಹಸರೀಕರಣಕ್ಕೆ ಅಗತ್ಯ ಕ್ರಮ, ಪಾರದರ್ಶಕವಾಗಿ ಫಲಾನುಭವಿಗಳ ಆಯ್ಕೆ, ಅಧಿಕಾರಿ ವರ್ಗದವರ ಕಾರ್ಯಕ್ಷಮತೆ ಬಗ್ಗೆ ಚರ್ಚೆ ನಡೆಯಿತು.

ಈ ವೇಳೆ ಸಮುದಾಯ ಸಂಘಟನಾ ಅಧಿಕಾರಿ ಎಂ.ಎನ್.ಮಹೇಶ್, ಸತೀಶ್ ಕುಮಾರ್, ರಾಜಸ್ವನಿರೀಕ್ಷಿ ವೀಣಾ, ಆರೋಗ್ಯ ನಿರೀಕ್ಷಕ ಮಂಜು, ದಿ ಯೂನಿಯನ್ ರೈತ ಸೇವಾ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ಕುಮಾರಸ್ವಾಮಿ, ಮಾಜಿ ಗ್ರಾಪಂ ಅಧ್ಯಕ್ಷ ರಮೇಶ್, ಮಾಜಿ ಗ್ರಾಪಂ ಸದಸ್ಯ ಶಿವಕುಮಾರ್, ಕಿರಣ್ ಕುಮಾರ್, ಶಿವಲಿಂಗು, ನಾರಾಯಣ ನಾಯಕ ಸೇರಿದಂತೆ ಇತರರಿದ್ದರು.


ಕಡಕೊಳ ಪಪಂ ಆವರಣದಲ್ಲಿ ಆಯವ್ಯಯ ಕುರಿತ ಪೂರ್ವಭಾವಿ ಸಭೆ ನಡೆಯಿತು.

ಬೆಳೆ ಸಮೀಕ್ಷೆ ದತ್ತಾಂಶಗಳಿಗೆ ತಾಳೆಯಾಗದ 230 ಅರ್ಜಿಗಳು ತಿರಸ್ಕೃತ

ನಂಜನಗೂಡು, ಫೆ.2– ತಾಲೂಕಿನಲ್ಲಿ 2022–23ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆಗಳಿಗೆ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯಡಿ ನೋಂದಣಿಯಾದ ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಬೆಳೆ ಸಮೀಕ್ಷೆ ದತ್ತಾಂಶಗಳಿಗೆ ಹೋಲಿಕೆ ಮಾಡಿ ತಾಳೆಯಾಗದ 230 ರೈತರ ಅರ್ಜಿಗಳನ್ನು ತಿರಸ್ಕರಿಸಲಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ಎಸ್.ಕೆ.ರವಿ ತಿಳಿಸಿದ್ದಾರೆ.

ತಿರಸ್ಕೃತಗೊಂಡ ಅರ್ಜಿ ಮಾಹಿತಿಗಳನ್ನು ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ತಾಲೂಕಿನ ಎಲ್ಲಾ ರೈತ ಸಂಪರ್ಕ ಕೇಂದ್ರ ಹಾಗೂ ಗ್ರಾಪಂಗಳಲ್ಲಿ ಪ್ರದರ್ಶಿಸಲಾಗಿದೆ. ರೈತರು 2022–23 ನೇ ಸಾಲಿನ ಪಹಣಿ (ಆರ್‌ಟಿಸಿ)ಯಲ್ಲಿ ವಿಮೆಗೆ ನೋಂದಾಯಿಸಿದ ಬೆಳೆ ನಮೂದಾಗಿರುವ ದಾಖಲೆ, ವಿಮೆಗೆ ನೋಂದಣಿಯಾದ ಬೆಳೆಯ ಉತ್ಪನ್ನವನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಿದ ರಶೀದಿಯೊಂದಿಗೆ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಮಾಹಿತಿ, ಮಾನವ ಹಕ್ಕು ವೇದಿಕೆ ಅಧ್ಯಕ್ಷರ ಆಯ್ಕೆ

ಹುಣಸೂರು, ಫೆ2– ಮೈಸೂರು ಜಿಲ್ಲಾ ಮಾಹಿತಿ ಹಕ್ಕು ಹಾಗೂ ಮಾನವ ಹಕ್ಕು ಸಂರಕ್ಷಣಾ ವೇದಿಕೆ ಅಧ್ಯಕ್ಷರಾಗಿ ಹುಣಸೂರಿನ ಇಂಟಕ್ ರಾಜು ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಗೌರವಾಧ್ಯಕ್ಷರಾಗಿ ಹಿರಿಯ ಪತ್ರಕರ್ತ ರೇವಣ್ಣ, ಉಪಾಧ್ಯಕ್ಷರಾಗಿ ಆರ್.ಸುರೇಶ್, ಪ್ರಧಾನ ಕಾರ್ಯದರ್ಶಿ ಸತೀಶ್, ಕಾರ್ಯದರ್ಶಿ ಡಿ.ಎನ್.ಬಾಬು, ಸಂಘಟನಾ ಕಾರ್ಯದರ್ಶಿ ಕೆ.ನಂಜುಂಡಪ್ಪ, ಖಜಾಂಚಿ ಸಂತೋಷ್ ಕುಮಾರ್ ಹಾಗೂ 10 ಮಂದಿಯನ್ನು ನಿರ್ದೇಶಕರನ್ನಾಗಿ ಆಯ್ಕೆ ಮಾಡಲಾಗಿದೆ.



ಕಾಡ್ಗಿಚ್ಚು ನಿಯಂತ್ರಣ ಪ್ರತಿಯೊಬ್ಬರ ಆದ್ಯ ಕರ್ತವ್ಯ

ಭೇರ್ಯ, ಫೆ.2– ಕಾಡ್ಗಿಚ್ಚು ನಿಯಂತ್ರಣ ಪ್ರತಿಯೊಬ್ಬರ ಆದ್ಯ ಕರ್ತವ್ಯ ಎಂದು ಉಪ ವಲಯ ಅರಣ್ಯಾಧಿಕಾರಿ ಬಿ.ಎನ್.ಕುಮಾರ್ ತಿಳಿಸಿದರು.

ಗ್ರಾಮದ ಗಾಂಧಿ ವೃತ್ತದಲ್ಲಿ ಅರಣ್ಯ ಇಲಾಖೆಯಿಂದ ಆಯೋಜಿಸಿದ್ದ ಅರಣ್ಯ ಪ್ರದೇಶದಲ್ಲಿ ಬೆಂಕಿ ತಡೆಗಟ್ಟುವ ಅರಿವು ಜಾಗೃತಿ ಜಾಥಾ, ಗೀತಾ ಗಾಯನ, ನೃತ್ಯರೂಪಕ, ಬೀದಿನಾಟಕ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಬೇಸಿಗೆ ಆರಂಭಕ್ಕೂ ಮೊದಲೇ ಕಾಡ್ಗಿಚ್ಚು ತಡೆಗೆ ಕೆ.ಆರ್.ನಗರ ಅರಣ್ಯ ಇಲಾಖೆ ಸಕಲ ಸಿದ್ಧತೆಯಲ್ಲಿ ತೊಡಗಿದೆ. ಇದಕ್ಕಾಗಿ ಅರಣ್ಯ ವ್ಯಾಪ್ತಿಯ ಗ್ರಾಮಗಳಲ್ಲಿ ಬೀದಿ ನಾಟಕಗಳ ಮೂಲಕ ಜನರಿಗೆ ಕಾಡ್ಗಿಚ್ಚು ಬಗ್ಗೆ ಅರಿವು ಮೂಡಿಸಲಾಗುತ್ತಿದೆ ಎಂದರು.

ಬೆಂಕಿರೇಖೆಯನ್ನು ಮುಂಜನಹಳ್ಳಿ ಹಾಗೂ ಭೇರ್ಯ ಗ್ರಾಪಂ ವ್ಯಾಪ್ತಿಯ ಮಠದ ಕಾವಲ್ ರಕ್ಷಿತ ಅರಣ್ಯ ಪ್ರದೇಶದಲ್ಲಿ ಬರುವ ರಸ್ತೆಗಳ ಇಕ್ಕೆಲಗಳಲ್ಲಿ ಹಾಕಲಾಗುತ್ತಿದೆ. ಇದಕ್ಕಾಗಿ ಇಕ್ಕೆಲಗಳ ಪಕ್ಕದಲ್ಲಿ ಗಿಡಗಂಟಿ ತೆರವುಗೊಳಿಸಲಾಗಿದೆ. ಹುಲ್ಲು ಒಣಗಿದ ನಂತರ ಗಿಡಗಂಟಿ ತೆರವುಗೊಳಿಸಿರುವ ಸ್ಥಳಗಳಲ್ಲಿ ಬೆಂಕಿ ರೇಖೆ ಹಾಕಲಾಗುತ್ತಿದೆ. ತಾಲೂಕಿನ ಬೆಟ್ಟಹಳ್ಳಿ, ಹೆಬ್ಸೂರು, ಮಾರಗೌಡನಹಳ್ಳಿ, ಗೇರದಡ, ಕುಪ್ಪಳ್ಳಿ, ಮಳಲಿ, ಮಾದಹಳ್ಳಿ, ಕಗ್ಗಳ, ದಮ್ಮನಹಳ್ಳಿ, ಸಾಲೆಕೊಪ್ಪಲು ವಲಯ ವ್ಯಾಪ್ತಿಯಲ್ಲಿ ಬೆಂಕಿ ರೇಖೆ ನಿರ್ವಹಣೆ ಮಾಡಲಾಗಿದೆ ಎಂದು ತಿಳಿಸಿದರು.

ಅರಣ್ಯ ಪ್ರದೇಶದ ಪಕ್ಕದಲ್ಲಿ ಜಮೀನು ಹೊಂದಿರುವವರು ಗಿಡಗಂಟಿಗಳಿಗೆ ಬೆಂಕಿ ಹಾಕುವ ಮೊದಲು ಮುಂಜಾಗ್ರತಾ ಕ್ರಮ ವಹಿಸಿ ಎಂದು ಮನವಿ ಮಾಡಿದ ಅವರು, ಅರಣ್ಯ ಪ್ರದೇಶದಲ್ಲಿ ಹಾದು ಹೋಗಿರುವ ರಸ್ತೆಯಲ್ಲಿ ಯಾವುದೇ ಕಾರಣಕ್ಕೂ ಬೀಡಿ, ಸಿಗರೆಟ್ ಸೇದಬಾರದು, ಇದು ನಿಮ್ಮ ಕಾಡು. ನೀವು ನಾವು ಸೇರಿ ಕಾಡ್ಗಿಚ್ಚು ತಡೆಯೋಣ. ಪರಿಸರ ಹಾಗೂ ಪ್ರಾಣಿ ಸಂಕುಲ ಉಳಿಸೋಣ ಎಂದು ಮನವಿ ಮಾಡಿದರು. ಇದಕ್ಕೂ ಮೊದಲು ಸರ್ಕಾರಿ ಶಾಲಾ ಮಕ್ಕಳಿಗೆ ಕಾಡ್ಗಿಚ್ಚು ಬಗ್ಗೆ ಮಾಹಿತಿ ನೀಡಿ, ನಿಮ್ಮೂರಿನಲ್ಲಿ ಕಾಡ್ಗಿಚ್ಚು ಬಗ್ಗೆ ಗ್ರಾಮಸ್ಥರಿಗೆ ತಿಳಿಸಿ ಎಂದರು.

ಕಾರ್ಯಕ್ರಮದಲ್ಲಿ ಪಶು ವೈದ್ಯಾಧಿಕಾರಿ ಡಾ.ಹರೀಶ್, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ದೈಹಿಕ ಶಿಕ್ಷಕಿ ಪುಷ್ಪಲತಾ, ಉಪವಲಯ ಅರಣ್ಯಾಧಿಕಾರಿ ಮಂಜುನಾಥ್, ಗಸ್ತು ಅರಣ್ಯಪಾಲಕ ಮಹದೇವ್, ಗಿಡ್ಡೇಗೌಡ, ಕುಮಾರ ನಾಯಕ್, ಸ್ವಾಮಿ.ಕೆ.ಪಿ., ಅರಣ್ಯ ವೀಕ್ಷಕರಾದ ಹೊನ್ನೇಶ್, ಸಾಗರ್, ರಾಕೇಶ್, ಯೋಗೇಶ್ ಇನ್ನಿತರರಿದ್ದರು.


ಭೇರ್ಯದಲ್ಲಿ ಅರಣ್ಯದಲ್ಲಿ ಬೆಂಕಿ ತಡೆಗಟ್ಟುವ ಜಾಗೃತಿ ಜಾಥಾ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಕಾಂಕ್ರೀಟ್, ಡಾಂಬರ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ


ಕೃಷ್ಣಾಪುರದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಅನಿಲ್ ಚಿಕ್ಕಮಾದು ಚಾಲನೆ ನೀಡಿದರು.

ಹೆಚ್.ಡಿ.ಕೋಟೆ, ಫೆ.2– ಪಟ್ಟಣದ ಕೃಷ್ಣಾಪುರ ಗ್ರಾಮದಲ್ಲಿ ತಾರಕ ನೀರಾವರಿ ಇಲಾಖೆಯಿಂದ ಹಮ್ಮಿಕೊಂಡಿದ್ದ 5.60 ಕೋಟಿ ವೆಚ್ಚದ ಕಾಂಕ್ರೀಟ್ ರಸ್ತೆ ಹಾಗೂ ಡಾಂಬರ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಅನಿಲ್ ಚಿಕ್ಕಮಾದು ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಈ ಹಿಂದಿನ ಬಿಜೆಪಿ ಸರ್ಕಾರದಲ್ಲಿ ನೀರಾವರಿ ಮಂತ್ರಿಯಾಗಿದ್ದ ಗೋವಿಂದ ಕಾರಜೋಳ ಅವರು ತಾಲೂಕಿಗೆ ಭೇಟಿ ನೀಡಿದ್ದ ವೇಳೆ ಗ್ರಾಮದ ಸಮಸ್ಯೆಗಳ ಬಗ್ಗೆ ಮನವರಿಕೆ ಮಾಡಿಕೊಟ್ಟಿದ್ದರಿಂದ ಅವರು ಹಣ ಬಿಡುಗಡೆಗೊಳಿಸಿದ್ದರು. ಆದರೆ ಅನುಮೋದನೆ ಸಿಕ್ಕಿರಲಿಲ್ಲ. ನಮ್ಮ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗ ಹಳೇ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡುವುದಿಲ್ಲ ಎಂದು ಹೇಳಿತ್ತು. ಆದರೂ ನಾನು ಮಾಜಿ ಸಚಿವ ಕೋಟೆ ಶಿವಣ್ಣ ಅವರ ಮೇಲಿನ ಅಭಿಮಾನದಿಂದ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಅವರಿಗೆ ಮನವಿ ಮಾಡಿದ್ದರಿಂದ ಹಣ ಬಿಡುಗಡೆಗೆ ಅನುಮೋದನೆ ದೊರೆಯಿತು. ಇದರಿಂದ ಗ್ರಾಮದ ಅಭಿವೃದ್ಧಿಗೆ ಸಹಕಾರಿಯಾಯಿತು ಎಂದರು.

ತಾಲೂಕಿನ ಕೃಷ್ಣಾಪುರ ಸೇರಿದಂತೆ 9 ಗ್ರಾಮಗಳಲ್ಲಿ ಫಲಾನುಭವಿಗಳಿಗೆ ಸರ್ಕಾರದಿಂದ ನಿವೇಶನ ಹಂಚಿಕೆಯಾಗಿದ್ದರೂ, ಹಕ್ಕು ಪತ್ರ ಸಿಕ್ಕಿಲ್ಲ. ಆರ್‌ಟಿಸಿಯಲ್ಲಿ ಮಾಲೀಕರ ಹೆಸರಿದೆ. ಹೀಗಾಗಿ ಮುಂದಿನ ದಿನಗಳಲ್ಲಿ ಹಕ್ಕುಪತ್ರ ನೀಡಲು ಕ್ರಮ ವಹಿಸಲಾಗುವುದು ಎಂದರು.

2015ರಲ್ಲಿ ಪೂರ್ಣಗೊಂಡ ಪಟ್ಟಣದ ಬಾಬು ಜಗಜೀವನ್‌ರಾಂ ಭವನ ಸಾರ್ವಜನಿಕರ ಉಪಯೋಗಕ್ಕೆ ಬಾರದೇ ಹಾಗೇ ಉಳಿದಿದ್ದು, ಕೂಡಲೇ ಸಮುದಾಯದ ಮುಖಂಡರ ಜೊತೆ ಚರ್ಚಿಸಿ ಲೋಕಾರ್ಪಣೆಗೊಳಿಸಲಾಗುವುದು ಎಂದರು.

ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಮಾತನಾಡಿ, ನಾನು ಮಂತ್ರಿಯಾಗಿದ್ದ ವೇಳೆ ಮೈಸೂರು–ಮಾನಂದವಾಡಿ ರಸ್ತೆ, ಹೆಚ್.ಡಿ.ಕೋಟೆ ಪಟ್ಟಣಕ್ಕೆ 5ಕೋಟಿ ವೆಚ್ಚದಲ್ಲಿ ಕಬಿನಿ ಜಲಾಶಯದಿಂದ ಶುದ್ಧ ಕುಡಿಯುವ ನೀರು, ಐಟಿಐ ಕಾಲೇಜು, ವಿದ್ಯುತ್ ಘಟಕ, ಬಸ್ ನಿಲ್ದಾಣ, ತಾರಕ ಏತ ನೀರಾವರಿ ಹಲವು ಅಭಿವೃದ್ಧಿ ಕಾಮಗಾರಿ ಮಾಡಲಾಯಿತು. ಇನ್ನು ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾಗಿದ್ದಾಗ 11 ಸಾವಿರಕ್ಕೂ ಹೆಚ್ಚು ಪೌರ ಕಾರ್ಮಿಕರನ್ನು ಖಾಯಂಗೊಳಿಸಲಾಯಿತು. ಈ ಪೈಕಿ ಕೋಟೆ, ಸರಗೂರು ತಾಲೂಕಿನ 28 ಮಂದಿಯನ್ನು ಖಾಯಂಗೊಳಿಸಲಾಯಿತು ಎಂದರು.

ತಾಲೂಕು ಅಭಿವೃದ್ಧಿಯಾಗಲು ಮಂತ್ರಿ ಪದವಿ ಸಿಗಬೇಕು. 2ನೇ ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಅನಿಲ್ ಚಿಕ್ಕಮಾದು ಅವರಿಗೆ ಮುಂದಿನ ದಿನಗಳಲ್ಲಿ ಮಂತ್ರಿ ಸ್ಥಾನ ಸಿಗಲಿ. ತಾಲೂಕು ಅಭಿವೃದ್ಧಿಯಾಗಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಪುರಸಭಾ ಸದಸ್ಯರಾದ ಶಾಂತಮ್ಮ, ಗೋವಿಂದರಾಜು, ಮಧು ಕುಮಾರ್, ತಾರಕ ಕಾರ್ಯಪಾಲಕ ಅಭಿಯಂತರ ರಾಮೇಗೌಡ, ಅಧಿಕಾರಿಗಳಾದ ಮಂಜುನಾಥ್, ನಟಶೇಖರ ಮೂರ್ತಿ, ಗೌಸಿಯಾ ತಾಜ್, ರಾಮಸ್ವಾಮಿ, ಸುರೇಶ್ ಮುಖಂಡರಾದ ಪರಶಿವ ಮೂರ್ತಿ, ಮಾದಪ್ಪ ನಾಗರಾಜು, ಅಶೋಕ್, ಶಿವಯ್ಯ, ಪ್ರಕಾಶ್, ಪ್ರಸಾದ್, ಸೋಮು, ಚಿಕ್ಕಣ್ಣಮೂರ್ತಿ, ಕರಿ ಯಯ್ಯ, ಮಹೇಂದ್ರ, ಜಯರಾಮನಾಯಕ, ಕರಿಯಯ್ಯ, ಮಹೇಂದ್ರ ಇತರರಿದ್ದರು.

ಹಲ್ಲರೆಯಲ್ಲಿ ಗುಂಪು ಘರ್ಷಣೆ ಪ್ರಕರಣ

ದಲಿತರ ಮೇಲಿನ ಹಲ್ಲೆ ಖಂಡಿಸಿ ಬೃಹತ್ ಪ್ರತಿಭಟನೆ


ಹಲ್ಲರೆ ಗ್ರಾಮದಲ್ಲಿ ಗಲಭೆ ಖಂಡಿಸಿ ದಲಿತ ಸಂಘಟನೆಗಳ ಒಕ್ಕೂಟದಿಂದ ಬೃಹತ್ ಪ್ರತಿಭಟನೆ ನಡೆಯಿತು.

ನಂಜನಗೂಡು, ಫೆ.2– ತಾಲೂಕಿನ ಹಲ್ಲರೆ ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ನಾಮಫಲಕ ಅಳವಡಿಸುವ ವಿಚಾರವಾಗಿ ನಡೆದ ದಲಿತರ ಮೇಲಿನ ಹಲ್ಲೆ ಖಂಡಿಸಿ ದಲಿತ ಸಂಘಟನೆಗಳ ಒಕ್ಕೂಟದಿಂದ ಶುಕ್ರವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಮಿನಿ ವಿಧಾನಸೌಧದ ಎದುರು ತಾಲೂಕಿನ ವಿವಿಧ ಗ್ರಾಮಗಳಿಂದ ಆಗಮಿಸಿದ ವಿವಿಧ ದಲಿತಪರ ಸಂಘಟನೆಗಳ ಕಾರ್ಯಕರ್ತರು, ಮಹಿಳೆಯರು ಸೇರಿದಂತೆ ಸಾವಿರಾರು ಮಂದಿ ತಾಲೂಕು ಆಡಳಿತದ ವೈಫಲ್ಯದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೇ ಘಟನೆಗೆ ಕಾರಣರಾದ ಪೊಲೀಸರು ಹಾಗೂ ಇತರ ಇಲಾಖೆ ಅಧಿಕಾರಿಗಳನ್ನು ಸೇವೆಯಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿದರು.

ಹಲ್ಲರೆಯಲ್ಲಿ ಅಂಬೇಡ್ಕರ್ ನಾಮಫಲಕ ಅಳವಡಿಸಲು ವಿರೋಧ ವ್ಯಕ್ತಪಡಿಸುವ ಜೊತೆಗೆ ಪರಿಶಿಷ್ಟ ಜಾತಿಯವರ ಬಡಾವಣೆಗೆ ನುಗ್ಗಿ ಮಾರಕಾಸ್ತ್ರಗಳಿಂದ ಮಹಿಳೆಯರು, ವೃದ್ಧರ ಮೇಲೂ ಹಲ್ಲೆ ನಡೆಸಿದ್ದಾರೆ. ಬೈಕ್‌ಗಳು ಹಾಗೂ ಮನೆ ಛಾವಣಿಗಳನ್ನು ಹಾಳು ಮಾಡುವ ಮೂಲಕ ವಿಕೃತಿ ಮೆರೆದಿರುವ ಕಿಡಿಗೇಡಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದರು.

ನಾಮಫಲಕ ಅಳವಡಿಸುವ ಸಂಬಂಧ ಗಲಭೆ ನಡೆಯುವ 5 ದಿನಗಳ ಮುನ್ನ ಗ್ರಾಮದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿವ ಬಗ್ಗೆ ಕಂದಾಯ ಇಲಾಖೆಗೆ ಮಾಹಿತಿ ಇದ್ದರೂ ಸಹ ಪರಿಸ್ಥಿತಿ ತಹಬದಿಗೆ ತರುವಲ್ಲಿ ಅಲ್ಲಿನ ಪಿಡಿಓ ಮಹೇಶ್, ನಂಜನಗೂಡು ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಸುನೀಲ್ ಕುಮಾರ್ ವಿಫಲರಾಗಿದ್ದಾರೆ. ಕೂಡಲೇ ಈ ಇಬ್ಬರನ್ನು ಸೇವೆಯಿಂದ ವಜಾಗೊಳಿಸಬೇಕು ಎಂದು ಒತ್ತಾಯಿಸಿದರು. ಘಟನೆಯಿಂದ ಹಲವು ಮನೆಗಳು, ಬೈಕ್‌ಗಳು ಜಖಂಗೊಂಡಿವೆ. ಹಲವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಹೀಗಾಗಿ ಸಂತ್ರಸ್ತ ಕುಟುಂಬಗಳಿಗೆ ಸರ್ಕಾರ ಸೂಕ್ತ ಪರಿಹಾರ ನೀಡಬೇಕು. ಪ್ರಕರಣದಲ್ಲಿ ಅಮಾಯಕರ ಮೇಲೆ ಪ್ರಕರಣ ದಾಖಲಾಗಿದ್ದು, ಅವರನ್ನು ಪ್ರಕರಣದಿಂದ ಕೈ ಬಿಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನಾ ಸ್ಥಳಕ್ಕೆ ಎಡಿಸಿ ಆರ್.ಲೋಕನಾಥ್ ಹಾಗೂ ಎಎಸ್ಪಿ ಡಾ.ನಂದಿನಿ ಆಗಮಿಸಿದರಾದರೂ, ಸ್ಥಳಕ್ಕೆ ಜಿಲ್ಲಾಧಿಕಾರಿಗಳೇ ಖುದ್ದು ಆಗಮಿಸಿ ನಮ್ಮ ಅಹವಾಲು ಆಲಿಸುವಂತೆ ಪ್ರತಿಭಟನಾಕಾರರು ಪಟ್ಟು ಹಿಡಿದರು.

ಎಎಸ್ಪಿ ಡಾ.ನಂದಿನಿ ಮಾತನಾಡಿ, ಹಲ್ಲರೆ ಗಲಭೆಗೆ ಕಾರಣರಾದ ಹಲವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಕಾನೂನು ರೀತಿ ಯಾವೆಲ್ಲಾ ಕ್ರಮ ಜರುಗಿಸಬೇಕು ಎಲ್ಲವನ್ನು ಇಲಾಖೆ ಮಾಡಿದೆ ಎಂದರು.

ಎಡಿಸಿ ಆರ್.ಲೋಕನಾಥ್ ಮಾತನಾಡಿ, ನಿಮ್ಮೆಲ್ಲರ ಬೇಡಿಕೆಗಳನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತರುವುದಾಗಿ ಭರವಸೆ ನೀಡಿದರು. ಇದೇ ವೇಳೆ ನಮ್ಮ ಬೇಡಿಕೆಗಳನ್ನು 3 ದಿನದೊಳಗೆ ಇತ್ಯರ್ಥ ಮಾಡದಿದ್ದರೆ ಹೋರಾಟ ತೀವ್ರಗೊಳಿಸುವುದಾಗಿ ಪ್ರತಿಭಟನಾಕಾರರು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ದಲಿತ ಸಂಘಟನೆಗಳ ಒಕ್ಕೂಟದ ಮುಖಂಡರಾದ ಮಲ್ಲೇಶ್, ನಾರಾಯಣ, ಸುರೇಶ್, ಬಸವಣ್ಣ, ಮೈಸೂರಿನ ಮಾಜಿ ಮೇಯರ್ ಪುರುಷೋತ್ತಮ್, ತಾಪಂ ಮಾಜಿ ಅಧ್ಯಕ್ಷ ಬಿ.ಎಂ.ನಾಗೇಶ್ ರಾಜ್, ಬಿ.ಎಸ್.ರಾಮು, ಹುರಾ ಚಂದ್ರು, ಚಿಕ್ಕಣ್ಣ, ರಾಜೇಶ್, ನಾಗೇಂದ್ರ, ರಾಮಣ್ಣ, ಸಂದೇಶ್ ಸೇರಿದಂತೆ ಸಾವಿರಾರು ಮಂದಿ ಇದ್ದರು.


ಸಾಲಿಗ್ರಾಮ ತಾಲೂಕಿನ ಹೊಸಕೋಟೆ ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ಪ್ರೌಢಶಾಲೆಯಲ್ಲಿ ಮಡಿವಾಳ ಮಾಚಿದೇವರ ಜಯಂತಿ ಆಚರಿಸಲಾಯಿತು. ಈ ವೇಳೆ ಮುಖ್ಯಶಿಕ್ಷಕ ಯತೀಶ್, ರೇವಣ್ಣ, ಕೃಷ್ಣ, ಶಂಕರ್, ತುಳಸಿ, ಎಂ.ಶಿವಣ್ಣ, ಮಹದೇವಸ್ವಾಮಿ, ಮಹದೇವಪ್ಪ, ಮಹೇಶ್, ದೈಹಿಕ ಶಿಕ್ಷಕ ಶಿವಣ್ಣ ಇತರರಿದ್ದರು.

ಜಾರ್ಖಂಡ್‌ನ 12ನೇ ಮುಖ್ಯಮಂತ್ರಿಯಾಗಿ ಚಂಪೈ ಸೊರೆನ್ ಪ್ರಮಾಣವಚನ

ರಾಂಚಿ, ಫೆ.2– ಜಾರ್ಖಂಡ್‌ನ ನೂತನ ಮುಖ್ಯಮಂತ್ರಿಯಾಗಿ ಜಾರ್ಖಂಡ್ ಮುಕ್ತಿ ಮೋರ್ಚಾ ಪಕ್ಷದ ನಾಯಕ ಚಂಪೈ ಸೊರೆನ್ ಅವರು ಶುಕ್ರವಾರ ಪ್ರಮಾಣವಚನ ಸ್ವೀಕರಿಸಿದ್ದಾರೆ.



ರಾಂಚಿಯ ರಾಜಭವನದ ದರ್ಬಾರ್ ಹಾಲ್ ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮ ನಡೆದಿದ್ದು, ಜಾರ್ಖಂಡ್ ರಾಜ್ಯಪಾಲ ಸಿಪಿ ರಾಧಾಕೃಷ್ಣನ್ ಅವರು ಚಂಪೈ ಸೊರೆನ್ ಅವರಿಗೆ ಪ್ರಮಾಣ ವಚನ ಬೋಧಿಸಿದ್ದಾರೆ.

ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೆನ್ ಮೇಲೆ ಭೂಹಗರಣ ಹಾಗೂ ಅಕ್ರಮ ಹಣ ವರ್ಗಾವಣೆ ಆರೋಪವಿದ್ದು, ಅವರು ಈಗಾಗಲೇ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಈ ಕಾರಣದಿಂದ ಚಂಪೈ ಸೊರೆನ್ ಅವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಆಯ್ಕೆ ಮಾಡಲಾಗಿದೆ.

ಗುರುವಾರ ಚಂಪೈ ಸೊರೇನ್ ಅವರನ್ನು ಭೇಟಿ ಮಾಡಿದ ಕೆಲವೇ ಗಂಟೆಗಳ ನಂತರ ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ ಅವರು ಪ್ರಮಾಣವಚನ ಸ್ವೀಕರಿಸಲು ಆಹ್ವಾನ ಕೊಟ್ಟಿದ್ದರು. ರಾಜ್ಯದಲ್ಲಿ 18 ಗಂಟೆಗಳ ಕಾಲ ಯಾವುದೇ ಸರ್ಕಾರವಿಲ್ಲ. ಗೊಂದಲದ ಪರಿಸ್ಥಿತಿ ಇದೆ. ಸಾಂವಿಧಾನಿಕ ಮುಖ್ಯಸ್ಥರಾಗಿರುವ ನೀವು ಶೀಘ್ರದಲ್ಲೇ ಜನಪ್ರಿಯ ಸರ್ಕಾರ ರಚನೆಗೆ ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ ಎಂದು ನಾವು ನಿರೀಕ್ಷಿಸುತ್ತೇವೆ ಎಂದು ರಾಜ್ಯಪಾಲರು ಹೇಳಿದ್ದರು. ಜಾರ್ಖಂಡ್‌ನ ಆಡಳಿತಾರೂಢ ಜೆಎಂಎಂ–ಕಾಂಗ್ರೆಸ್–ಆರ್‌ಜೆಡಿ ಮೈತ್ರಿಕೂಟವು 81 ಸದಸ್ಯರ ವಿಧಾನಸಭೆಯಲ್ಲಿ 47 ಶಾಸಕರನ್ನು ಹೊಂದಿದೆ. ಬಹುಮತಕ್ಕೆ 41 ಸ್ಥಾನಗಳ ಅಗತ್ಯವಿದೆ. ಪ್ರಸ್ತುತ 43 ಶಾಸಕರು ಚಂಪೈ ಸೊರೇನ್ ಅವರನ್ನು ಬೆಂಬಲಿಸಿದ್ದರು.

ಪ್ರಧಾನಿ ಮೋದಿ ದೈವಿಕ ಶಕ್ತಿಯ ಸಂಕೇತ: ಕಾಂಗ್ರೆಸ್ ನಾಯಕ

ನವದೆಹಲಿ, ಫೆ.2– ಪ್ರಧಾನಿ ನರೇಂದ್ರ ಮೋದಿ ಅವರು ದೈವಿಕ ಶಕ್ತಿಯ ಸಂಕೇತ ಎಂದು ಕಾಂಗ್ರೆಸ್ ನಾಯಕ ಆಚಾರ್ಯ ಪ್ರಮೋದ್ ಕೃಷ್ಣಂ ಅವರು ಶುಕ್ರವಾರ ಹೇಳಿದ್ದಾರೆ.



ಇಂದು ಪ್ರಧಾನಿ ಮೋದಿ ಅವರನ್ನು ಭೇಟಿ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಆಚಾರ್ಯ ಪ್ರಮೋದ್ ಕೃಷ್ಣಂ ಅವರು, ನಾನು ಪ್ರಧಾನಿ ಮೋದಿಯನ್ನು ಮೊದಲ ಬಾರಿಗೆ ಭೇಟಿ ಮಾಡಿದ್ದೇನೆ. ಪ್ರಧಾನಿಗೆ ಖಂಡಿತವಾಗಿಯೂ ದೈವಿಕ ಶಕ್ತಿಯ ಆಶೀರ್ವಾದವಿದೆ ಎಂದು ಹೇಳಲು ನನಗೆ ಯಾವುದೇ ಹಿಂಜರಿಕೆಯಿಲ್ಲ. ಭೇಟಿಯಾದ ನಂತರ ನನಗೆ ಅನಿಸಿದ್ದನ್ನು ಹೇಳುತ್ತೇನೆ. ಅವರು ದೈವಿಕ ಶಕ್ತಿಯ ಸಂಕೇತ ಎಂದು ನಾನು ಹೇಳಬಲ್ಲೆ ಎಂದಿದ್ದಾರೆ. ನಾನು ಶ್ರೀ ಕಲ್ಕಿ ಧಾಮದ ಶಿಲಾನ್ಯಾಸ ಸಮಾರಂಭಕ್ಕೆ ಪ್ರಧಾನಿ ಮೋದಿ ಅವರಿಗೆ ಆಹ್ವಾನ ನೀಡಲು ಹೋಗಿದ್ದೆ. ಅವರನ್ನು ಭೇಟಿ ಮಾಡಿದ್ದಕ್ಕೆ ನನಗೆ ಸಂತೋಷವಾಗಿದೆ ಮತ್ತು ನನ್ನ ಆಹ್ವಾನವನ್ನು ಪ್ರಧಾನಿ ಮೋದಿ ಸ್ವೀಕರಿಸಿದ್ದಕ್ಕೆ ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಆಚಾರ್ಯ ಪ್ರಮೋದ್ ಕೃಷ್ಣಂ ಅವರು ಹೇಳಿದ್ದಾರೆ.

ಇಸಿಸ್ 'ಟ್ವಿಟರ್' ಖಾತೆ ನಿರ್ವಹಣೆ: ಯುವಕರ ನೇಮಕ ಮಾಡುತ್ತಿದ್ದ ಉಗ್ರನಿಗೆ 10 ವರ್ಷ ಜೈಲು ಶಿಕ್ಷೆ

ಬೆಂಗಳೂರು, ಫೆ.2– ಇಸ್ಲಾಮಿಕ್ ಸ್ಟೇಟ್ ಆಫ್ ಇರಾಕ್ ಅಂಡ್ ಸಿರಿಯಾ (ಐಸಿಸ್) ಟ್ವಿಟರ್ ಖಾತೆ ನಿರ್ವಾಹಕ ಉಗ್ರ ಮೆಹ್ದಿ ಮಸ್ರೂರ್ ಬಿಸ್ವಾಸ್‌ಗೆ 10 ವರ್ಷ ಜೈಲು ಶಿಕ್ಷೆ ವಿಧಿಸಿ ಎನ್‌ಐಎ ವಿಶೇಷ ನ್ಯಾಯಾಲಯ ತೀರ್ಪು ನೀಡಿದೆ.



ಇಸಿಸ್ ನಿಷೇಧಿತ ಭಯೋತ್ಪಾದಕ ಸಂಘಟನೆಯ ಅಬೂಬಕ್ಕರ್ ಬಾಗ್ದಾದಿ ಎಂಬಾತನ ನೇತೃತ್ವದಲ್ಲಿ ಸಿರಿಯಾ ದೇಶದಲ್ಲಿ ಉಗ್ರ ಚಟುವಟಿಕೆ ಗಳು ನಡೆಯುತ್ತಿದ್ದವು. ಇದೇ ವೇಳೆ ಪಶ್ಚಿಮ ಬಂಗಾಳ ಮೂಲದ ಮೆಹದಿ, ಜಾಲಹಳ್ಳಿಯ ಸಿದ್ಧಾರ್ಥನಗರದಲ್ಲಿನ ಅಪಾರ್ಟ್‌ಮೆಂಟ್‌ನಲ್ಲಿ ನೆಲೆಸಿದ್ದ. ಇಲ್ಲಿಂದಲೇ 2012ರಲ್ಲಿ ಐಸಿಸ್ ಪರವಾಗಿ 'ಶಮ್ಮಿವಿಟ್ನೆಸ್ ಟ್ವಿಟರ್' ಅಕೌಂಟ್ ತೆರೆದು ಉಗ್ರರು ನಡೆಸುತ್ತಿದ್ದ ರಕ್ತಪಾತ, ಉಗ್ರವಾದವನ್ನು ಟ್ವೀಟ್ ಮಾಡುವ ಮೂಲಕ ಇಸಿಸ್ ಸಂಘಟನೆಗೆ ಸೇರುವಂತೆ ಪ್ರಚೋದನೆ ನೀಡುತ್ತಿದ್ದ.

ಈ ಬಗ್ಗೆ ಇಂಗ್ಲೆಡ್ ಮಿಡಿಯಾ ಸುದ್ದಿ ಪ್ರಸಾರ ಮಾಡಿತ್ತು. ಇದರ ಮೇರೆಗೆ ಎಚ್ಚೆತ್ತ ಸಿಸಿಬಿ ಅಧಿಕಾರಿಗಳು, 2014 ಡಿ.13ರಂದು ಜಾಲಹಳ್ಳಿ ಸಿದ್ಧಾರ್ಥನಗರದಲ್ಲಿ ಮೆಹ್ದಿಯನ್ನು ಬಂಧಿಸಿದ್ದರು.

ಗಂಗಮ್ಮನಗುಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖಾಧಿಕಾರಿ ಎಸಿಪಿ ಎಂ.ಕೆ. ತಮ್ಮಯ್ಯ, ತನಿಖೆ ನಡೆಸಿತ್ತು. ಕೃತ್ಯಕ್ಕೆ ಬಳಸಿದ್ದ ಲ್ಯಾಪ್‌ಟಾಪ್, ಎಲೆಕ್ಟ್ರಾನಿಕ್ ವಸ್ತುಗಳು ಮತ್ತು ಅಮೆರಿಕಾದ ಟ್ವಿಟರ್ ಸಂಸ್ಥೆಯಿಂದ ದಾಖಲೆ ಸಂಗ್ರಹಿಸಿ ಕೋರ್ಟ್‌ಗೆ 37 ಸಾವಿರ ಪುಟಗಳ ಆರೋಪಪಟ್ಟಿ ಸಲ್ಲಿಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಬಿಕ್ಕಣ್ಣನವರ್, ಪೊಲೀಸರ ಪರವಾಗಿ ವಾದ ಮಂಡಿಸಿದ್ದರು. ಅಲ್ಲದೆ, ಭಯೋತ್ಪಾದಕ ನಿಗ್ರಹ ದಳ(ಎಟಿಸಿ) ಎಸಿಪಿ ಬಿ.ಆರ್. ವೇಣುಗೋಪಾಲ್ ಅವರ ತಂಡ, ನ್ಯಾಯಾಲಯದಲ್ಲಿ ಪ್ರಕರಣದ ಮೇಲ್ವಿಚಾರಣೆ ವಹಿಸಿತ್ತು. ಸುದೀರ್ಘ ವಾದ–ಪ್ರತಿವಾದ ಆಲಿಸಿದ ಎನ್‌ಐಎ ವಿಶೇಷ ನ್ಯಾಯಾಲಯ, ಅಪರಾಧಿ ಮೆಹದಿಗೆ 10 ವರ್ಷ ಜೈಲು ಶಿಕ್ಷೆ ಮತ್ತು 2.15 ಲಕ್ಷ ರೂ. ದಂಡ ವಿಧಿಸಿ ತೀರ್ಪು ನೀಡಿದೆ.

ಉಗ್ರ ಮೆಹದಿ ಮೆಸ್ರೂಸ್ ಬಿಸ್ವಾಸ್, ಬಂಧನಕ್ಕೆ ಒಳಗಾದ ದಿನದಿಂದ ಪರಪ್ಪನ ಅಗ್ರಹಾರದಲ್ಲಿಯೇ ಸೆರೆಯಾಗಿದ್ದಾನೆ. ಇದೀಗ ಕೋರ್ಟ್ ಅಂತಿಮ ತೀರ್ಪು ಪ್ರಕಟಿಸಿದ್ದು, 10 ವರ್ಷ ಜೈಲು ಶಿಕ್ಷೆ ವಿಧಿಸಿದೆ. ಈಗಾಗಲೆ 9 ವರ್ಷ 1 ತಿಂಗಳು ಜೈಲು ವಾಸ ಅನುಭವಿಸಿದ್ದಾನೆ. ಉಳಿದ 11 ತಿಂಗಳು ಬಾಕಿ ಇರುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಸಾಯಿರಂಗ ವಿದ್ಯಾ ಸಂಸ್ಥೆ (ರಿ.)

(ಉಚಿತ ಕಿವುಡು ಗಂಡು ಮಕ್ಕಳ ವಸತಿ ಶಾಲೆ) ಬನ್ನಿಮಂಟಪ, ಮೈಸೂರು ಇದರ ಆಶ್ರಯದಲ್ಲಿ ನಡೆಯುತ್ತಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗೆ ಅರ್ಹ ಶಿಕ್ಷಕಿ/ಕ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಹೆಸರು	ವಿದ್ಯಾರ್ಹತೆ	ಹುದ್ದೆಗಳ ಸಂಖ್ಯೆ
01	ವೃತ್ತಿ ಶಿಕ್ಷಕರು (ಕಂಪ್ಯೂಟರ್,ಚಿತ್ರಕಲೆ, ಇತ್ಯಾದಿ)	ಪಿ.ಯು.ಸಿ. ವೃತ್ತಿ ಪರ ಸರ್ಟಿಫಿಕೇಟ್	02
02	ಕರಕುಶಲ ಶಿಕ್ಷಕರು	ಪಿ.ಯು.ಸಿ. ವೃತ್ತಿ ಪರ ಸರ್ಟಿಫಿಕೇಟ್	01

ಮೇಲ್ಕಂಡ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ದಿನಾಂಕ – 20.02.2024 ಸಂಜೆ 5.00 ಒಳಗೆ ಇ-ಮೇಲ್ ಅಥವಾ ಅಂಚೆ ಮೂಲಕ ಮುಖ್ಯೋಪಾಧ್ಯಾಯರು ಸಾಯಿರಂಗ ವಿದ್ಯಾಸಂಸ್ಥೆ (ರಿ.) ಕಿವುಡು ಗಂಡು ಮಕ್ಕಳ ವಸತಿ ಶಾಲೆ ನಂ–764/ಎ, 'ಐ' ಬಡಾವಣೆ, ಬನ್ನಿಮಂಟಪ, ಮೈಸೂರು ಇವರಿಗೆ ಅರ್ಜಿಗಳನ್ನು ಸಲ್ಲಿಸಬಹುದು.

ಇಮೇಲ್: sairangadeafschool@gmail.com ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 9342112736

ಪುರಸಭಾ ಕಾರ್ಯಾಲಯ, ತಿ.ನರಸೀಪುರ
ಮೈಸೂರು ಜಿಲ್ಲೆ – 571124
Email: ka.tnarasipura.tmc@gmail.com Ph: 08227-261232
Website : www.tnarasipuratown.mrc.gov.in
ಸಂ :ಪುಸ:ತಿನಪು/ತಾಂ.ಶಾ /ಕೋ–05/2023–24 ದಿನಾಂಕ: 31.01.2024

ಕೊಟೇಷನ್ ಪ್ರಕಟಣೆ

ಈ ಮೂಲಕ (01)ಬೀದಿ ದೀಪಗಳ ದುರಸ್ಥಿಗಾರರು/ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ 10 ಮೀಟರ್‌ವರೆಗೆ ವಿಸ್ತರಿಸಬಹುದಾದ ಏಣಿಯನ್ನು ಜೋಡಿಸಿರುವ ಸ್ವಂತ ಲಘು ಮೋಟಾರು ವಾಹನವನ್ನು ಹೊಂದಿದ್ದು, ತಿ.ನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ ಕೆಟ್ಟಿರುವ ಬೀದಿ ದೀಪಗಳನ್ನು ಎಲ್ಲಾ ತೆರಿಗೆಗಳು ಸೇರಿ ದುರಸ್ಥಿಗೊಳಪಟ್ಟಿರುವ ಬಿಡಿ ಸಾಮಾಗ್ರಿಗಳನ್ನು ಅಳವಡಿಸಿ ಒಂದು ಬಾರಿಗೆ ದುರಸ್ಥಿಪಡಿಸಿ ಚಾಲನೆಗೊಳಿಸಲು (02) ತಿ.ನರಸೀಪುರ ಪುರಸಭಾ ವ್ಯಾಪ್ತಿಯ ಹೊಸತಿರುಮಕೂಡಲು ಸರ್ಕಲ್ ಟಿ.ಎಸ್.ಮಾದಪ್ಪರವರ ಮನೆ ಹತ್ತಿರ ವಿದ್ಯುತ್ ಪರಿವರ್ತಕ ಹಾಗು ವಿದ್ಯುತ್‌ಕಂಬಗಳನ್ನು ಸ್ಥಳಾಂತರಿಸಲು (03) ತಿ.ನರಸೀಪುರ ಪುರಸಭೆಗೆ ಸೇರಿದ ಖಾಸಗಿ ಬಸ್‌ನಿಲ್ದಾಣದ ಅಂಗಡಿ ಮಳಿಗೆ ಸಂಖ್ಯೆ 01,02,03 ಗಳಿಗೆ ವಿದ್ಯುತ್‌ಸಂಪರ್ಕ ಕಲ್ಪಿಸಲು ದರಪಟ್ಟಿಯನ್ನು ಆಹ್ವಾನಿಸಲಾಗಿದ್ದು ಆಸಕ್ತಿಯುಳ್ಳ ದುರಸ್ಥಿಗಾರರು/ಗುತ್ತಿಗೆದಾರರು ತಮ್ಮ ಅತ್ಯಂತ ಕಡಿಮೆ ದರಗಳನ್ನು ಮುಚ್ಚಿದ ಲಕೋಟೆಯಲ್ಲಿ ದಿ: 07.02.2024 ಸಂಜೆ 4:30 ಗಂಟೆಗೆ ಈ ಕಛೇರಿಗೆ ಸಲ್ಲಿಸುವುದು. ತಡವಾಗಿ ಬಂದ ಕೊಟೇಷನ್‌ಗಳನ್ನು ತಿರಸ್ಕರಿಸಲಾಗುವುದು.

ಸಹಿ/– ಮುಖ್ಯಾಧಿಕಾರಿ, ಪುರಸಭೆ, ತಿ.ನರಸೀಪುರ.

DIPR/DDMYS/KSMCA/994/2023-24

ಜಿಲ್ಲಾ ಪಂಚಾಯತ್ ಕಾರ್ಯಾಲಯ
ಜಿಲ್ಲಾ ಆಡಳಿತ ಭವನ, ನೆಲ ಮಹಡಿ, ಚಾಮರಾಜನಗರ ಜಿಲ್ಲೆ–571313
e-mail : ceochanagnr@gmall.com | ದೂರವಾಣಿ ಸಂಖ್ಯೆ: 08226–224013 | ಫ್ಯಾಕ್ಸ್: 08226–224014

ಸಂ.ಜಿಪಂಚಾ:ಆಡಳಿತ(5):09:2023–24 (E34500) ದಿನಾಂಕ: 02.02.2024

Providing Services of ಆಡಳಿತ ಸಹಾಯಕ, ಲೆಕ್ಕಸಹಾಯಕ, ಗ್ರೂಪ್–ಡಿ/ಸೆಕ್ಯೂರಿಟಿ/ಹೌಸ್ ಕೀಪಿಂಗ್ E-Procurement ಮೂಲಕ ಪಡೆಯುವ ಬಗ್ಗೆ.

E-PROCUREMENT TENDER NOTIFICATION
(Website: www.kppp,karnataka.gov.in)

ಚಾಮರಾಜನಗರ ಜಿಲ್ಲಾ ಪಂಚಾಯಿತಿಯ ಜಿಲ್ಲಾ ಸಂಪನ್ಮೂಲಕ ಕೇಂದ್ರಕ್ಕೆ ಆಡಳಿತ ಸಹಾಯಕ, ಲೆಕ್ಕಸಹಾಯಕ, ಗ್ರೂಪ್–ಡಿ/ಸೆಕ್ಯೂರಿಟಿ/ಹೌಸ್ ಕೀಪಿಂಗ್ ಹುದ್ದೆಗಳ ಅವಶ್ಯಕತೆ ಇದ್ದು, ಸದರಿ ಹುದ್ದೆಗಳಿಗೆ ಅರ್ಹತೆಯುಳ್ಳ ಆಡಳಿತ ಸಹಾಯಕ, ಲೆಕ್ಕಸಹಾಯಕ, ಗ್ರೂಪ್–ಡಿ/ಸೆಕ್ಯೂರಿಟಿ/ಹೌಸ್ ಕೀಪಿಂಗ್ ರವರ ಸೇವೆಯನ್ನು ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸಂಸ್ಥೆಯಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಮತ್ತು ಪಾರದರ್ಶಕ ಅಧಿನಿಯಮ (KTPP) 1999/2000ರ ಪ್ರಕಾರ E-Procurement ಟೆಂಡರ್ ಮೂಲಕ ಪಡೆಯುವ ಅವಶ್ಯಕತೆ ಇರುತ್ತದೆ. ಸದರಿಯವರುಗಳ ಸೇವೆಯನ್ನು ಸಹ E-Procurement ಟೆಂಡರ್ ಮೂಲಕ ಪಡೆಯಲು ಉದ್ದೇಶಿಸಿದೆ.

1	ಟೆಂಡರ್ ಪ್ರಕಟಣೆ ದಿನಾಂಕ.	ಸಂ:ಜಿಪಂಚಾ: ಆಡಳಿತ(5):09:2023–24(ಇ–34500) ದಿನಾಂಕ: 02–02–2024
2	ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ.	ದಿನಾಂಕ:05–02–2024
3	ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ.	ದಿನಾಂಕ:19–02–2024 ಸಂಜೆ 5.00 ಗಂಟೆಗೆ
4	ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ.	ಜಿಲ್ಲಾ ಪಂಚಾಯತ್ ಕಾರ್ಯಾಲಯ, ಚಾಮರಾಜನಗರ ದಿನಾಂಕ:22–02–2024 ಬೆಳಿಗ್ಗೆ 11.00 ಗಂಟೆಗೆ
5	ಆರ್ಥಿಕ ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ.	ಕೊಠಡಿ ಸಂಖ್ಯೆ:14, ಜಿಲ್ಲಾ ಪಂಚಾಯತ್ ಕಾರ್ಯಾಲಯ, ಚಾಮರಾಜನಗರ ದಿನಾಂಕ:26–02–2024, ಬೆಳಿಗ್ಗೆ 10.30 ಗಂಟೆಗೆ
6	ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ.	ರೂ.33,500/–
7	ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ.	ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ಚಾಮರಾಜನಗರ. ದೂರವಾಣಿ ಸಂಖ್ಯೆ: 08226–224015

ಸಂ:ವಾಸಾಸಂಇ:ಚಾನಗರ:369:2023–24

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಾಮರಾಜನಗರ

ಸಾರ್ವಜನಿಕ ಪ್ರಕಟಣೆಗಾಗಿ

ಏನೆಂದರೆ, ಈ ಕೆಳಕಂಡ ವಾದಿ ನನ್ನ ಕಕ್ಷಿದಾರರಾದ ಶ್ರೀಮತಿ ಎ.ಜಿ. ಕಾವೇರಿ, ಇವರ ಇರ್ಯಾದೇ ಮೇರೆಗೆ, ಅವರು ಈಗಾಗಲೇ ಗೌರವಾನ್ವಿತ 4ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಲಯ ಮೈಸೂರು ಅಸಲು ದಾವಾ ಸಂಖ್ಯೆ : 1614/2023

ವಾದಿಗಳು: 1. ಶ್ರೀಮತಿ ದೇವಮ್ಮ ಕೋಂ ಲೇಟ್ ಲಿಂಗಯ್ಯ ಸುಮಾರು ವಯಸ್ಸು 66 ವರ್ಷ, 2. ಶ್ರೀ ಡಿ.ಎಲ್ ಸುರೇಶ್ ಬಿನ್ ಲೇಟ್ ಲಿಂಗಯ್ಯ ಸುಮಾರು ವಯಸ್ಸು 46 ವರ್ಷ, 3. ಶ್ರೀಮತಿ. ಎಲ್. ಮಂಗಳ ಬಿನ್ ಲೇಟ್ ಲಿಂಗಯ್ಯ ಸುಮಾರು ವಯಸ್ಸು 42 ವರ್ಷ, 4. ಶ್ರೀ ಡಿ.ಎಲ್ ಸತೀಶ್ ಬಿನ್ ಲೇಟ್ ಲಿಂಗಯ್ಯ ಸುಮಾರು ವಯಸ್ಸು 40 ವರ್ಷ. ಎಲ್ಲರ ವಾಸ : ನಂ. 1457, 1ನೇ ಕ್ರಾಸ್, ಶಿವನಂಜಪ್ಪ ಲೇಔಟ್ ಮಂಡ್ಯ ಟೌನ್ & ಜಿಲ್ಲೆ.

ವಿರುದ್ಧ

ಪ್ರತಿವಾದಿಗಳು : 1. ಶ್ರೀ ಜಯರಾಮ ಬಿನ್ ಜವರೇಗೌಡ ಸುಮಾರು ವಯಸ್ಸು 53 ವರ್ಷ ವಾಸ: ಮರಟಿಕ್ಯಾತನಹಳ್ಳಿ ಗ್ರಾಮ, ಜಯಪುರ ಹೋಬಳಿ, ಮೈಸೂರು ತಾಲ್ಲೂಕು.
2. ಶ್ರೀ ಪ್ರದೀಪ್ ಕುಮಾರ್, ಪಾರ್ಟನರ್ ಆಫ್ ಎಂ./ಎಸ್ ವ್ಯಾಲ್ಯೂ ಸ್ಪೇಸ್ ಇನ್ಫ್ರಾ ಪ್ರೋಜೆಕ್ಟ್ ಎಲ್.ಎಲ್.ಪಿ. ಲಿಮಿಟೆಡ್ ಆಫೀಸ್ ನಂ.502, 14ನೇ ಮೇನ್, 3ನೇ ಬ್ಲಾಕ್, ಕೋರಮಂಗಲ, ಬೆಂಗಳೂರು.
3. ಶ್ರೀ ಮೊಗಣ್ಣೇಗೌಡ ಬಿನ್ ಲೇಟ್ ಅಂಕೇಗೌಡ ಸುಮಾರು ವಯಸ್ಸು 70 ವರ್ಷ
4. ಶ್ರೀ ಮಹದೇವು ಬಿನ್ ಮೊಗಣ್ಣೇಗೌಡ ಸುಮಾರು ವಯಸ್ಸು 50 ವರ್ಷ
5. ಶ್ರೀ ಮಲ್ಲೇಶ್ ಬಿನ್ ಮೊಗಣ್ಣೇಗೌಡ ಸುಮಾರು ವಯಸ್ಸು 48 ವರ್ಷ
6. ಶ್ರೀ ರಾಜೇಂದ್ರ ಬಿನ್ ಮೊಗಣ್ಣೇಗೌಡ ಸುಮಾರು ವಯಸ್ಸು 46 ವರ್ಷ
7. ಶ್ರೀ ಚನ್ನೇಗೌಡ ಬಿನ್ ಲೇಟ್ ಅಂಕೇಗೌಡ ಸುಮಾರು ವಯಸ್ಸು 65 ವರ್ಷ
8. ಶ್ರೀಮತಿ ಜಯಮ್ಮ ಕೋಂ ಚನ್ನೇಗೌಡ ಸುಮಾರು ವಯಸ್ಸು 60 ವರ್ಷ
9. ಶ್ರೀಮತಿ ಮಹಾಲಕ್ಷ್ಮೀ ಬಿನ್ ಚನ್ನೇಗೌಡ ಸುಮಾರು ವಯಸ್ಸು 40 ವರ್ಷ
10. ಶ್ರೀಮತಿ ಮಂಗಳಗೌರಿ ಬಿನ್ ಚನ್ನೇಗೌಡ ಸುಮಾರು ವಯಸ್ಸು 38 ವರ್ಷ
11. ಶ್ರೀ ಹೆಚ್.ಸಿ. ಮಹದೇವ ಬಿನ್ ಚನ್ನೇಗೌಡ ಸುಮಾರು ವಯಸ್ಸು 36 ವರ್ಷ, 3 ರಿಂದ 11 ರವರೆಗೆ ವಾಸ: ಮರಟಿಕ್ಯಾತನಹಳ್ಳಿ ಗ್ರಾಮ ಜಯಪುರ ಹೋಬಳಿ, ಮೈಸೂರು ತಾಲ್ಲೂಕು.

ರಂತೆ ಮೈಸೂರು ತಾಲ್ಲೂಕು. ಜಯಪುರ ಹೋಬಳಿ, ಮರಟಿಕ್ಯಾತನಹಳ್ಳಿ ಗ್ರಾಮದ ಸರ್ವೆ.ನಂ.28/2 ರಲ್ಲಿರುವ 'ಬಿ' ಷೆಡ್ಯೂಲ್ ನಿವೇಶನಕ್ಕೆ ಸಂಬಂಧಪಟ್ಟ ಹಾಗೆ 4ನೇ ಹೆಚ್ಚುವರಿ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 1614/2023 ರಂತೆ ಮಾಲೀಕರಾಗಿ ಘೋಷಿಸುವಂತೆ ಹಾಗೂ 1ನೇ ಪ್ರತಿವಾದಿ ಜಯರಾಮ ರವರ ದಿನಾಂಕ 13/7/2016 ರ ನೋಂದಾಯಿತ ಕ್ರಯ ಪತ್ರವನ್ನು ರದ್ದು ಮಾಡುವಂತೆ ಮೇಲ್ಕಂಡ ದಾವೆಯನ್ನು ಹೂಡಿದ್ದು ಸದರಿ ದಾವೆಯಲ್ಲಿ 'ಬಿ' ಷೆಡ್ಯೂಲ್ ಸ್ವತ್ತನ್ನು ಯಾರಿಗೂ ಮಾರಾಟ ಮಾಡದಂತೆ ಹಾಗು ಸದರಿ ನಿವೇಶನದಲ್ಲಿ ಯಾವುದೇ ರಸ್ತೆ, ಚರಂಡಿ, ಲೇಟ್ ಔಟ್ ಮಾಡದಂತೆ ಹಾಗೂ 'ಬಿ' ಷೆಡ್ಯೂಲ್ ಸ್ವತ್ತಿನ ನೈಜತೆಯಂತೆ ಬದಲಾವಣೆ ಮಾಡದಂತೆ ದಿನಾಂಕ 5/12/2023 ರಂದು ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವಾಗಿರುತ್ತದೆ. ಹಾಗೂ ಸದರಿ ದಾವೆಯೂ ದಿನಾಂಕ 1/3/2024 ರಂದು ಇದ್ದು ಆದರೆ ಇತ್ತೀಚಿಗೆ ಕೆಲವು ಅಪರಿಚಿತರು ಷೆಡ್ಯೂಲ್ 'ಬಿ' ಸ್ವತ್ತಿಗೆ ಸಂಬಂಧಿಸಿದಂತೆ ಬಂದು ಸದರಿ ನಿವೇಶನ ಮಾರಾಟಕ್ಕೆ ಇದೆ' ಎಂದು ಬಂದು ಕೆಲವು ದಲ್ಲಾಳಿಗಳ ಮುಖಾಂತರ ಆಗಿದ್ದಾಗ್ಯೆ ಭೇಟಿ ನೀಡಿ ವಿಚಾರಿಸುತ್ತಿರುವುದು ನನ್ನ ಕಕ್ಷಿದಾರರ ಗಮನಕ್ಕೆ ಬಂದಿದ್ದು, ಆದ್ದರಿಂದ ಸದರಿ ನ್ಯಾಯಾಲಯದ ಆದೇಶದ ಬಗ್ಗೆ ಈ ಸಾರ್ವಜನಿಕ ಪ್ರಕಟಣೆ ಹೊರಡಿಸುತ್ತಿದ್ದು ಸದರಿ ಬಿ ಷೆಡ್ಯೂಲ್ ಸ್ವತ್ತಿನ ಸಂಬಂಧ ಮೇಲ್ಕಂಡ ದಾವೆಯಲ್ಲಿ ಹೊರಡಿಸಿರುವ ಆದೇಶವು ಮುಗಿಯುವವರೆಗೂ ಸಾರ್ವಜನಿಕರು ಷೆಡ್ಯೂಲ್ ಬಿ ಸ್ವತ್ತಿನ ಸಂಬಂಧ ಯಾವುದೇ ರೀತಿಯ ಕ್ರಯ ಇತ್ಯಾದಿ ವರ್ಗಾವಣೆ ಸಂಬಂಧ ಯಾವುದೇ ವ್ಯವಹಾರವನ್ನು ಮಾಡಬಾರದೆಂದು ಈ ಮೂಲಕ ನನ್ನ ಕಕ್ಷಿದಾರರು ಸಾರ್ವಜನಿಕರ ತಿಳುವಳಿಕೆಗೆ ತರುತಿದ್ದು ಹಾಗೊಂದು ವೇಳೆ ಈ ಪ್ರಕಟಣೆ ಹೊರಡಿಸಿದ ನಂತರವೂ ಯಾರಾದರೂ ಸದರಿ ಬಿ ಷೆಡ್ಯೂಲ್ ಸ್ವತ್ತಿನ ಸಂಬಂಧ ವ್ಯವಹರಿಸಿದರೆ ಸದರಿ ವ್ಯವಹಾರವೂ ನನ್ನ ಕಕ್ಷಿದಾರರಿಗೆ ಬದ್ಧಪಡಿಸವುದಿಲ್ಲವೆಂತಲೂ ಮತ್ತು ಅಂತಹವರವನ್ನೂ ಮೇಲ್ಕಂಡ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲಾಗುತ್ತದೆ ಎಂದು ಈ ಪ್ರಕಟಣೆ ಮೂಲಕ ತಿಳಿಸುತ್ತದೆ.

ಎ ಷೆಡ್ಯೂಲ್ ಸ್ವತ್ತುಗಳು:

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮರಟೀಕ್ಯಾತನಹಳ್ಳಿ ಗ್ರಾಮದಲ್ಲಿರುವ ಅಭಿವೃದ್ಧಿಯಾಗದೇ ಇರುವ ಭೂ ಪರಿವರ್ತನೆ ಹೊಂದಿರುವ ಸರ್ವೆ ನಂ. 28/2 ರಲ್ಲಿ 1 ಎಕರೆ 28 ಗುಂಟೆ ವಿಸ್ತೀರ್ಣದ ಸ್ವತ್ತಿಗೆ ಚೆಕ್ ಬಂದಿ : ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸರ್ವೆ ನಂ 28/1 ರ ಸ್ವತ್ತು, ಉತ್ತರಕ್ಕೆ : ಸರ್ವೆ ನಂ 27 ರ ಸ್ವತ್ತು, ದಕ್ಷಿಣಕ್ಕೆ : ಸರ್ವೆ ನಂ 9 & 28/3ರ ಸ್ವತ್ತು.

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮರಟೀಕ್ಯಾತನಹಳ್ಳಿ ಗ್ರಾಮದಲ್ಲಿರುವ ಅಭಿವೃದ್ಧಿಯಾಗದೇ ಇರುವ ಭೂ ಪರಿವರ್ತನೆ ಹೊಂದಿರುವ ಸರ್ವೆ.ನಂ. 28/3 ರಲ್ಲಿ 28 ಗುಂಟೆ ವಿಸ್ತೀರ್ಣದ ಸ್ವತ್ತಿಗೆ ಚೆಕ್ ಬಂದಿ : ಪೂರ್ವಕ್ಕೆ: ಸರ್ವೆ ನಂ 29, ಪಶ್ಚಿಮಕ್ಕೆ: ಸರ್ವೆ ನಂ 28/4 ರ ಸ್ವತ್ತು, ಉತ್ತರಕ್ಕೆ : ಸರ್ವೆ ನಂ 28/2 ರ ಸ್ವತ್ತು, ದಕ್ಷಿಣಕ್ಕೆ: ಸರ್ವೆ ನಂ 9ರ ಸ್ವತ್ತು.

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮರಟೀಕ್ಯಾತನಹಳ್ಳಿ ಗ್ರಾಮದಲ್ಲಿರುವ ಅಭಿವೃದ್ಧಿಯಾಗದೇ ಇರುವ ಭೂ ಪರಿವರ್ತನೆ ಹೊಂದಿರುವ ಸರ್ವೆ.ನಂ. 28/4 ರಲ್ಲಿ 27 ಗುಂಟೆ ವಿಸ್ತೀರ್ಣದ ಸ್ವತ್ತಿಗೆ ಚೆಕ್ ಬಂದಿ : ಪೂರ್ವಕ್ಕೆ: ಸರ್ವೆ ನಂ 28/3 ಸ್ವತ್ತು, ಪಶ್ಚಿಮಕ್ಕೆ : ಸರ್ವೆ ನಂ 20 ರ ಸ್ವತ್ತು, ಉತ್ತರಕ್ಕೆ : ಸರ್ವೆ ನಂ 28/1 ರ ಸ್ವತ್ತು, ದಕ್ಷಿಣಕ್ಕೆ : ಸರ್ವೆ ನಂ 9ರ ಸ್ವತ್ತು

ಬಿ ಷೆಡ್ಯೂಲ್ ಸ್ವತ್ತು:

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮರಟೀಕ್ಯಾತನಹಳ್ಳಿ ಗ್ರಾಮದಲ್ಲಿರುವ ಜಂಜರ್ ನಂ 764, ಒಂದು ಚದರ ಶೀಟ್ ಮನೆಯೂ ಸರ್ವೆ.ನಂ. 28/2 ರಲ್ಲಿ 2.2 ಗುಂಟೆ ಅಂದರೆ 35 ಗುಂಟೆ ಪೈಕಿ 60X40 ಒಂದು ಚದರ ಅಡಿಯಲ್ಲಿ ಎ.ಸಿ. ಶೀಟ್ ಮನೆಯ ಸ್ವತ್ತಿಗೆ ಚೆಕ್ ಬಂದಿ : ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಸೈಟ್ ನಂ.29, ಉತ್ತರಕ್ಕೆ : ಸೈಟ್ ನಂ. 27, ದಕ್ಷಿಣಕ್ಕೆ: ಸೈಟ್ ನಂ 25

ಸಹಿ/– ಶ್ರೀ ಶರತ್, ವಕೀಲರು, #645, ಮೊದಲನೇ ಮಹಡಿ, ನಾರಾಯಣ ಶಾಸ್ತ್ರಿ ರಸ್ತೆ, ಸೀತಾವಿಲಾಸ ಛತ್ರದ ಹಿಂಬದಿ, ಮೈಸೂರು, ಮೊ: 8217685002